MOTION

Re: Statewide Satyagraha in Mysore State as a consequence of the proposal to set up a One Man Commission in respect of Mysore-Maharashtra Border.

2-30 P. M.

†ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಮಾನ್ಯ ಸಭಾಪತಿಯವರೇ, ಈ ಸಭೆಯ ಮುಂದೆ ಮಂಡಿಸಿರತಕ್ಕಂತಹ ನಿರ್ಣಯ ಈ ರೀತಿ ಇಂಗ್ಲಿಷನಲ್ಲಿ ಇದೆ.

"That the situation arising out of the State-wide satyagraha launched voluntarily by the people of Mysore State in respect of the Mysore-Maharashtra Border as a consequence of the proposal to set up a one man Commission, be taken into consideration".

Mr. SPEAKER.—Motion moved:

"That the situation arising out of the Statewide satyagraha launched voluntarily by the people of Mysore State in respect of the Mysore-Maharashtra Border as a consequence of the proposal to set up a one man Commission, be taken into consideration".

† ಶ್ರೀ ಎಸ್. ಶಿವಪ್ಪ.—ಸಭಾಪತಿಯವರೇ, ಈ ಮೈಸೂರು ಸಂಸ್ಥಾನಾದ್ಯಂತ ಸ್ವಯಂ ಪ್ರೇರಿತವಾಗಿ ನಡೆದಂತಹ ಜನತೆಯ ಮಹಾಚಳವಳಿ ರೂಪದ ಸತ್ಯಾಗ್ರಹವು ಇದೇ ಜೂನ್ ತಿಂಗಳ 10ನೇ ತಾರೀಖಿನಂದು ಬೆಳಗಾಂ ಜಿಲ್ಲೆಯಲ್ಲಿ ಪ್ರಾರಂಭವಾದುದು ನಮ್ಮ ಇಡೀ ಮೈಸೂರು ದೇಶ ವೆಲ್ಲವನ್ನೂ ಕೂಡ ಆವರಿಸಿತು. ಈ ಒಂದು ಮಹಾ ಸತ್ಯಾಗ್ರಹ ಚಳವಳಿಯು ನಮ್ಮ ದೇಶದಲ್ಲಿ ಇಷ್ಟು ಅಗಾಧ ರೂಪದಲ್ಲಿ ನಡೆದುದು ಬಹುಶಃ ಸ್ವಾತಂತ್ರ್ಯ ಸಂಗ್ರಾಮದ ನಂತರ ಇದೇ ಅತೀ ದೊಡ್ಡದು ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಈ ಚಳವಳಿಯು ಹುಟ್ಟಿ ನಡೆದಂತಹ ದೊಡ್ಡ ಸ್ವರೂಪವನ್ನು ನೋಡಿದರೆ ಇದು ಒಂದು ರೀತಿಯಲ್ಲಿ ಹೇಳುವುದಾದರೆ, ನಮ್ಮ ದೇಶದ ಒಂದು ದುರದೃಷ್ಟಕರ ಸಂಗತಿಯೂ ಹೌದು. ಏಕೆಂದರೆ, ಹತ್ತು ವರ್ಷಗಳ ಕಾಲ ಮಲಗಿದ್ದ ಸಂಗತಿಯನ್ನು ಬಡಿದೆಬ್ಬಿಸಿದ ಕಾರಣ ಮೈಸೂರು ದೇಶದ ಜನತೆಯ ಕುತೂಹಲವನ್ನು ಕೆಣಕಿ ದಂತಾಗಿ ಇದು ಒಂದು ಉಗ್ರ ರೂಪವನ್ನು ತಾಳಿತು. ಇದು ಒಂದು ದುರದೃಷ್ಟಕರವಾದ ಸಮಾ ಚಾರವೂ ಹೌದು, ಅದೇ ರೀತಿಯಲ್ಲಿ ಒಂದು ಸಂತೋಷಕರವಾದ ಸಮಾಚಾರವೂ ಹೌದು. ಈ ವಿಚಾರದಲ್ಲಿ ಮೈಸೂರು ದೇಶದಲ್ಲಿ ಮೊದಲಿಂದಲೂ ಬಂದ ಜಡತನವನ್ನು ಹೋಗಲಾಡಿಸಿ ಒಂದು ನವಶಕ್ತಿಯ ಸ್ವರೂಪವನ್ನು ತಂದೊಡ್ಡಿದೆ. ಇದು ಒಂದು ಸಂತೋಷದ ವಿಷಯವೇ ಸರಿ. ನಾನು ಮೊದಲೇ ಹೇಳಿದ ಹಾಗೆ ಈ ದುರದೃಷ್ಟಕರವಾದ ಗೊಂದಲಕ್ಕೆ ಕಾರಣ ಮೈಸೂರು ಮಹರಾಷ್ಟ್ರ ಗಡಿಯ ವಿಚಾರದಲ್ಲಿ ನೇಮಕ ಮಾಡಿದಂತಹ ಏಕ ಸದಸ್ಯ ಆಯೋಗದ ಸೂಚನೆ. ಪ್ರಪ್ರಥಮವಾಗಿ ಭಾರತದ ಪ್ರಧಾನಿಗಳು ಔರಂಗಾಬಾದಿಗೆ ಬಂದಾಗ ನಡೆದಂತಹ ವಿಚಾರ. ಅವರು ಯಾವುದೋ ವಿಚಾರವಾಗಿ, ಅಲ್ಲಿಯ ಅನಾವೃಷ್ಟಿಯನ್ನು ಮತ್ತು ಆಹಾರದ ವಿಚಾರವನ್ನು ಪರಿಶೀಲನೆ ಮಾಡ ಬೇಕೆಂದು ಅಲ್ಲಿಗೆ ಬಂದಾಗ ಮಹಾರಾಷ್ಟ್ರದ ಜನತೆಯನ್ನು ಮೆಚ್ಚಿಸಬೇಕೆಂದು, ಏನೋ ಅವರು ಆತುರಾತುರವಾಗಿ ಒಂದು ಹೇಳಿಕೆಯನ್ನು ಮಾಡಿದರು. ಅದೇನೆಂದರೆ, ಮೈಸೂರು ಮಹಾರಾಷ್ಟ್ರ ಗಡಿಯನ್ನು ಪರಿಶೀಲಿಸಲು ಶೀಘ್ರವಾಗಿ ಒಂದು ರೀತಿಯ ಕಮಿಶನನ್ನು ನೇಮಕ ಮಾಡುತ್ತೇವೆಂದು. ಇದನ್ನು ಚರ್ಚೆ ಮಾಡುತ್ತೇವೆಂದು ಹೇಳಿ ಪ್ರಧಾನಿಯವರು ಒಂದು ಸೂಚನೆಯನ್ನು ಮಾಡಿದರು. ಈ ಒಂದು ಕುತೂಹಲಕಾರಿಯಾದ ವಿಷಯ ಮೈಸೂರು ಜನತೆಯ ಮುಂದೆ ಬಂದು ನಿಂತಿತು. ಈ ಗಡಿ ಪ್ರಶ್ನೆಯು 1956ನೇ ಇಸವಿಯಲ್ಲಿ ಸ್ಟೇಟ್ಸ್ ರಿಆರ್ಗನೈಸೇಶನ್ ಆಕ್ಟ್ ಪ್ರಕಾರ ನಮ್ಮ ಭಾರತಾ ದ್ಯಂತ ಎಲ್ಲಾ ಗಡಿಗಳ ವಿಂಗಡಣೆಯಾಗಿ 14 ಸಂಸ್ಥಾನಗಳು ಏರ್ಪಟ್ಟವು. ಇಂತಹ ಒಂದು ಸಮಸ್ಯೆ ಭಾರತ ದೇಶದಲ್ಲಿ ಮೂಡಿದಾಗ ಇಲ್ಲಿ ಅನೇಕ ರೀತಿಯ ಭಾಷೆಗಳ ಪ್ರಶ್ನೆಗಳು ಬಂದುವು. ಭಾರ ತದ ಪ್ರಧಾನಿಯವರು ಈ ವಿಷಯದ ಬಗ್ಗೆ ಪಾರ್ಲಿಮೆಂಟಿನಲ್ಲಿ ಪ್ರಸ್ತಾಪ ಮಾಡಿದ್ದಾರೆ. ಭಾಷಾ ವಾರು ಪ್ರಾಂತ್ಯಗಳು ರಚನೆಯಾದ ಮೇಲೆ ದೇಶದಲ್ಲಿ ಎಂತಹ ಪರಿಣಾಮ ಉಂಟಾಗಬಹುದೆಂದು

(ಶ್ರೀ ಎಸ್. ಶಿವಪ್ಪ)

ತಿಳಿದು ಅವರು ಹೇಳಿದರು, ಭಾಷಾವಾರು ಪ್ರಾಂತ್ಯಗಳು ರಚನೆಯಾದ ಮೇಲೆ ದ್ವೇಷಾಸೂಯೆ ಮಾಯವಾಗಬಹುದು, ಜನತೆಯಲ್ಲಿ ಪ್ರೀತಿ ಒಕ್ಕೂಟವು ಬೆಳೆಯಬಹುದು. ದ್ವೇಶ ಮತ್ತು ಭಾಷೆ ಭಾಷೆಯು ದ್ವೇಶ ಉಂಟಾದರೆ, ಅದರಿಂದ ದೊಡ್ಡ ದುಷ್ಪರಿಣಾಮವಾಗುತ್ತದೆಂದು ಹೇಳಿದ್ದಾರೆ. ಇಂತಹ ಒಂದು ಪ್ರಶ್ನೆಯನ್ನು ಇಡೀ ಭಾರದಲ್ಲಿ ಸ್ಟೇಟ್ ರಿಆರಗ್ನನೈಸೇಶನ್ ಕಮಿಶನ್ ನೇಮಕವಾದ ಮೇಲೆ, ಚಳವಳಿ ನಡೆದ ಮೇಲೆ 1956ನೇ ಇಸವಿಯಲ್ಲಿ ನಮ್ಮ ಕರ್ಣಾಟಕ ರಾಜ್ಯದ ರಚನೆಯಾಯ್ತು. ಆಗ ಬೊಂಬಾಯಿ ಕರ್ಣಾಟಕದ ಪ್ರದೇಶ, ಹೈದರಾಬಾದ್ ಕರ್ಣಾಟಕ ಪ್ರದೇಶ, ಮದ್ರಾಸ್ ಕರ್ಣಾಟಕ ಪ್ರದೇಶ, ಮತ್ತು ಕೊಡಗು, ಹೀಗೆ ನಾಲ್ಕುಕಡೆಗಳಿಂದಲೂ ಬಂದು ಹಳೆಯ ಮೈಸೂರಿಗೆ ಸೇರಿ, ಈ ಪ್ರದೇಶ ಒಂದು ಮೈಸೂರು ಪ್ರಾಂತ್ಯವಾಯ್ತು. 1956ನೇ ಇಸವಿಯಲ್ಲಿ ಸಂಪೂರ್ಣ ಕರ್ಣಾಟಕವಾದಾಗ, ಇಲ್ಲಿಯ ಜನತೆಯು, ಈ ದೇಶವನ್ನು ಅಚ್ಚುಕಟ್ಟಾಗಿ ಇಟ್ಟು ಕಾಪಾಡಿಕೊಂಡು ಬಂದು ಒಂದು ಸುಖೀರಾಜ್ಯವನ್ನು ಸ್ಥಾಪನೆಮಾಡಬೇಕೆಂದು ಆಕಾಂಕ್ಷೆಯನ್ನು ಇಟ್ಟುಕೊಂಡಿದ್ದರು. ಆ ಆಕಾಂಕ್ಷೆಯು 10 ವರ್ಷ ನಡೆದುಕೊಂಡು ಬಂದಮೇಲೆ, ಇವತ್ತಿನ ದಿವಸ ದೇಶದಲ್ಲಿ ಕೆಲವು ಗಡಿಗಳನ್ನು ಪುನಃ ಮಾರ್ಪಾಡು ಮಾಡತಕ್ಕ ವಿಚಾರ ಏನಿದೆ, ಅದು ಇಂದು ಈ ರಾಜ್ಯದ ಜನತೆಯ ಮನಸ್ಸನ್ನು ಕೆದಕಿದೆ ಮತ್ತು ಶಾಂತಿಪ್ರಿಯರಾದ ಮೈಸೂರಿನ ಜನರಲ್ಲಿ ಆಕ್ರೋಶವನ್ನು ಉಂಟುಮಾಡಿದೆ.

ಇದಕ್ಕೆ ಕಾರಣ ಇಷ್ಟೆ: ಬೊಂಬಾಯಿನಲ್ಲಿ ನಡೆದಂಥ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನ; ಆ ತೀರ್ಮಾನದ ಪ್ರಕಾರ ಮೈಸೂರು-ಮಹಾರಾಷ್ಟ್ರ ಪ್ರಾಂತ್ಯಗಳ ಗಡಿ ವಿವಾದವನ್ನು ತೀರ್ಮಾನಮಾಡುವುದಕ್ಕೆ ಏಕಸದಸ್ಯತ್ವದ ಆಯೋಗ ವೊಂದನ್ನು ರಚಿಸಬೇಕೆಂದಿತ್ತು. ಆ ತೀರ್ಮಾನವನ್ನು ಕೈಕೊಂಡ ತಕ್ಷಣ ಮೈಸೂರು ದೇಶದೊಳಗೆ ಒಂದೊಂದು ಊರಿನಲ್ಲಿಯೂ ಹಾಹಾಕಾರವೆದ್ದಿತು; ಕಾಡುಕಿಚ್ಚಿನಂತೆ ಎಲ್ಲ ಕಡೆಗೂ ಹರಡಿತು. ಜನತೆಯ ಮನಸ್ಸು ಕಲಕಲ್ಪಟ್ಟು ಅವರ ಆಕ್ರೋಶಕ್ಕೆ ಮೇರೆಯಿಲ್ಲದೆ ಅಲ್ಲಕಲ್ಲೋಲದ ಪರಿಸ್ಥಿತಿ ದೇಶಾದ್ಯಂತ ಉಂಟಾಯಿತು. ದೇಶದ ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿ ಯಾವ ಉಗ್ರ ಸತ್ಯಾಗ್ರಹ ನಡೆಯಿತು, ಅದಕ್ಕಿಂತ ಮೀರಿದ ರೀತಿಯಲ್ಲಿ ಶಿಸ್ತು ತಪ್ಪಿ, ಕಲುಷಿತ ವಾತವರಣ ತಲೆದೋರುವಂತೆ ಮಾಡಿತು, ಈ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ತೀರ್ಮಾನ. ಈ ರೀತಿ ನಮ್ಮ ಪ್ರಾಂತ್ಯದ ಗಡಿಯ ಬಗ್ಗೆ ಪುನರ್ ತೀರ್ಮಾನ ಕೊಡುತ್ತೇವೆ. ಆಯಕಟ್ಟನ್ನು, ಗಡಿಯನ್ನು ಬದಲಾಯಿಸುತ್ತೇವೆ ಎಂದು ಮಾಡಿದ ತೀರ್ಮಾನಕ್ಕೆ ದೇಶದ ಜನತೆ ಏಕಕಂಠದಿಂದ ಎದ್ದು ಪ್ರತಿಕ್ರಿಯೆ ತೋರಿಸಿದೆ. ಈ ರೀತಿಯ ತೀರ್ಮಾನ ತೆಗೆದುಕೊಳ್ಳುವುದು ರಾಜ್ಯಾಂಗ ಬದ್ಧವಾಗಿತ್ತೇ, ಅವರಿಗೆ ಹಾಗೆ ಸೂಚನೆ ಕೊಡುವ ಹಕ್ಕಿತ್ತೇ ಎಂಬ ಪ್ರಶ್ನೆ ಬೇರೆ ಇತ್ತು. ಅದೇನೆ ಇರಲಿ, ಈ ರೀತಿಯ ಉಲ್ಬಣ ಪರಿಸ್ಥಿತಿಯನ್ನುಂಟುಮಾಡುವುದಕ್ಕೆ ಕಾರಣವಾದ ಈ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ನಿರ್ಣಯದ ಹಿನ್ನೆಲೆಯೇನಿರಬಹುದೆಂಬುದನ್ನು ಸ್ವಲ್ಪ ವಿಮರ್ಶಿಸಿ ನೋಡಿ. ಗಡಿ ಪ್ರಶ್ನೆಯೆಂಬುದು ನಮ್ಮ ಭಾರತ ದೇಶದಲ್ಲಿ ಮೈಸೂರು-ಮಹಾರಾಷ್ಟ್ರಕ್ಕೆ ಮಾತ್ರದ್ದಲ್ಲ. ಭಾರತದಲ್ಲಿರುವ 16 ರಾಜ್ಯಗಳಲ್ಲಿ ಒಂದಕ್ಕೊಂದಕ್ಕೂ ಈ ಪ್ರಶ್ನೆ ಇಲ್ಲದೆ ಇಲ್ಲ. ಹೀಗಿರುವ ಸಮಯದಲ್ಲಿ ಈ ವರ್ಕಿಂಗ್ ಕಮಿಟಿಯವರು ಏಕೈಕವಾಗಿ ಮೈಸೂರು-ಮಹಾರಾಷ್ಟ್ರ ಗಡಿಯ ವಿಚಾರವನ್ನು ಮಾತ್ರ ಏಕೆ ತೆಗೆದುಕೊಂಡರು? ಅದರಲ್ಲೂ ಏಕಸದಸ್ಯತ್ವದ ಆಯೋಗವೇ ಆಗಬೇಕೆಂದು ಏಕೆ ಮಾಡಿದರು? ಇದಕ್ಕೆ ಕಾರಣ ವಾದರೂ ಏನೆಂಬುದನ್ನು ನಾನು ಕೇಳಬಯಸುತ್ತೇನೆ. ನನ್ನ ದೃಷ್ಟಿಯಲ್ಲಿ, ಇದೆಲ್ಲಾ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಕೆಲವರ ಪ್ರಭಾವಕ್ಕೊಳಗಾಗಿರುವುದಲ್ಲದೆ ಮತ್ತೇನು! ಭಾರತದಲ್ಲಿ ಮಿಕ್ಕ ಎಲ್ಲ ಪ್ರಾಂತ್ಯಗಳ ಸಮಸ್ಯೆಯನ್ನೂ ಗಣನೆಗೆ ತೆಗೆದುಕೊಳ್ಳದೆ ಮೈಸೂರು-ಮಹಾರಾಷ್ಟ್ರದ ಗಡಿಯನ್ನು ಮಾತ್ರ ತೆಗೆದುಕೊಂಡಿರುವುದು ಇಷ್ಟೆಲ್ಲಾ ಅನುಮಾನಕ್ಕೆ ಅವಕಾಶ ಕೊಟ್ಟಿದೆ. ಮಹಾರಾಷ್ಟ್ರದಲ್ಲೇ ವಿದರ್ಭದ ಪ್ರಶ್ನೆಯಿಲ್ಲವೇ! ಅದನ್ನೇಕೆ ತೆಗೆದುಕೊಳ್ಳಲಿಲ್ಲ! ಈ ರೀತಿ ಒಬ್ಬರ ಪ್ರಭಾವಕ್ಕೊಳಗಾಗಿ ಇಂಥ ಸಮಸ್ಯೆಗಳನ್ನೆಬ್ಬಿಸಿದ್ದು ದುರದೃಷ್ಟವೇ ಸರಿ. ಇಷ್ಟೆಲ್ಲ ಆಂದೋಳನವಾದಮೇಲೆಯೂ ಇದನ್ನು ಅಲ್ಲಿಗೇ ಬಿಡದೆ, ಇತ್ತೀಚೆಗೆ ಇನ್ನೊಂದು ನಿರ್ಣಯಮಾಡಿ, ಎರಡೂ ರಾಜ್ಯಗಳ ಮುಖ್ಯ ಮಂತ್ರಿಗಳು ಸೇರಿ ಈ ಆಯೋಗಕ್ಕೆ ಕೊಡಬಹುದಾದ Terms of Reference ಗಳನ್ನು ಕೊಡಬೇಕೆಂದು ನಿರ್ಧಾರ ಕೈಗೊಂಡಿದ್ದಾರೆ. ವರ್ಕಿಂಗ್ ಕಮಿಟಿಯವರು ಈ ತೀರ್ಮಾನ ಮಾಡುವಾಗಲೂ ಇತರ ಎಲ್ಲಾ ಪ್ರಾಂತ್ಯಗಳಿಗೂ ಅನ್ವಯಿಸುವಂತೆ ಏಕೆ ತೀರ್ಮಾನ ಮಾಡಲಿಲ್ಲ? ಇಂದು ಭಾರತದೇಶದಲ್ಲಿ ಇನ್ನೂ ಅನೇಕ ಬೃಹತ್ ಸಮಸ್ಯೆಗಳಿರುವ ಕಾಲದಲ್ಲಿ—ಉತ್ತರದಲ್ಲಿ ಒಂದು ರೀತಿ ಪಶ್ಚಿಮದಲ್ಲಿ ಒಂದು ರೀತಿ ಭೀಕರ ಪರಿಸ್ಥಿತಿಗಳಿರುವಾಗ ಈ ಅಂತರ ರಾಜ್ಯ ಗಡಿಯ ಪ್ರಶ್ನೆಯನ್ನು ಮೊದಲು ತೆಗೆದುಕೊಳ್ಳುವುದರ ಆತುರವೇನಿದೆ? ದೇಶದಲ್ಲಿ ಗಂಡಾಂತರವಿದ್ದು ಅನ್ನದ ಕ್ಷಾಮದ ದವಡೆಯಲ್ಲಿ ಸಿಕ್ಕಿ ಕೋಟ್ಯಾಂತರ ಜನ ಒದ್ದಾಡುತ್ತಿರುವ ಘೋರ ಪರಿಸ್ಥಿತಿಯಿರುವ ಈ

ಕಾಲದಲ್ಲಿ ವೇಲಾಗಿ ಗಡಿಯು ರಕ್ಷಣೆಯೆಂಬ ಅಗಾದ ಜವಾಬ್ದಾರಿ ನಮ್ಮ ಮೇಲಿದ್ದು ಚೀನಿಯರು, ಪಾಕಿಸ್ತಾನದವರು ನಮ್ಮ ರಾಷ್ಟ್ರವನ್ನೇ ಕಬಳಿಸುವ ಸನ್ನಾಹದಲ್ಲಿರುವಾಗ, ಈ ಮೈಸೂರು ಮಹಾರಾಷ್ಟ್ರದ ಗಡಿಯ ಪ್ರಶ್ನೆಗೇಕೆ ಈ ತೀವ್ರತೆ ಎಂದು ನಾನು ಕೇಳುತ್ತೇನೆ—ಚೀನೀಯರು ಅನೇಕ ಸಹಸ್ರ ಮೈಲಿಗಳನ್ನೇ ನಮ್ಮಿಂದ ಆಕ್ರಮಣ ಮಾಡಿದ್ದಾರಂತೆ. ಅವರನ್ನು ಹೊಡೆದೋಡಿಸು ವುದಕ್ಕೆ ತಕ್ಕ ಶಕ್ತಿ ಸಾಮರ್ಥ್ಯವನ್ನು ಹೊಂದಿಸಿಕೊಳ್ಳುವುದು ನಮ್ಮ ಪ್ರಥಮ ಗುರಿಯಾಗಬೇಕಾಗಿದೆ. ದೇಶದ ಸರ್ವ ಸಾಧನ ಸವಲತ್ತುಗಳನ್ನೂ ಅತ್ತ ಕಡೆಗೆ ಹವಣಿಸಿಕೊಳ್ಳುವುದರಲ್ಲಿ ನಾವು ಉದ್ಯುಕ್ತ ಬೇಕಾಗಿರುವಾಗ ಈ ಚಿಕ್ಕಪುಟ್ಟ ಸಮಸ್ಯೆಗಳನ್ನು ಕೊನೆಗಾಣಿಸುತ್ತೇನೆಂದು ಹೊರಡುವುದರ ಉದ್ದೇಶ ಎಷ್ಟು ಮಾತ್ರವೂ ಸಾಧುವಾಗಿರಲಾರದು.

ಈ ನಿರ್ಣಯ ಕೈಕೊಂಡಿರುವುದು ಎಷ್ಟರಮಟ್ಟಿಗೆ ಕಾನೂನಿಗೆ ಬಾಹಿರವಾಗಿದೆಯೆಂಬುದನ್ನೂ ನಾನು ತಿಳಿಸ ಬಯಸುತ್ತೇನೆ. ಸ್ಟೇಟ್ಸ್‌ರೀ-ಆರ್ಗನೈಸೇಷನ್ ಆದ ಕಾಲದಲ್ಲಿಯೇ, ಇಂಥ ಪ್ರಶ್ನೆ ಗಳು ಬಂದಾಗ ಅದನ್ನು ಯಾವ ರೀತಿ ಇತ್ಯರ್ಥಮಾಡಬೇಕೆಂಬ ಬಗ್ಗೆ ಸೂಚನೆಯನ್ನೂ ಕೂಡ ಅದೇ ಆಕ್ಟಿನಲ್ಲಿ ನಮೂದಿಸಿದ್ದಾರೆ. ಅದು ಆಕ್ಟಿನ 21ನೆಯ ಸೆಕ್ಷನ್ನಿನಲ್ಲಿ ಉಲ್ಲೇಖಿತವಾಗಿದೆ. ಈ ರೀತಿ ಪ್ರಾಂತ್ಯ ಪ್ರಾಂತ್ಯಗಳ ಮಧ್ಯೆ ಸಣ್ಣ ಸಣ್ಣ ವ್ಯತ್ಯಾಸಗಳಿದ್ದರೆ, ಅದನ್ನು ಜೋನಲ್ ಕೌನ್ಸಿಲ್ ಮುಂದಿಟ್ಟು ಇತ್ಯರ್ಥಮಾಡಿಕೊಳ್ಳಬೇಕೆಂದಿದೆ. ಆ ಪ್ರಕಾರ ಈ ವಿಷಯದಲ್ಲಿ ಜೋನಲ್ ಕಾನ್ಸಿಲ್ ನಲ್ಲಿ ಏನಾದರೂ ತೀರ್ಮಾನವಾಗಿದೆಯೇ? ಆಗಿದ್ದರೆ, ಆ ತೀರ್ಮಾನವೇನು, ಅದರ ಪರಿಣಾಮ ವೇನು ಎಂದು ನಾನು ಕೇಳುತ್ತೇನೆ. ಮಹಾರಾಷ್ಟ್ರದವರೂ ಜೋನಲ್ ಕಾನ್ಸಿಲ್‌ಗೆ ದೂರೇನಾ ದರೂ ಇದುವರೆಗೆ ಕೊಟ್ಟಿದ್ದರೇ? ಅಲ್ಲಿ ತೀರ್ಮಾನ ವೇನಾದರೂ ಆಗಿದ್ದರೂ, ಅದೇ ಆಖೈರು ತೀರ್ಮಾನವಲ್ಲವೆಂದು ಶ್ರೀ ಗೋವಿಂದ ವಲ್ಲಭ ಪಂತರು ತಮ್ಮ ಭಾಷಣದಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಲೋಕಸಭೆಯಲ್ಲಿ ಅವರು ಹೇಳಿದ ಮಾತುಗಳು ಗಮನಾರ್ಹವಾಗಿವೆ.

Sri Govind Vallabh Pant has stated that the Zonal Councils had been authorised to deal with these boundary matters pertaining to readjustment and hoped that when the States were formed the Zonal Councils would endeavour to resolve the disputes, as after all, the good-will of neighbours was of greater value than a patch of territory. He also said that it should be possible for the Zonal Councils to set these minor matters right.

ಈ ರೀತಿ ಜೋನಲ್ ಕೌನ್ಸಿಲ್‌ಗಳಲ್ಲಿ ಭ್ರಾತೃಭಾವದಿಂದ ತಮ್ಮ ತಮ್ಮ ಗಡಿವಿವಾದ ಸಮಸ್ಯೆ ಗಳನ್ನು ತೀರ್ಮಾನಿಸಿಕೊಳ್ಳಬೇಕೆಂದು ಹೇಳಿದ್ದಾರಲ್ಲದೆ, ಅವರು ಮಾಡಿಕೊಂಡ ತೀರ್ಮಾನವೂ ಕೂಡ ಪಾರ್ಲಿಮೆಂಟಿನ ಮುಂದೆ ಹೋಗಿ ಅವರು ಆಖೈರು ತೀರ್ಮಾನ ಕೈಕೊಳ್ಳಬೇಕೆಂದು ತಿಳಿಸಿದ್ದಾರೆ. ಅವರು ಬೇಕಿದ್ದರೆ ಏಕ ಸದಸ್ಯತ್ವ ಆಯೋಗವೋ, ಮತ್ತೊಂದೋ ಮಾಡಬಹುದು. ಆ ವಿಧಾನ ವನ್ನೆಲ್ಲಾ ಬಿಟ್ಟು ಇಂದು ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರಿಗೆ ತಾವೇ ಒಂದು ತೀರ್ಮಾನ ತೆಗೆದು ಕೊಳ್ಳುವ ಹಕ್ಕಿಲ್ಲದೆಯೆಂದು ನಾನು ಕೇಳುತ್ತೇನೆ. ಈಗ ಇವರು ಮಾಡಿರುವುದೇನಿದ್ದರೂ ಏಕ ಪಕ್ಷೀಯ ತೀರ್ಮಾನ; ರಾಜಕೀಯ ಪಕ್ಷವೊಂದರ ತೀರ್ಮಾನ ಅಷ್ಟೆ. ಇದನ್ನು ದೇಶದ ಎಲ್ಲ ಜನತೆ ಅಂಗೀಕರಿಸುವುದಕ್ಕಾಗುವುದಿಲ್ಲ. ಮಾನ್ಯ ಶ್ರೀ ಸೆಟಲ್‌ವಾಡ್‌ರಂಥ ನ್ಯಾಯಶಾಸ್ತ್ರ ಪರಿಣತರು ಇದೇ ಅಂಶವನ್ನು ಕುರಿತು ಹೇಳುತ್ತಾ, ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಈ ರೀತಿ ಏಕ ಪಕ್ಷೀಯವಾದ ಒಂದು ತೀರ್ಮಾನ ಮಾಡಿದ್ದರ ಮೇಲೆ ಸರ್ಕಾರ ಕಾರ್ಯಕ್ರಮ ತೆಗೆದುಕೊಳ್ಳುವುದು ಕಾನೂನಿಗೆ ಬಾಹಿರವಾದ್ದು ಎಂದು ತಿಳಿಸಿದ್ದಾರೆ. ಇದು ಪಾರ್ಲಿಮೆಂಟಿನ ಸಾರ್ವಭೌಮತ್ವವನ್ನೇ ಪ್ರಶ್ನಿಸಿ ಅದಕ್ಕೆ ಧಕ್ಕೆ ತರುವಂಥದಾಗಿದೆಯೆಂದು ನಾನು ಹೇಳ ಬಯಸುತ್ತೇನೆ.

ಈ ರೀತಿ ಇರುವಾಗ ಒಂದು ರಾಜಕೀಯ ಪಕ್ಷ ಏಕ ಸದಸ್ಯ ಆಯೋಗ ನೇಮಕ ಮಾಡಬೇಕೆಂಬ ತೀರ್ಮಾನವನ್ನು ಆದೇಶ ಎಂದು ತಿಳಿದುಕೊಂಡು ಕೇಂದ್ರ ಸರಕಾರ ಆಯೋಗ ನೇಮಕ ಮಾಡಿದರೆ ಅದು ಕಾನೂನು ಬಾಹಿರವಾಗುತ್ತದೆ ಅನ್-ಕಾನ್‌ಸ್ಟಿಟ್ಯೂಷನಲ್ ಆಗುತ್ತದೆ, ಇಲ್ಲ—ಲೀಗಲ್ ಆಗುತ್ತದೆ, ಅದು ಸ್ಟೇಟ್ಸ್ ರೀ ಆರ್ಗನೈಜೇಷನ್ ಕಾನೂನು ವಾಯಲೇಟ್ ಮಾಡಿದ ಹಾಗೆ ಆಗುತ್ತದೆ. ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಈ ತೀರ್ಮಾನ ಮಾಡಿ ದೇಶದ ಮುಂದೆ ಇಟ್ಟಿದ್ದಾರೆ. ಎರಡೂ ರಾಜ್ಯದ ಮುಖ್ಯ ಮಂತ್ರಿಗಳು ಭೇಟಿ ಮಾಡಿ ಒಪ್ಪಂದಕ್ಕೆ ಬರಬೇಕು ಎಂದು ಆದೇಶ ಕೊಟ್ಟಿ ದ್ದಾರೆ. ಈ ಆದೇಶ ಲೋಕ ಸಭೆಯದ್ದಲ್ಲ, ಸೆಂಟ್ರಲ್ ಕ್ಯಾಬಿನೆಟ್ಟದ್ದೂ ಅಲ್ಲ. ಈ ರೀತಿ ವರ್ಕಿಂಗ್ ಕಮಿಟಿಯು ಆದೇಶ ಕೊಟ್ಟದ್ದು ಸರಿಯಲ್ಲ. ಬೌಂಡರಿ ಇತ್ಯರ್ಥ ಮಾಡತಕ್ಕಂಥಾದ್ದು ಗಡಿ ಬದಲಾವಣೆ ಮಾಡತಕ್ಕಂಥಾದ್ದು ಪಾರ್ಲಿಮೆಂಟಿಗೆ ಸಂಬಂಧಪಟ್ಟ ಕೆಲಸ. ಆ ಮಟ್ಟದಲ್ಲಿ ಇದು

(ಶ್ರೀ ಎಸ್. ಶಿವಪ್ಪ)

ಆಗಬೇಕು. ವರ್ಕಿಂಗ್ ಕಮಿಟಿಯು ತೀರ್ಮಾನ ತೆಗೆದುಕೊಂಡಿರತಕ್ಕಂಥಾದ್ದು ಲೋಕಸಭೆಗೆ ಅವಮರ್ಯಾದೆ ಮಾಡಿದಂತಾಗುತ್ತದೆ. ಏಕ ಸದಸ್ಯ ಆಯೋಗ ನೇಮಕ ಮಾಡತಕ್ಕ ಅಧಿಕಾರ, ಹಕ್ಕು, ವರ್ಕಿಂಗ್ ಕಮಿಟಿಗೆ ಇಲ್ಲ. ಅಂಥ ತೀರ್ಮಾನ ಕಾನೂನು ಬಾಹಿರವಾಗುತ್ತದೆ, ರಾಜ್ಯಾಂಗಕ್ಕೆ ಅಪಚಾರ ಮಾಡಿದಂತಾಗುತ್ತದೆ, ಅನ್-ಕಾನ್‌ಸ್ಟಿಟ್ಯೂಷನಲ್ ಆಗುತ್ತದೆ. ಆದುದರಿಂದ ಇದನ್ನು ಎಲ್ಲರೂ ಬಹಿಷ್ಕರಿಸಬೇಕಾಗುತ್ತದೆ. ಈ ಹಕ್ಕು ಕೇವಲ ಪಾರ್ಲಿಮೆಂಟಿಗೆ ಮಾತ್ರ ಇರುತ್ತದೆ. ಈ ವಿಚಾರದಲ್ಲಿ ನಮ್ಮ ಮುಖ್ಯ ಮಂತ್ರಿಗಳು ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸದಸ್ಯರಾಗಿ ಅಲ್ಲಿ ಅವರು ಏನೇ ಅಭಿಪ್ರಾಯ ಹೇಳಿರಲಿ ಅದು ವರ್ಕಿಂಗ್ ಕಮಿಟಿಯ ಸದಸ್ಯರ ಅಭಿಪ್ರಾಯವೇ ಹೊರತು, ಈ ದೇಶದ ಮುಖ್ಯ ಮಂತ್ರಿಗಳ ಅಭಿಪ್ರಾಯವಲ್ಲ ಎಂದು ಅವರಿಗೆ ಈ ಸಂದರ್ಭದಲ್ಲಿ ತಿಳಿಸಲು ಬಯಸುತ್ತೇನೆ. ಅದು ಅವರಿಗೆ ವರ್ಕಿಂಗ್ ಕಮಿಟಿಯ ಸದಸ್ಯರಾಗಿ ಅವರಿಗೆ ಸಂಬಂಧಪಟ್ಟ ವಿಚಾರ. ಮೈಸೂರು ಸಂಸ್ಥಾನದ ಜನತೆಯ ಅಭಿಪ್ರಾಯ ಏನು ಎಂಬುದನ್ನು ಐಕ್ಯರಾಗಿ ತೀರ್ಮಾನ ಮಾಡತಕ್ಕಂಥಾ ಶಕ್ತಿ ಈ ಶಾಸನ ಸಭೆಗೆ ಇದೆ. ದೇಶದ ಗಡಿಯ ಬಗ್ಗೆ ಈ ಶಾಸನ ಸಭೆ ತೀರ್ಮಾನ ತೆಗೆದುಕೊಳ್ಳುತ್ತದೆ. ಈ ತೀರ್ಮಾನದ ಮುಖಾಂತರವಾಗಿ ಮುಖ್ಯ ಮಂತ್ರಿಗಳು ಅದನ್ನು ಕೇಂದ್ರ ಸರಕಾರಕ್ಕೆ ಕಳಿಸತಕ್ಕದ್ದು ಅವರ ಕರ್ತವ್ಯ. ಅದನ್ನು ಅವರು ಮಾಡಬೇಕು ಎಂದು ಈ ಸಭೆಯ ಮೂಲಕ ಅವರನ್ನು ಕೇಳಿಕೊಳ್ಳುತ್ತೇನೆ. ಅವರು ವರ್ಕಿಂಗ್ ಕಮಿಟಿಯಲ್ಲಿ ಕೊಟ್ಟು ಬಂದಿರತಕ್ಕಂಥ ಅಭಿಪ್ರಾಯ ಕೇವಲ ಅವರ ವೈಯಕ್ತಿಕ ಅಭಿಪ್ರಾಯ. ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸದಸ್ಯರಾಗಿ ಪಕ್ಷದ ಪರವಾಗಿ ತೆಗೆದುಕೊಂಡ ತೀರ್ಮಾನವನ್ನು ದೇಶದ ಮೇಲೆ ಹೇರತಕ್ಕಂಥ ಯಾವ ಪ್ರಯತ್ನವನ್ನೂ ಅವರು ಮಾಡಬಾರದು ಎಂದು ಈ ಸಭೆಯ ಮುಖಾಂತರವಾಗಿ ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಬೆಳಗಾಂ ಪ್ರಶ್ನೆ, ಮೈಸೂರು ಮಹಾರಾಷ್ಟ್ರ ಗಡಿ ಪ್ರಶ್ನೆ ಏನೇ ಇರಲಿ; ಏಕ ಸದಸ್ಯ ಆಯೋಗ ನೇಮಕವನ್ನು ಪರಿಶೀಲನೆ ಮಾಡಬೇಕು ಎಂದು ಹೇಳುತ್ತೇನೆ. ಯಾಕೆಂದರೆ, ರಾಜ್ಯ ಪುನರ್ವಿಂಗಡಣೆಯ ಕಾಲದಲ್ಲಿ ಗಡಿ ಪ್ರಶ್ನೆ ಐಕ್ಯರಾಗಿ ತೀರ್ಮಾನವಾಗಿದೆ. ಆಯೋಗ ಮೂಲಕ ಗಡಿ ಪ್ರಶ್ನೆ ತೀರ್ಮಾನಕ್ಕೆ ಬರಬೇಕು ಎಂದು ಮಹಾರಾಷ್ಟ್ರದವರು ಕೇಳುತ್ತಾರೆ. ಲೋಕ ಸಭೆಯಲ್ಲಿ ಎಸ್. ಆರ್. ಸಿ. ಆಕ್ಟ್ ಮಂಡನೆ ಮಾಡಿದ ಕಾಲದಲ್ಲಿ ಮಹಾರಾಷ್ಟ್ರದ ಸದಸ್ಯರು ಗಡಿಯ ಬಗ್ಗೆ ಅನೇಕ ಅಮೆಂಡ್‌ಮೆಂಟುಗಳನ್ನು ಕೊಟ್ಟಿದ್ದರು. ಸಭೆಯ ಮುಂದೆ ಅಂಥ ಅಮೆಂಡ್‌ಮೆಂಟುಗಳನ್ನು ಇಟ್ಟಾಗ ಲೋಕ ಸಭೆಯು ಆ ಅಮೆಂಡ್‌ಮೆಂಟುಗಳನ್ನು ನಿರಾಕರಿಸಿದೆ. ಉಚ್ಚತಮವಾದ ಸಾರ್ವಭೌಮತ್ವವನ್ನು ಪಡೆದಂಥ ಪಾರ್ಲಿಮೆಂಟಿನಲ್ಲಿ ಈಗಾಗಲೇ ಇದು ಇತ್ಯರ್ಥವಾಗಿದೆ. ಒಂದು ತೀರ್ಮಾನ ಕೊಟ್ಟಂಥ ವಿಷಯದ ಬಗ್ಗೆ ಪುನಃ ಪುನಃ ಈ ಪ್ರಶ್ನೆಯನ್ನು ಕಲಕಿ, ಆಯೋಗ ಮಾಡುತ್ತೇವೆ ಎಂದು ಹೇಳತಕ್ಕಂಥಾದ್ದು ಕಾನೂನು ಬಾಹಿರವಾಗಿದೆ ಎಂದು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಈ ವಿವರ ಲೋಕಸಭೆಯ ಚರ್ಚೆಗಳ ವರದಿಯಲ್ಲಿದೆ. ಮೈಸೂರು ಸರಕಾರ ಪ್ರಕಟಿಸಿದ ಒಂದು ಪುಟ್ಟ ಪುಸ್ತಕದಲ್ಲಿ ಕೂಡ ಇದನ್ನು ಹೇಳಿದ್ದಾರೆ. It is unconstitutional, illegal, it violates the provisions of the S. R. Act. Seven Amendments were moved in this respect; they were all rejected. ಒಂದು ಸಾರಿ ಲೋಕಸಭೆಯಲ್ಲಿ ತೀರ್ಮಾನವಾಗಿರತಕ್ಕಂಥ ವಿಷಯವನ್ನು ಮತ್ತೆ ಕಲಕಿದರೆ ಅದು ಎಲ್ಲಿಗೆ ಹೋಗುತ್ತದೆ, ಯಾವ ಗುರಿ ಮುಟ್ಟುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಈ ರೀತಿ ಮಾಡುವುದಾದರೆ ಯಾವ ವಿಚಾರವನ್ನೂ ಐಕ್ಯರಾಗಿ ತೀರ್ಮಾನ ಮಾಡುವುದಕ್ಕಾಗುವುದಿಲ್ಲ. ಇಂಥ ವಿಚಾರ ಲೋಕ ಸಭೆಗೆ ಹೋಗಬೇಕಾಗುತ್ತದೆ, ಎಷ್ಟು ಸಲ ಬದಲಾವಣೆ ಮಾಡಬೇಕಾಗುತ್ತದೆ ಎಂಬುದನ್ನು ವಿಚಾರ ಮಾಡಬೇಕಾಗುತ್ತದೆ. ಇದು ಕೇವಲ ಕನ್ನಡಿಗರ ಅಥವಾ ಮಹಾರಾಷ್ಟ್ರೀಯರ ಪ್ರಶ್ನೆಯಲ್ಲ. ಮಹಾರಾಷ್ಟ್ರೀಯರು ನಮ್ಮ ಸಹೋದರರು. ನಮ್ಮ ಸಹೋದರರು ಸಂತೋಷದಿಂದ ಬಾಳಬೇಕು ಎಂಬ ಆಶೆ ಇದೆ. ಅವರನ್ನು ಬಲವಂತದಿಂದ ನಮ್ಮ ರಾಜ್ಯದಲ್ಲಿ ಇಟ್ಟುಕೊಳ್ಳಬೇಕು ಎಂದು ಲವಲೇಶ ಆಶೆ ಇಲ್ಲ. ನಿರ್ದಿಷ್ಟವಾಗಿ ರಾಜ್ಯ ಪುನರ್ವಿಂಗಡಣೆ ಮಾಡಿ ರಾಜ್ಯ ರಚನೆ ಮಾಡಿದ್ದಾರೆ. ಆರಾಜ್ಯ ಪುನರ್ವಿಂಗಡಣಾ ಕಮೀಷನ್ನು ಬಹಳ ಶ್ರಮದಿಂದ ರಾಜ್ಯಗಳನ್ನು ಸುತ್ತಾಡಿ ಶ್ರಮಪಟ್ಟು ಆಲೋಚನೆ ಮಾಡಿ ಒಂದು ತೀರ್ಮಾನಕ್ಕೆ ಬಂದಿದ್ದಾರೆ. ರಾಜ್ಯ ಪುನರ್ವಿಂಗಡಣೆಗೆ ಭಾಷೆಯೇ ಮುಖ್ಯ ಆಧಾರವಲ್ಲ. ಭೌಗೋಲಿಕವಾಗಿ, ಆಡಳಿತ ದೃಷ್ಟಿಯಿಂದ, ಸಾಂಸ್ಕೃತಿಕ ದೃಷ್ಟಿಯಿಂದ, ಭಾರತ ದೇಶದ ಸಮಗ್ರತೆಯ ದೃಷ್ಟಿಯಿಂದ ಇಂಟಿಗ್ರೇಷನ್ ಆಫ್ ಆಲ್ ಇಂಡಿಯಾ ಭಾವನೆ ಇಟ್ಟುಕೊಳ್ಳಬೇಕಾಗುತ್ತದೆ. ಈ ಒಂದು ದೊಡ್ಡ ತೀರ್ಮಾನಕ್ಕೆ ಬಂದಿದ್ದಾರೆ. ಹದಿನಾಲ್ಕು ರಾಜ್ಯಗಳ ವಿಂಗಡಣೆ ಮಾಡಿದ್ದಾರೆ.

ಮಹಾರಾಷ್ಟ್ರ ಭಾಷೆಯನ್ನು ಕೆಲವರು ಆಡುತ್ತಾರೆ, ಕನ್ನಡ ಭಾಷೆಯನ್ನು ಕೆಲವರು ಆಡುತ್ತಾರೆ. ನಮ್ಮ ದೇಶ ನಮಗೆ ಬರಬೇಕು ಎಂದು ಅವರು ಕೇಳುತ್ತಾರೆ. ನೂರಕ್ಕೆ ನೂರು ಜನ ಒಂದೇ ಭಾಷೆಯನ್ನಾಡುವ ರಾಜ್ಯ ರಚನೆ ಮಾಡುವುದು ಸಾಧ್ಯವೇ ಎಂದು ಕೇಳುತ್ತೇನೆ. Is it possible to carve out a State with 100 per cent of one Language ? It is an absolute impossibility. ಎಷ್ಟೇ ಪ್ರಯತ್ನ ಮಾಡಿ ಎಷ್ಟೇ ಸಾಹಸ ಮಾಡಿ ಒಂದು ಭಾಷೆಯ ಪ್ರಾಂತ ರಚನೆ ಮಾಡಿದರೂ ಕೂಡ ಅದರಲ್ಲಿ ಎರಡು ಮೂರು ಪರ್ಸೆಂಟ್ ಮೈನಾರಿಟಿ ಉಳಿಯಲೇಬೇಕಾಗುತ್ತದೆ. ಸಂಪೂರ್ಣವಾಗಿ ನೂರಕ್ಕೆ ನೂರು ಮಹಾರಾಷ್ಟ್ರ ಭಾಷೆಯ ಜನ ಇರತಕ್ಕಂಥ, ನೂರಕ್ಕೆ ನೂರು ಕನ್ನಡ ಜನ ಇರತಕ್ಕಂಥ, ನೂರಕ್ಕೆ ನೂರು ತೆಲುಗು ಭಾಷೆಯ ಜನ ಇರತಕ್ಕಂಥ ದೇಶ ಮಾಡುವುದಕ್ಕೆ ಸಾಧ್ಯವೇ ಇಲ್ಲ. ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಅನೇಕ ಕೈಗಾರಿಕೆಗಳು ಇವೆ. ಕೈಗಾರಿಕಾ ಕ್ಷೇತ್ರದಲ್ಲಿ ಕೆಲಸ ಮಾಡುವುದಕ್ಕೆ ಭಾರತದ ಎಲ್ಲಾ ಪ್ರದೇಶದ ಜನ ವಲಸೆ ಹೋಗುತ್ತಾರೆ. ಆದುದರಿಂದ ನೂರಕ್ಕೆ ನೂರು ಒಂದೇ ಭಾಷೆಯ ಜನ ಇರಬೇಕು ಎಂದು ಹೇಳುವುದು ಬರೀ ಐಡಿಯಲ್ ಆಗುತ್ತದೆ, ಪ್ರಾಕ್ಟಿಕಲ್ಲಾಗಿ ಅದು ಸಾಧ್ಯವಿಲ್ಲ. ಮೈಸೂರು ಮಹಾರಾಷ್ಟ್ರ ಗಡಿ ಪ್ರಶ್ನೆ ಉಲ್ಬಣವಾಗುವುದು ದುರದೃಷ್ಟಕರ. ಯಾವುದೇ ರಾಜ್ಯವಾಗಿರಲಿ ಅಲ್ಲಿ ಮೈನಾರಿಟಿ ಭಾಷೆಯ ಜನ ಇದ್ದೇ ಇರುತ್ತಾರೆ. ಮಹಾರಾಷ್ಟ್ರದಲ್ಲಿ ಕನ್ನಡಿಗರು ಇದ್ದಾರೆ. ಕನ್ನಡ ದೇಶದಲ್ಲಿ ಮಹಾರಾಷ್ಟ್ರದವರು ಇದ್ದಾರೆ. ಈ ರೀತಿ ಮೈನಾರಿಟಿಯಲ್ಲಿರತಕ್ಕವರ ರಕ್ಷಣೆಯಾಗಬೇಕು. ಇದು ಮುಖ್ಯ. ಬೆಂಗಳೂರಿನಲ್ಲಿರತಕ್ಕ ಮಹಾರಾಷ್ಟ್ರದವರು ಗಂಟು ಮೂಟೆ ಕಟ್ಟಿಕೊಂಡು ಹೊರಗೆ ಹೋಗಬೇಕು ಬೊಂಬಾಯಿಯಲ್ಲಿರತಕ್ಕಂಥ ಕನ್ನಡಿಗರು ಗಂಟು ಮೂಟೆ ಕಟ್ಟಿಕೊಂಡು ಹೊರಗೆ ಹೋಗಬೇಕು ಎಂದು ಹೇಳುವುದು ಸಾಧ್ಯವಾಗಲಾರದು. ಎಲ್ಲಾ ಭಾಷೆಯವರು ಎಲ್ಲಾ ದೇಶದಲ್ಲಿ ಇರುತ್ತಾರೆ. ಅಂಥವರ ರಕ್ಷಣೆಯ ಬಗ್ಗೆ ಏನು ಮಾಡಬೇಕಾಗಿದೆ ಎಂಬುದು ಮುಖ್ಯ. ಅವರ ಹಕ್ಕು ಬಾಧ್ಯತೆ ರಕ್ಷಣೆ ಮಾಡತಕ್ಕದ್ದು ಅವರ ಕರ್ತವ್ಯ.

Mr. SPEAKER.—The House will now rise for half-an-hour recess.

The House adjourned for Recess at Three of the Clock and re-assembled at Thirty Minutes past Three of the Clock.

[MR. SPEAKER in the Chair]

Mr. SPEAKER.—To-morrow is Saturday. What shall we do ? Are we meeting in the morning ? There is not much on the agenda. If the members so feel the question hour may be dropped and they may utilise that for this subject. Or if they want to sit both in the morning and evening, I have no objection, What shall we do ?

Sri S. NIJALINGAPPA (Chief Minister).—If necessary we may sit for half-an-hour more to-morrow.

Sri SANJEEVANATH AIKALA (Suratkal).—Sir, Question hour need not be dropped.

Mr. SPEAKER —We will sit tomorrow in the morning. I will not drop the Question Hour.

ಶ್ರೀ ಎಸ್. ಶಿವಪ್ಪ.—ಸಭಾಪತಿಯವರೇ, ರಾಜ್ಯ ಪುನರ್ವಿಂಗಡಣಾ ಸಮಿತಿಯವರು ರಾಜ್ಯಗಳನ್ನು ಪುನರ್ವಿಂಗಡಣೆ ಮಾಡುವಂಥ ಸಮಯದಲ್ಲಿ ಅವರು ಒಂದು ಮಹಾ ಉದ್ದೇಶವನ್ನು ಪ್ರಸ್ತಾಪ ಮಾಡಿದ್ದಾರೆ. ಈ ರಾಜ್ಯಗಳ ಪುನರ್ವಿಂಗಡಣೆಯ ರೀತಿ, ಭಾಷೆ ಮತ್ತು ಹೋಮೋಜೀನಿಯಟಿ ಮೇಲೆ ಆಗುವುದಲ್ಲದೆ ಅದಕ್ಕಿಂತ ಹೆಚ್ಚಾಗಿ ಐಕ್ಯತೆ, ಭದ್ರತೆ ಇರಬೇಕು ಎಂದು ಹೇಳಿದ್ದಾರೆ.

(1) preservation and strengthening of the unity and security of India.

(ಶ್ರೀ ಎಸ್. ಶಿವಪ್ಪ)

(2) Financial, economic and administrative considerations and linguistic and cultural homogeneity.

ಹೀಗೆ ಅವರು ರಾಜ್ಯಗಳ ಪುನರ್ವಿಂಗಡಣೆ ಆಗತಕ್ಕ ಕಾಲದಲ್ಲಿ ನಮ್ಮ ರಾಷ್ಟ್ರದ ಭದ್ರತೆ ಮತ್ತು ರಾಜ್ಯ ರಾಜ್ಯಗಳ ಮಧ್ಯೆ ಆರ್ಥಿಕ ಮತ್ತು ಆಡಳಿತ ವ್ಯವಸ್ಥೆ ಇವುಗಳ ಹೊಂದಾಣಿಕೆ ಬಹಳ ಪ್ರಾಮುಖ್ಯವಾಗಿ ಇರಬೇಕು, ಭಾಷೆ ಮತ್ತು ಸಾಂಸ್ಕೃತಿಯ ಹೊಂದಾಣಿಕೆಯಾದಮೇಲೆ ಇವು ಕೂಡ ಅಷ್ಟೇ ಪ್ರಾಮುಖ್ಯವಾದುವು ಎನ್ನುವ ಅಂಶವನ್ನು ಬಹಳ ಆಳವಾಗಿ ಒತ್ತಿ ಒತ್ತಿ ರಾಜ್ಯ ಪುನರ್ವಿಂಗಡಣೆ ಸಮಿತಿಯು ನೀತಿ ನಿರೂಪಣೆ ಮಾಡತಕ್ಕ ಕಾಲದಲ್ಲಿ ಆರ್ಥಿಕ ಮತ್ತು ಆಡಳಿತ ವ್ಯವಸ್ಥೆ ಹಾಗು ಭೌಗೋಳಿಕ ವ್ಯವಸ್ಥೆಯೂ ಕೂಡ ಅತಿ ಮುಖ್ಯವಾದುದು ಎಂದು ಅದಕ್ಕೂ ಒಂದು ಮಹತ್ವವನ್ನು ಕೊಟ್ಟುಕೊಂಡು ಬಂದಿದ್ದಾರೆ. ಈ ದೃಷ್ಟಿಯಿಂದ ರಾಜ್ಯಗಳ ಪುನರ್ವಿಂಗಡಣಾ ಸಮಿತಿಯ ತೀರ್ಪಾಗಿ ಅದು ಕಾರ್ಯಗತವಾದಮೇಲೆ ಅದನ್ನು ಪುನಃ ಎತ್ತುವ ಕಾಲದಲ್ಲಿ ಅದನ್ನು ಬಹಳ ಆಳವಾಗಿ ನೋಡಬೇಕಾಗಿದೆ.

ಇವತ್ತು ಮಹಾರಾಷ್ಟ್ರ ಸರ್ಕಾರದವರು ಮಹಾರಾಷ್ಟ್ರದ ಜನತೆಯ ಪರವಾಗಿ ಏನು ವಾದ ಮಾಡುತ್ತಿದ್ದಾರೆ, ಎಂದರೆ ಬೆಳಗಾಂ, ನಿಪ್ಪಾಣಿ, ಕಾರವಾರ, ಇವು ತಮಗೆ ಬರಬೇಕು ಎನ್ನುವ ವಾದವನ್ನು ಮುಂದೆ ಇಟ್ಟುಕೊಂಡು ಬರುತ್ತಿದ್ದಾರೆ. 1929ನೇ ಇಸವಿ ಮೇ ತಿಂಗಳು 29ನೇ ತಾರೀಖಿನ ದಿವಸ ಅಂಥ ಒಂದು ಸಮ್ಮೇಳನದಲ್ಲಿ ಅವತ್ತಿನ ದಿವಸ ಬಹಳ ತಜ್ಞರಾದ ಎನ್. ಸಿ. ಕೇಳ್ಕರ್ ಅವರು ಏನು ಹೇಳಿದ್ದಾರೆ ಎನ್ನುವುದನ್ನು ನಾವು ಸ್ವಲ್ಪ ಸೂಕ್ಷ್ಮ ದೃಷ್ಟಿಯಿಂದ ನೋಡುವುದಾದರೆ ಅದು ಒಂದು ದೊಡ್ಡ ತೀರ್ಪಿನ ಹಾಗೆ ಇದೆ :

> "We agree to the view stated in the resolution as now passed that while the Kanarese language being the language of the majority in the district must be given its proper place in the public affairs of the district, the Marathi language on the other hand must be given the recognition, the latitude and facilities which are due to it as the language of the substantial minority."

1929ನೇ ಇಸವಿಯಲ್ಲಿಯೇ ಬೆಳಗಾಂ ಜಿಲ್ಲೆ ಕನ್ನಡ ಪ್ರದೇಶ ಎನ್ನುವುದನ್ನು ತತ್ವಶಃ ಅವರು ಒಪ್ಪಿಕೊಂಡಿದ್ದಾರೆ ಮತ್ತು ಅದರ ಬಗ್ಗೆ ಮರಾಠಿ ಸಮ್ಮೇಳನದಲ್ಲಿ ಕೂಡ ಒಂದು ತೀರ್ಮಾನವನ್ನು ಹೇಳಿದ್ದಾರೆ :

> "That the District of Belgaum is a part of Karnataka and in this district, Kanarese is a predominant language, that is, the language of the majority."

ಎನ್ನುವ ನಿರ್ಣಯವು ಕೂಡ ಆ ಸಭೆಯಲ್ಲಿ ಆಗಿದೆ. ಇದನ್ನೆಲ್ಲ ನೋಡಿದರೆ ಬೆಳಗಾಂ ಕನ್ನಡ ಮಾತನಾಡತಕ್ಕ ಪ್ರದೇಶ, ಕನ್ನಡ ಮಾತನಾಡತಕ್ಕ ಜನರ ಸಂಸ್ಕೃತಿಯನ್ನು ಹೊಂದಿರತಕ್ಕ ಜಿಲ್ಲೆ ಎನ್ನುವುದರಲ್ಲಿ ಲವಲೇಶವೂ ಯಾವ ಅನುಮಾನವೂ ಇಲ್ಲ ಎನ್ನುವುದನ್ನು ತಿಳಿಯಬಹುದಾಗಿದೆ. ಇದನ್ನು ಕಂಡೇ ಬೆಳಗಾಂ ಅನ್ನು ಜಿಲ್ಲಾ ಕೇಂದ್ರವನ್ನಾಗಿ ಮಾಡಿದ್ದಾರೆ.

> "Belgaum has always been recognised as a part of Karnatak and fixed up as civil headquarters of the district by an order dated 9th March 1838."

ಆ ಒಂದು ತೀರ್ಮಾನದ ಪ್ರಕಾರವಾಗಿ ಬೆಳಗಾಂ ಆ ಜಿಲ್ಲೆಯ ಕೇಂದ್ರವಾಗಿರಬೇಕು, ಕನ್ನಡ ಪ್ರದೇಶದ ಪ್ರಧಾನ ನಗರವಾಗಿ ಬೆಳಗಾಂ ಇರಬೇಕು ಎನ್ನುವುದು 1838ನೇ ಇಸವಿಯಲ್ಲಿ ತೀರ್ಮಾನವಾಗಿದೆ. ಹೀಗೆ ಬೆಳಗಾಂ ಕನ್ನಡ ರಾಜ್ಯದ ಮಧ್ಯೆ ಇರುವ ನಗರ ಎಂಬುದಕ್ಕೆ ನಿದರ್ಶನ ಇದೆ. ಇಲ್ಲಿ ಪ್ರಾದೇಶಿಕವಾಗಿ ಕಾಂಗ್ರೆಸ್ಸನ್ನು ವಿಭಾಗ ಮಾಡಿದಾಗ ಕರ್ಣಾಟಕ ಕಾಂಗ್ರೆಸ್ಸಿಗೆ ಬೆಳಗಾಂ ಜಿಲ್ಲೆ ಸಂಪೂರ್ಣವಾಗಿ ಸೇರುತ್ತದೆ. ಅದು ಕನ್ನಡ ಪ್ರದೇಶ, ಕನ್ನಡ ಜಿಲ್ಲೆ ಎಂಬುದು ಬಹಳ ಕಾಲದಿಂದ ತಿಳಿದಿರುವ ಸಂಗತಿಯೇ ಆಗಿದೆ. ಅದು ವಿವಾದಕ್ಕೆಡೆಯಿಲ್ಲದಿರುವ ಪ್ರದೇಶ. ಈ ವಿಚಾರದಲ್ಲಿ

ವಿವಾದಕ್ಕೆಡೆ ಕೊಟ್ಟರೆ ಬೆಳಗಾಮಿನ ಪ್ರಗತಿಗೆ ಬಹಳ ಕುಂದಕ ಬರುತ್ತದೆ, ಇಂಪೀರಿಯಲ್ ಗೆಜೆಟಿಯರಿನ ಏಳನೇಯ ವಾಲ್ಯೂಂನ 149ನೆಯ ಪುಟದಲ್ಲಿ ಬೆಳಗಾಂ ಜಿಲ್ಲೆಯ ಜನಸಂಖ್ಯೆ 16 ಲಕ್ಷ 46 ಸಾವಿರ, ಅದರಲ್ಲಿ ಕನ್ನಡ ಮಾತನಾಡುವವರು 11 ಲಕ್ಷ ಏಳು ಸಾವಿರ ಮಂದಿ ಅಂದರೆ 67.3 ಪರ್ಸೆಂಟ್ ಇದ್ದಾರೆ; ಮರಾಠಿ ಮಾತನಾಡುವವರು ಸೇಕಡ 23·4 ಮಂದಿ ಮಾತ್ರ ಇದ್ದಾರೆ ಎಂದು ನಮೂದಿಸಲಾಗಿದೆ. ಹೀಗೆ ಯಾವ ದೃಷ್ಟಿಯಿಂದ ನೋಡಿದರೂ ಅಧಿಕೃತವಾಗಿ ಅದು ಕನ್ನಡ ಮಾತನಾಡುವ ಜಿಲ್ಲೆಯಾಗಿದೆ. ಈ ಜಿಲ್ಲೆಯನ್ನು ಈ ದಿವಸ ಬೇರೆ ಭಾಗಕ್ಕೆ ಸೇರಿಸಬೇಕು ಎಂದು ಹೇಳಿದರೆ ಅದಕ್ಕಾಗಿ ಪಕ್ಕದ ರಾಜ್ಯದಿಂದ ಬೇಡಿಕೆ ಬಂದರೆ ಅದು ಸಾಧ್ಯವಾಗದ ಮಾತು. ಭೌಗೋಳಿಕವಾಗಿ, ಆಡಳಿತ ದೃಷ್ಟಿಯಿಂದ ಮತ್ತು ಆರ್ಥಿಕ ದೃಷ್ಟಿಯಿಂದ ಬೆಳಗಾಂ ನಗರ ಮತ್ತು ಜಿಲ್ಲೆ ಈಗಾಗಲೆ ಸ್ಟೇಟ್ಸ್ ರೀ ಆರ್ಗನೈಸೇಷನ್ ಕಮಿಟಿಯು ವರದಿ ಮಾಡಿರುವ ಹಾಗೆ ನಮ್ಮ ರಾಜ್ಯಕ್ಕೇ ಸೇರಬೇಕು. ಮತ್ತು ಮೈಸೂರು ದೇಶ ಈಗಾಗಲೆ ಬೆಳಗಾಂ ನಗರದಲ್ಲಿ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಮಾಡಿದೆ. ಈ ಪ್ರದೇಶ ಮತ್ತೆ ಬೇರೊಂದು ರಾಜ್ಯಕ್ಕೆ ಸೇರಿದರೆ, ಸರಕಾರದ ಬದಲಾವಣೆಯಾದರೆ ಆ ಪ್ರದೇಶಕ್ಕೆ ಬಹಳ ಕೆಡುಕಾಗುತ್ತದೆ. ಬಾರ್ಡರ್ ಪ್ರದೇಶ ಯಾವುದೇ ಆದರೂ ಅನುಮಾನಕ್ಕೆ ಆಸ್ಪದವಿಲ್ಲದಂತೆ ಯಾವುದಾದರೂ ಒಂದು ರಾಜ್ಯಕ್ಕೆ ಸೇರಬೇಕು. ಇಲ್ಲದಿದ್ದರೆ ಮತ್ತೆ ಯಾವುದಾದರೂ ಬೇರೆ ರಾಜ್ಯಕ್ಕೆ ಸೇರಬಹುದೆಂಬ ಅನುಮಾನವಿದ್ದರೆ ಸರಕಾರದವರು ಅನುಮಾನ ದೃಷ್ಟಿಯಿಂದ ನೋಡಿ ಆ ಪ್ರದೇಶದಲ್ಲಿ ಸಾಕಷ್ಟು ಪ್ರಗತಿ ಕಾರ್ಯ ಕೈಕೊಳ್ಳುವುದಿಲ್ಲ. ಇದರಿಂದ ಆ ಪ್ರದೇಶದ ಅಭಿವೃದ್ಧಿ ಕುಂಠಿತವಾಗುವುದು. ಆದುದರಿಂದ ಯಾವಾಗಲೂ ಆಖೈರಾಗಿ ಒಂದು ತೀರ್ಮಾನವಾಗಬೇಕು. ಹಾಗೆ ಮಾಡಿದ ಮೇಲೆ ಬದಲಾವಣೆಗೆ ಅವಕಾಶವಿರಬಾರದು. ಪಾಟಸ್ಕರ್‌ರವರ ವರದಿ ನೋಡಬಹುದು. ರಾಜ್ಯಗಳ ಪುನರ್ವಿಂಗಡಣೆಯಾದಾಗ ಒಂದೊಂದು ರಾಜ್ಯದಲ್ಲಿ ಒಂದೊಂದು ನೀತಿಯನ್ನನುಸರಿಸಿದ್ದಾರೆ. ಆಂಧ್ರ ಮತ್ತು ಮದ್ರಾಸು ರಾಜ್ಯಗಳ ವಿಂಗಡಣೆಯಾದಾಗ ಅನುಸರಿಸಿದ ನೀತಿಯನ್ನು ಗುಜರಾತು ಮತ್ತು ಮಹಾರಾಷ್ಟ್ರ ರಾಜ್ಯಗಳನ್ನು ವಿಂಗಡಣೆ ಮಾಡಿದಾಗ ಅನುಸರಿಸಲಿಲ್ಲ, ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆ ನೀತಿಗಳನ್ನನುಸರಿಸಿದ್ದಾರೆ. ಚವಾಣ್‌ರವರು ಗ್ರಾಮವನ್ನು ಒಂದು ಯೂನಿಟ್ಟಾಗಿ ಪರಿಗಣಿಸಬೇಕೆಂದು ನಿರ್ಣಯ ಮಾಡಿದಾಗ ಮಹಾರಾಷ್ಟ್ರದ ಮುಖ್ಯ ಮಂತ್ರಿಗಳಾಗಿದ್ದ ಅವರು ಹೀಗೆ ಹೇಳಿದರು :

> "If we accept this amendment, it will create an anomalous position in the whole Act. It will create some sort of vacuum on the border between Gujerat and Maharashtra."

SRI B. R. SUNTHANKAR (Belgaum City).—From what book is my Hon'ble Friend reading ?

SRI S. SIVAPPA.—From an authoritative publication of the Government of Mysore.

SRI B. R. SUNTHANKAR.—May I know whether this book has been placed on the table of the House because according to our information it is a confidential publication and it is not a public document? So, I rise on a point of order as to whether he can refer to such a book.

† SRI V. S. PATIL (Belgaum).—Sir, I rise on a point of order. On a previous occasion when an Hon'ble Member tried to refer to this particular publication this question came up and the Speaker ruled that unless the Government placed that book on the Table of the House, it could not be referred to and so the Hon'ble Member was then prevented from referring to anything contained in that book. That is a ruling given long back and I think Government have not done anything to make this publication public by placing it on the Table of the House. Even if it is in the Library, it does not mean that it is a public document. So, that ruling is still in force.

Mr. SPEAKER.—I would like to know whether it is a document which has been placed on the Table of the House. The fact that it is in the Library only means that it is there for obvious purposes but not for being referred to in the course of the debate unless it is placed on the Table of the House now so that every member may refer to it. If the Government are willing to place it on the Table of the House, it can be referred to. If it is not going to be placed on the Table of the House, then there is much force in the contention of Mr. V. S. Patil and I will have to consider.

Sri S. M. KRISHNA (Maddur).—Mr. Patil has raised objection to Sri Sivappa referring to this publication. It is a public document in as much as more than one copy is available in the Legislature Library and Mr. Patil or anybody for that matter who has access to the Legislature Library can get a copy of this publication. We are quoting certain passages from a book and we are willing to place it on the Table of the House.

Mr. SPEAKER.—After all it is not a very great point. If it is claimed as confidential, then the question of placing it on the Table of the House or not arises. If it is in the Library it is open as much for Sri Sivappa as for Sri Patil. It is equally open to him to refer to it. Under what circumstance on a prior occasion it was ruled like that I will have to find out. Suppose it was claimed as a confidential document prepared by the Government or by a committee appointed by the Government and suppose they did not like to make it public or place it on the Table of the House, it cannot be referred to. On the other hand, if it is available for anybody and everybody......

Sri S. SIVAPPA.—I am referring to Bombay Legislative Council debate; it is a public document. It is a reference book from the Library and I can refer to any book in the Library.

Sri S. NIJALINGAPPA.—Sir, when Maharashtra and Gujarat were separated, the matter was discussed on the floor of the Assembly in the Ex-Bombay State. Then, Mr. Chavan as Chief Minister of that State has made a certain statement which has been quoted in this book. It is in the Library and anybody can refer to it. If my friends want it, I can supply it to them.

Sri V. S. PATIL.—If Mr. Sivappa wants to refer to the Debates of the Maharashtra or the ex-Bombay Assembly, I have absolutely no objection, but he must quote it from the Reports of that Assembly and not from any other source. On the other hand, he is quoting it from a book which he is referring to and in which it is quoted. It is a confidential book and it is not public. He is referring to the report of a Committee which is confidential according to the Government and so it cannot be quoted.

Mr. SPEAKER.—The issue is in regard to the basic possession and it is said that because it is a confidential document therefore it cannot be referred to here, but the Government says it is not a confidentlai

document. I do not know whether on a prior occasion it was claimed as a confidential document and therefore it was not placed on the Table of the House. Is that so ?

Sri B. R. SUNTHANKAR.—Some time ago I requested the Chief Minister to supply me a copy of this book and he was kind enough to supply me one with a letter that it is confidential document and that the book should be returned immediately after I finished my work with that book.

Mr. SPEAKER.—What kind of confidential book is it if it is given to you and to every one ?

Sri B. R. SUNTHANKAR.—That means it was not meant for circulation.

Mr. SPEAKER.—The hon'ble member has just said that it was given to him for the asking. If it is given to anyone for the asking and yet if it is claimed as confidential, it appears to be a contradiction in terms.

Sri S. SIVAPPA.—Probably, the Chief Minister had confidence in Mr. Sunthankar and so he gave it to him.

Mr. SPEAKER.—We have to revise our notion of "Confidential" because he says that the Chief Minister had confidence in Sri Sunthankar and so it is confidential.

Sri B. R. SUNTHANKAR.—The Chief Minister maintained that it was confidential.

Mr. SPEAKER.—That is outside the scope of this debate.

Sri B. R. SUNTHANKAR.—Then the Government must make copies of this book available to all members.

Mr. SPEAKER.—It is in the Library which is under my control and I can give it to anybody who wants.

With regard to the ruling, I will call for the ruling and find out.

Sri V. S. PATIL.—I think it was Sri Ganji Veerappa or Sri Doddameti who was trying to refer to it and at that time I raised this objection and then a ruling was given that since it is confidential it cannot be referred to.

Mr. SPEAKER.—I will get it and read it.

ಶ್ರೀ ಎಸ್. ಶಿವಪ್ಪ.—ಸಭಾಪತಿಯವರೇ ಈ ನೀತಿ, ರಾಜ್ಯ ಪುನರ್‌ವಿಂಗಡಣೆಯ ಸಂದರ್ಭದಲ್ಲಿ ದೇಶಾದ್ಯಂತ ಅನುಸರಿಸಿದ ರಾಷ್ಟ್ರದ ನೀತಿಯಾಗಿಲ್ಲ ಎಂಬ ಅಂಶವನ್ನು ಹೇಳುತ್ತಿದ್ದೆ. Village as a unit ಎಂಬುದು ರಾಷ್ಟ್ರದ ನೀತಿ ಅಲ್ಲ ಅಥವಾ ತಾಲ್ಲೂಕು ಒಂದು ಯೂನಿಟ್ ಆಗಬೇಕೆಂಬುದೂ ಕೂಡ ಒಂದು ನೀತಿ ಅಲ್ಲ. ಒಂದೊಂದು ದೇಶದಲ್ಲಿ ಒಂದೊಂದು ಸಂದರ್ಭಕ್ಕನುಸಾರವಾಗಿ ಎರಡು ಸರ್ಕಾರಗಳೂ ಕೂಡ ಅನುಮತಿಯಿಂದ ಒಪ್ಪಂದದ ಪ್ರಕಾರ ಮಾಡುತ್ತಾರೆ. ಆ ಒಂದು ನೀತಿ ಆಚರಣೆಗೆ ಬರಲಿಕ್ಕೆ ಸಾಧ್ಯ ಎಂಬ ಅಂಶವನ್ನು ಹೇಳಿದೆ. ಚವಾಣ್ ಅವರು ಗುಜರಾತ್ ಮತ್ತು ಮಹಾರಾಷ್ಟ್ರದ ವಿಷಯ ಬಂದಾಗ ವಿಲೇಜ್ ಒಂದು ಯೂನಿಟ್ ಆಗಬೇಕೆಂದು ಹೇಳಿದಾಗ ಅದು ಸಾಧ್ಯವಿಲ್ಲ ಎಂದು ತಿದ್ದುಪಡಿ ಅಲ್ಲಿಯ ವಿಧಾನ ಸಭೆಯಲ್ಲಿ ಬಿದ್ದು ಹೋಯಿತು. ಆದ್ದರಿಂದ ಅಲ್ಲೂ ಕೂಡ ಅದು ಪ್ರತಿಪಾದನೆಯಾಗಿಲ್ಲ ಎಂಬ ಅಂಶವನ್ನು ಮಾನ್ಯ ಸಭೆಯ ಗಮನಕ್ಕೆ ತರಲು ಈ ಒಂದು ಅಂಶವನ್ನು ತಮ್ಮ ಮುಂದೆ ಇಟ್ಟೆ. ಇವತ್ತಿನ ದಿವಸ ಪಂಜಾಬ್ ಮತ್ತು ಹರಿಯಾಣ ಆಗತಕ್ಕ ಕಾಲದಲ್ಲಿ Taluk as a unit ಎಂಬ ನೀತಿಯನ್ನು ಅನುಸರಿಸುತ್ತಾ ಇದ್ದಾರೆ. ಹೀಗೆ ರಾಷ್ಟ್ರಾದ್ಯಂತವಾದ ಒಂದು ಏಕ ಮುಖವಾದ ನೀತಿ ರಾಜ್ಯ ವಿಂಗಡಣೆಯ ಸಂದರ್ಭದಲ್ಲಿ ಕಂಡು ಬಂದಿಲ್ಲ ಅದಕ್ಕೆ ಕಾರಣ, ಆ ರೀತಿ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳುತ್ತಾ ಇದ್ದಾರೆ. ಆ ದೃಷ್ಟಿಯಿಂದ ಬೆಳಗಾಂ

(ಶ್ರೀ ಎಸ್. ಶಿವಪ್ಪ)

ಪ್ರಶ್ನೆಯನ್ನು ತೆಗೆದುಕೊಂಡರೆ, ಬೆಳಗಾಂನಲ್ಲಿರತಕ್ಕ ಕನ್ನಡ ಜನರ ಹಿತದೃಷ್ಟಿಯಿಂದ ಬೆಳಗಾಂ ನಗರ, ಆ ಒಂದು ಪ್ರದೇಶದ ಜಿಲ್ಲಾ ಕೇಂದ್ರವಾಗಿಯೇ ಉಳಿಯಬೇಕೆಂಬ ಉದ್ದೇಶದಿಂದ, ಬೆಳಗಾಂ ನಗರವನ್ನು ಮೈಸೂರು ದೇಶದಲ್ಲಿ ಉಳಿಸಿಕೊಳ್ಳುವುದಕ್ಕೆ ಸ್ಟೇಟ್ ರೀ ಆರ್ಗನೈಸೇಷನ್ ಕಮಿಟಿಯು ವರು ಪ್ರತಿಪಾದನೆ ಮಾಡಿದ ಅಭಿಪ್ರಾಯವನ್ನು ಒಪ್ಪಿ ಅದು ಆಕ್ಟ್ ಆಗಿದೆ. ಅದರ ಪ್ರಕಾರ ಅದು ಮೈಸೂರು ದೇಶದಲ್ಲಿ ಉಳಿಯುತ್ತದೆ. ಇಂತಹ ಪ್ರಶ್ನೆಗಳನ್ನು ಇವತ್ತಿನ ದಿವಸ ಒಂದೊಂದಾಗಿ ಹೇಳುತ್ತಾ ಹೋದರೆ ಎಲ್ಲದರಲ್ಲೂ ಕೂಡ ಇದೇ ರೀತಿಯಾಗಿ ಒಂದು ಭಾಷೆಯ ಗೊಂದಲಕ್ಕೆ ಸಿಕ್ಕಿರ ತಕ್ಕ ಪ್ರದೇಶದ ಎರಡು ಕಡೆಯುವರೂ ವಾದ ಮಾಡತಕ್ಕ ಪ್ರಮೇಯ ಇವತ್ತು ದೇಶದಲ್ಲಿ ಹುಟ್ಟುತ್ತಾ ಇದೆ. ಈ ಒಂದು ಚಳುವಳಿ ನಮ್ಮ ಪ್ರದೇಶ, ನಾವು ಮಾತನಾಡತಕ್ಕ ಭಾಷೆಯ ಪ್ರದೇಶ ನಮ್ಮಲ್ಲಿ ಬರಬೇಕು ಎಂಬ ಚಳುವಳಿಯ ರೂಪ, ಏನಿದೆ ಇದು ದೇಶದ ಒಂದು ಪ್ರಗತಿಗೆ ಕಂಟಕಪ್ರಾಯವಾ ಗುತ್ತದೆ, ಇದು ದೇಶದಲ್ಲಿ ಭ್ರಾತೃ ಪ್ರೇಮವನ್ನು ಬೆಳೆಸುವುದಕ್ಕೆ ತೊಂದರೆ ಮಾಡಬಹುದು.

[MR. CHAIRMAN (SRI Y. MANJAIAH SHETTY) in the Chair.]

ದೇಶದಲ್ಲಿರತಕ್ಕ ಒಂದು ಪ್ರೇಮಮಯವಾದ ವಾತಾವರಣವನ್ನು ಕಲಕಿ, ದ್ವೇಷಾಸೂಯೆ ಬೆಳೆಸತಕ್ಕ ಕಹಿ ವಾತಾವರಣವನ್ನುಂಟು ಮಾಡತಕ್ಕ ಸಂದರ್ಭ ಉಂಟಾಗುತ್ತದೆ, ಇದು ಹೋಗಬೇಕೆಂಬ ದೃಷ್ಟಿಯಿಂದ ಹೇಳಿದೆ. ಈಗಿರತಕ್ಕ ರಾಜ್ಯದ ಪುನರ್‌ವಿಂಗಡಣೆ ಯಾವ ರೀತಿ ಇದೆಯೋ ಅದೇ ರೀತಿ ಮಹಾರಾಷ್ಟ್ರ ಮತ್ತು ಮೈಸೂರಿನ ಗಡಿ ಉಳಿಯಬೇಕು. ಇದು ಆಗಿ ಹತ್ತು ವರ್ಷವಾಗಿದೆ. ನಾವೂ ಅವರೂ ಭೇದ ಭಾವ ಇಲ್ಲದೆ ಬಾಂಧವ್ಯವನ್ನು ಬೆಳೆಸಿಕೊಂಡು ಬಂದಿದ್ದೇವೆ. ನಮ್ಮ ಸ್ನೇಹಿ ತರು ನಮ್ಮನ್ನು ಬಿಟ್ಟು ಹೋಗುತ್ತೇವೆ ಎಂದರೂ ನಮ್ಮಿಂದ ಕಳುಹಿಸುವುದಕ್ಕೆ ಇಷ್ಟವಿಲ್ಲ, ಅವರು ನಮ್ಮ ಮಧ್ಯೆ ಇರಬೇಕು, ಬಾಳಬೇಕು, ಭ್ರಾತೃ ಪ್ರೇಮದಿಂದ ಇರಬೇಕೆಂಬ ಏಕೈಕ ದೃಷ್ಟಿಯಿಂದ ನೋಡಬೇಕೇ ಹೊರತು, ಭಾಷೆಯ ವ್ಯಾಮೋಹವನ್ನು ಹೆಚ್ಚಾಗಿ ಬೆಳೆಸಿದರೆ ಅದರಿಂದ ಅನರ್ಥವೇ ಹೊರತು ಒಳ್ಳೆಯಪರಿಣಾಮವಾಗುವುದಿಲ್ಲ. ಇದನ್ನೂ ಕೂಡ ರಾಜ್ಯಪುನರ್‌ವಿಂಗಡಣೆ ಮಾಡಿರತ ಕ್ಕವರು ಅವರ ವರದಿಯಲ್ಲಿ ಹೇಳಿದ್ದಾರೆ. ಅದನ್ನೇ ದಿವಂಗತ ಜವಹರಲಾಲ್ ನೆಹರೂರವರು ಮನ ಸ್ಸಿನಲ್ಲಿಟ್ಟುಕೊಂಡು ಅನೇಕ ಸಾರಿ ಭಾಷಾ ವ್ಯಾಮೋಹದ ದುಷ್ಪರಿಣಾಮದ ಬಗೆಗೆ ಅವರ ಮನಸ್ಸು ಎಷ್ಟು ಕಲಕಿತ್ತು ಎಂಬುದನ್ನು ಲೋಕಸಭೆಯಲ್ಲಿ ಹೇಳಿದ್ದಾರೆ. ಭಾಷಾ ವ್ಯಾಮೋಹ ಒಂದು ಮಿತಿ ಯಲ್ಲಿರಬೇಕು ಅದು ದಾಟಿದರೆ ಕಹಿ ವಾತಾವರಣವನ್ನುಂಟುಮಾಡುತ್ತದೆ ಎಂಬುದನ್ನು ಅವರು ನೊಂದು ಹೇಳಿದ್ದಾರೆ. ಅದು ಇವತ್ತಿಗೂ ಕೂಡ ನಿಜವಾಗುತ್ತದೆ, ಎಂದೆಂದಿಗೂ ನಿಜವಾಗುತ್ತದೆ. ಆ ದೃಷ್ಟಿಯನ್ನಿಟ್ಟುಕೊಂಡು ಮೈಸೂರು ಮತ್ತು ಮಹಾರಾಷ್ಟ್ರ ಗಡಿ ಬಗ್ಗೆ ಮತ್ತೆ ವಿಚಾರ ಮಾಡ ತಕ್ಕ ಒಂದು ಅಪೂರ್ವವಾದ ಅವಕಾಶ ಏಕೆ ಉಂಟಾಯಿತು ಎಂಬುದನ್ನು ಮೊದಲೇ ಹೇಳಿದ ಹಾಗೆ ಇದು ಮೈಸೂರು ಮತ್ತು ಮಹಾರಾಷ್ಟ್ರಕ್ಕೆ ಸಂಬಂಧಪಟ್ಟ ಒಂದೇ ಒಂದು ಗಡಿ ಪ್ರಶ್ನೆ ಅಲ್ಲ, ನಮ್ಮ ಭಾರತ ದೇಶದಲ್ಲಿ ಪ್ರತಿಯೊಂದು ಕಡೆಯಲ್ಲೂ ಇದೆ. ಅಂತಹ ಸಂದರ್ಭದಲ್ಲಿ ಮಹಾರಾಷ್ಟ್ರ ಗಡಿ ವಿಷಯ ಎತ್ತುವುದರಿಂದ ಅದು ಬೃಹದಾಕಾರವನ್ನು ಹೊಂದತಕ್ಕ ಸನ್ನಿವೇಶ ಇದೆ. ಇಂತಹ ಅಪೂರ್ವ ವಾದ ಸನ್ನಿವೇಶ ಇದು. ಮೈಸೂರಿನ ಜನತೆಯಲ್ಲಿ ಒಂದು ಕೋಲಾಹಲವುಂಟಾಗಿ ದೇಶಾದ್ಯಂತ ಸತ್ಯಾಗ್ರಹ ಚಳುವಳಿಯುಂಟಾಗಿದೆ. ಅದು ಎಷ್ಟರಮಟ್ಟಿಗೆ ಆಗಿದೆ ಎಂದರೆ ನಮ್ಮ ಶಾಸನ ಸಭೆಯ ಅನೇಕ ಜನ ಸದಸ್ಯರು ತಮ್ಮ ಸದಸ್ಯತ್ವಕ್ಕೆ ರಾಜೀನಾಮೆ ಕೊಡುತ್ತೇವೆ ಅನ್ನುವ ಮಟ್ಟಕ್ಕೆ ಹೋಯಿತು. ಸತ್ಯಾಗ್ರಹದಲ್ಲಿ 40–50 ಜನ ಶಾಸನ ಸಭೆಯ ಸದಸ್ಯರು ಭಾಗವಹಿಸಿದ್ದರು ಎಲ್ಲ ಕ್ಕಿಂತ ಹೆಚ್ಚಾಗಿ ಶಾಸನ ಸಭೆಯ ಉಪಾಧ್ಯಕ್ಷರೂ ಕೂಡ ಭಾಗವಹಿಸಿ ಇದಕ್ಕೆ ಒಂದು ದೊಡ್ಡ ಕಳೆ ಯನ್ನು ಕೊಟ್ಟರು. ಇದರಿಂದ ಈ ಚಳುವಳಿಯ ಶಕ್ತಿ ಗೊತ್ತಾಗುತ್ತದೆ. ಇದು ಎಷ್ಟು ಶಕ್ತಿ ಯುತವಾದದ್ದು ಎಂದರೆ, ಅನೇಕ ಜನ ಮಂತ್ರಿಗಳೂ ಕೂಡ ತಮ್ಮ ಮಂತ್ರಿ ಪದವಿಯನ್ನು ತ್ಯಜಿಸು ತ್ತೇವೆ, ಇದಕ್ಕೆ ವಿರೋಧ ಮಾಡಬೇಕಾಗುತ್ತದೆ ಎಂಬ ತೀರ್ಮಾನ ಮಾಡತಕ್ಕ ದಾರಿಯಲ್ಲೂ ಕೂಡ ಹೋಗಿದ್ದಾರೆ. ಈ ಒಂದು ಮಟ್ಟಕ್ಕೆ ಬರಬೇಕಾಗಿದ್ದರೆ ಮೈಸೂರು ಜನತೆಯಲ್ಲಿ, ಎಲ್ಲಾ ವರ್ಗದ ಜನರಲ್ಲಿ ಎಂತಹ ಕೋಲಾಹಲಕರವಾದ, ಮನಸ್ಸು ಕರಗತಕ್ಕ ಸನ್ನಿವೇಶವನ್ನುಂಟುಮಾಡಿದೆ ಎಂಬು ದನ್ನು ಇವತ್ತಿನ ದಿವಸ ಯೋಚನೆ ಮಾಡಬೇಕಾಗಿದೆ. ಈ ಎಲ್ಲಾ ದೃಷ್ಟಿಯಿಂದ ನೋಡುವುದಾದರೆ, ಮೈಸೂರು ಮತ್ತು ಮಹಾರಾಷ್ಟ್ರ ಗಡಿಗೆ ಏಕ ಸದಸ್ಯ ಆಯೋಗವನ್ನು ಮಾಡುವ ಒಂದು ಸೂಚನೆ ಏನಿದೆ ಇದು ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ತೀರ್ಮಾನದ ಪ್ರಕಾರ ದೇಶದ ಮುಂದೆ ಬಂದಿದೆ. ಈ ಒಂದು ತೀರ್ಮಾನವನ್ನು ಕಾಂಗ್ರೆಸ್ ವರ್ಕಿಂಗ್ ಕಮಿಟಿ ಮಾಡಿದ್ದೇ ಆದರೆ ಇದಕ್ಕೆ ಮೈಸೂರು

ದೇಶದ ಜನತೆ ಅತ್ಯುಗ್ರವಾದ ವಿರೋಧ ಮಾಡಬೇಕಾಗುತ್ತದೆ. ಈ ಎಲ್ಲವನ್ನೂ ಕೂಡ ಮೈಸೂರು ದೇಶದ ಜನತೆ ಏಕವಾಕ್ಯದಿಂದ, ಏಕದೇಹದಂತೆ ನಿಂತು ಈ ಒಂದು ಏಕ ಸದಸ್ಯ ಆಯೋಗವನ್ನು ವಿರೋಧ ಮಾಡತಕ್ಕ ಸಂದರ್ಭ ಬರುತ್ತದೆ. ಅಂತಹ ಒಂದು ಕಹಿ ವಾತಾವರಣವನ್ನು ಕೇಂದ್ರದ ನಾಯಕರು ಗ್ರಹಿಸಬೇಕು. ಏಕ ಸದಸ್ಯ ಆಯೋಗ ಮಾಡಿ ಮಹಾರಾಷ್ಟ್ರ ಮತ್ತು ಮೈಸೂರು ಗಡಿಯನ್ನು ಮತ್ತೆ ಬದಲಾವಣೆ ಮಾಡುವುದಕ್ಕೆ ಹೋದರೆ ಇದು ಒಂದು ಹುಚ್ಚು ಸಾಹಸವಾದೀತು ಎಂಬುದನ್ನು ಇವತ್ತಿನ ದಿವಸ ಕೇಂದ್ರದ ನಾಯಕರಿಗೆ ಈ ಶಾಸನ ಸಭೆಯು ಮುಖಾಂತರ ಈ ಒಂದು ನಿರ್ಣಯವನ್ನು ಮಾಡಿ ಕಳುಹಿಸುವುದು ಸೂಕ್ತ ಎಂದು ಹೇಳುತ್ತಾ ಇದ್ದೇನೆ.

4-00 P.M.

ಈ ದಿವಸ ನಮಗೆ ಈ ಗಡಿ ಸಮಸ್ಯೆಯನ್ನು ಬಗೆಹರಿಸಿಕೊಳ್ಳಿ ಎಂದು ಹೇಳತಕ್ಕ ಕೇಂದ್ರದ ನಾಯಕರು, ಇಂಥ ಗಡಿ ಸಮಸ್ಯೆಗಳು ಭಾರತದಾದ್ಯಂತ್ಯವೂ ಇರುವುದರಿಂದ ಇಡೀ ಭಾರತಕ್ಕೆ ಅನ್ವಯವಾಗುವಂತೆ ಆ ಹಿಂದಿನ ಎಸ್. ಆರ್. ಸಿ. ಮಟ್ಟದಲ್ಲಿ ಏಕೆ ಒಂದು ಆಯೋಗವನ್ನು ರಚಿಸ ಬಾರದು ? ಹಾಗೆ ಕೇಂದ್ರದವರು ತಮ್ಮ ಒಂದು ನಿಲುವನ್ನು ತಾಳಿದ್ದರೆ ಅದರಲ್ಲಿ ಅರ್ಥವಿತ್ತು, ಹಾಗೆ ಮಾಡತಕ್ಕದ್ದು ನ್ಯಾಯವಾಗಿಯೂ ಇತ್ತು. ಆದರೆ ಅದನ್ನು ಆಲೋಚನೆ ಮಾಡದೆ ದೇಶಾದ್ಯಂತವೂ ಈ ಗಡಿಗಳಿಗೆ ಸಂಬಂಧಪಟ್ಟ ವಿವಾದಗಳಿದ್ದರೂ ಅವುಗಳನ್ನು ಪರಿಗಣಿಸದೆ, ತಮ್ಮ ಕಾಂಗ್ರೆಸ್ಸಿನ ಪಾರ್ಟಿಯ ಒಂದು ಬೆಂಬಲವಿದೆಯೆಂದು ಹೇಳಿ ಈ ದಿವಸ ಈ ಗಡಿ ಸಮಸ್ಯೆಯನ್ನು ಕೇವಲ ಮೈಸೂರು ಮತ್ತು ಮಹಾರಾಷ್ಟ್ರಕ್ಕೆ ಮಾತ್ರ ಅನ್ವಯಿಸಿ ಒಂದು ಏಕ ಸದಸ್ಯ ಆಯೋಗವನ್ನು ರಚಿಸಿರತಕ್ಕದ್ದು ಒಂದು ಕಣ್ಣಿಗೆ ಬೆಣ್ಣೆ ಒಂದು ಕಣ್ಣಿಗೆ ಸುಣ್ಣ ಹಚ್ಚಿದಂತಾಗಿದೆ. ಭಾರತ ಸರ್ಕಾರದ ಈ ನಿಲುವು ಬಹಳ ಅನಿಷ್ಟಕಾರಿಯಾದದ್ದು. ಇಂಥ ಒಂದು ಗೊಂದಲವನ್ನು ಅದರಲ್ಲೂ ಭಾರತ ದೇಶ ಅನೇಕ ದೊಡ್ಡ ದೊಡ್ಡ ಗಂಡಾಂತರಗಳನ್ನು ಎದುರಿಸಬೇಕಾಗಿರುವಂಥ ಈ ಪರ್ವ ಕಾಲದಲ್ಲಿ, ಆ ಭಯಂಕರ ಸಮಸ್ಯೆಗಳನ್ನು ತೀರ್ಮಾನ ಮಾಡದೆ ಅವರು ತಮ್ಮ ಗಮನವನ್ನು ಇತ್ತಕಡೆ ತಿರುಗಿಸಿರುವುದು ಅಷ್ಟು ಉಚಿತವಾದುದಲ್ಲ. ಒಂದು ರಾಜ್ಯದ ಗಡಿ ಸ್ವಲ್ಪ ಹೆಚ್ಚಿರ ಬಹುದು ಇನ್ನೊಂದು ಸಲ್ಪ ಕಡಮೆಯಾಗಿರಬಹುದು, ಇದೇನೂ ಅಂಥ ಪ್ರಾಮುಖ್ಯವಾದದ್ದಲ್ಲ. ಇದರಿಂದ ದೇಶಕ್ಕೆ ಇನ್ನೂ ಹೆಚ್ಚಿನ ಹಾನಿಯೇ ವಿನಾ ಇದರಿಂದ ದೇಶಕ್ಕೇನೂ ಅಷ್ಟು ಒಳ್ಳೆಯ ದಾಗುವುದಿಲ್ಲ. ದೇಶದಲ್ಲಿರತಕ್ಕ ಐಕಮತ್ಯ ಇದರಿಂದ ಕಲುಕುತ್ತದೆ. ನಾವು ಈ ದಿವಸ ನಮ್ಮಲ್ಲಿ ಸಾಕಷ್ಟು ಆಹಾರವನ್ನು ಬೆಳೆಸದೆ ಅದರ ಕಡೆಗೆ ತಮ್ಮ ಗಮನ ಕೊಡದೆ ದೇಶ ದೇಶಗಳಲ್ಲಿ ಆಹಾರ ಕ್ಕಾಗಿ ಭಿಕ್ಷೆ ಬೇಡಬೇಕಾದ ಪರಿಸ್ಥಿತಿ ಬಂದಿದೆ. ನಮ್ಮ ರಾಷ್ಟ್ರದ ಗಡಿಯಲ್ಲಿ ನಾವು ದೊಡ್ಡ ಶತೃಗಳನ್ನು ಎದುರಿಸಬೇಕಾಗಿರತಕ್ಕ ಸಂದರ್ಭದಲ್ಲಿ ಕೇಂದ್ರದವರೇಕೆ ದೇಶದಲ್ಲಿ ಇಂಥ ಅಪಾಯ ಕಾರಿಯಾದ ವಿಷಯವನ್ನು ಕೆಣಕಬೇಕಾಗಿತ್ತು ಎಂದು ಕೇಳುತ್ತೇನೆ. ಅವರ ನೀತಿ ಏನೆಂಬುದೇ ನನಗೆ ಅರ್ಥವಾಗುತ್ತಿಲ್ಲ. ನಮ್ಮ ಕೇಂದ್ರದ ನಾಯಕರೆಲ್ಲಾ ಇಷ್ಟು ಜ್ಞಾನ ಶೂನ್ಯವಾಗಿದ್ದಾರೆಯೇ ಎಂದು ನಾನು ಸೋಜಿಗ ಪಡಬೇಕಾಗಿದೆ. ಈ ವಿಚಾರದಲ್ಲಿ ನಾವು ಈ ದಿವಸ ಅವರಿಗೆ ಜ್ಞಾನದಾನ ಮಾಡುವ ದಾರಿ ಉಂಟಾಯಿತಲ್ಲಾ ಎಂದು ನನಗನಿಸುತ್ತಿದೆ.

ನಮ್ಮ ದೇಶ ಇಂದು ಎದುರಿಸಬೇಕಾಗಿರತಕ್ಕ ಘೋರ ಸಮಸ್ಯೆಗಳು ಅನೇಕವಿರುವಾಗ ಅವರು ದೇಶದಲ್ಲಿ ಇದ್ದಂಥ ಐಕಮತ್ಯವನ್ನು ಕಲುಕುವಂಥ ಕೆಲಸಕ್ಕೇಕೆ ಕೈಹಾಕಿದರು, ಈ ಗಡಿಗಳ ಕಲಹ ಕೊನೆಯಲ್ಲಿ ಯಾವ ಮಟ್ಟಕ್ಕೆ ಹೋಗುತ್ತದೆ ಎಂಬುದನ್ನು ಅವರು ಮನಗಾಣದಿದ್ದುದು ದುರ್ದೈವ ಸಂಗತಿ. ಇದರಿಂದ ದೇಶದಲ್ಲಿ ಇಲ್ಲಿಯವರೆಗೂ ಸಾಧಿಸಿದ್ದ ಭ್ರಾತೃತ್ವ ನಾಶವಾಗುವಂಥ ವಿಚಾರಕ್ಕೆ ಅವರು ಕೈಹಾಕಿದ್ದಾರೆ. ಅವರು ಇದನ್ನು ಆಳವಾಗಿ ಆಲೋಚನೆ ಮಾಡಲಿಲ್ಲ ಎಂದು ನಾನು ಹೇಳಬೇಕಾಗಿದೆ. ಈ ದಿವಸ ಕೇಂದ್ರದ ನಾಯಕರು ಮಾಡಿರತಕ್ಕ ಕೆಲಸ ಮೈಸೂರಿ ನವರಿಗೂ ಮತ್ತು ಮಹಾರಾಷ್ಟ್ರದವರಿಗೂ ಇಲ್ಲಿಯವರೆಗೂ ಬೆಳೆದು ಬಂದಿದ್ದ ಭ್ರಾತೃತ್ವವನ್ನು ಕಡಿದುಹಾಕಿ ಇವರು ಇಬ್ಬರೂ ಬಂಧುಗಳಾಗಿ ಬೆಳೆಯುತ್ತಿದ್ದವರು ಭಯಂಕರ ಕಲಹಕ್ಕೆ ತೊಡಗು ವಂತೆ ಮಾಡಿದ್ದಾರೆ. ಈ ಉದ್ದೇಶ ಖಂಡಿತ ದೇಶಕ್ಕೆ ಒಳ್ಳೆಯದನ್ನು ಮಾಡುವುದಿಲ್ಲ. ಈ ದಿವಸ ಮಹಾರಾಷ್ಟ್ರಕ್ಕೆ ಸೇರಿರುವ ಬೊಂಬಾಯಿನಲ್ಲಿ ನಮ್ಮ ಕನ್ನಡಿಗರೆಷ್ಟು ಜನರಿಲ್ಲ ? ನಮ್ಮ ಬೆಂಗಳೂರಿನಲ್ಲಿ ಎಷ್ಟು ಮಹಾರಾಷ್ಟ್ರೀಯರಿಲ್ಲ ? ಸಾಮಾನ್ಯವಾಗಿ ಕನ್ನಡಿಗರಲ್ಲಿ ಭಾಷಾವ್ಯಾಮೋಹವಿದ್ದರೂ ಅದು ಬೇರೆ ರಾಜ್ಯಗಳಲ್ಲಿರುವಂತೆ ಇರುವುದಿಲ್ಲ. ಇಲ್ಲಿ ಅನೇಕರು ತಮಿಳು ಮಾತನಾಡತಕ್ಕ ಜನರಿದ್ದಾರೆ. ಕನ್ನಡಿಗರು ಒಂದು ಭ್ರಾತೃಭಾವನೆಯಿಂದ ತಮಗೆ ತಮಿಳು ಭಾಷೆಬಾರದಿದ್ದರೂ ತಮಿಳರನ್ನು ಕಂಡಾಗ ತಮಿಳಿನಲ್ಲೇ ಮಾತನಾಡುವುದಕ್ಕೆ ಪ್ರಯತ್ನಮಾಡುತ್ತಾರೆ. ಅಂದರೆ ಇವರು ಹಟವಾದಿ ಗಳಲ್ಲ. ಈ ಭಾಷಾ ವಿಚಾರದಲ್ಲಿ ದೇಶದಲ್ಲಿ ಯಾರೂ ಹಟಮಾರಿತನಕ್ಕೆ ಅವಕಾಶ ಕೊಡಬಾರದು.

(ಶ್ರೀ ಎಸ್. ಶಿವಪ್ಪ)

ಆದರಿಂದ ದೇಶಕ್ಕೆ ಒಳ್ಳೆಯದಾಗುವುದಿಲ್ಲ. ಭಾರತ ದೇಶ ತನ್ನ ಶತ್ರುಗಳನ್ನು ತುಳಿದು, ಮೆಟ್ಟಿ ತನ್ನ ತಲೆಯನ್ನೆತ್ತಿಕೊಂಡು ನಿಲ್ಲುವಂಥ ಒಂದು ಸನ್ನಿವೇಶ ಒದಗಿರುವಾಗ ಇಂತಹ ಅಂತಃಕಲಹಗಳನ್ನು ತಂದು ಹಾಕಿ ಭಾರತದ ಒಗ್ಗಟ್ಟಿಗೆ ಧಕ್ಕೆ ಬರುವಂತೆ ಮಾಡುವುದು ಉಚಿತವಾದುದಲ್ಲ. ಆದುದರಿಂದ ಈ ದಿವಸ ಈ ಮಾನ್ಯ ಸಭೆ ದಿಟ್ಟತನದಿಂದ ಆ ಏಕಸದಸ್ಯ ಆಯೋಗದ ವಿಚಾರದಲ್ಲಿ ಅದನ್ನು ತಳ್ಳಿಹಾಕತಕ್ಕ ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕಾಗಿದೆ. ಈ ದಿವಸ ಕೇಂದ್ರದವರು ಮೈಸೂರು ಮತ್ತು ಮಹರಾಷ್ಟ್ರ ಗಡಿ ನಿರ್ಣಯಕ್ಕಾಗಿ ನೇಮಕ ಮಾಡಿರತಕ್ಕ ಏಕ ಸದಸ್ಯ ಆಯೋಗ ನ್ಯಾಯಬದ್ಧವಾದುದಲ್ಲ, ಇದಕ್ಕೆ ದೇಶದಲ್ಲಿರತಕ್ಕ ಕನ್ನಡಿಗರೆಲ್ಲಾ ಏಕ ಕಂಠದಿಂದ ವಿರೋಧವನ್ನು ಸೂಚಿಸುತ್ತಿದ್ದಾರೆಂಬ ಕೂಗು ಡೆಲ್ಲಿಗೆ ಮುಟ್ಟುವಂತೆ ಮಾಡಬೇಕು. ಈ ಹಿಂದೆ ನಮ್ಮ ಪ್ರಧಾನಿಯವರು ಬೊಂಬಾಯಿನಗರದಲ್ಲಿ ಚೌಪಾತಿಯಲ್ಲಿ ಒಂದು ಕಡೆ ಬಹಿರಂಗ ಭಾಷಣವನ್ನು ಮಾಡುತ್ತಾ ಅಲ್ಲಿದ್ದ ಮಹರಾಷ್ಟ್ರಿಯರಿಗೆ ನಿಮ್ಮ ಈ ಕೂಗು ಆ ಬೆಳಗಾಮಿಗೆ ಕೇಳಿಸುವಂತಾಗಬೇಕು ಎಂದು ಭಾಷಣದಲ್ಲಿ ಹೇಳಿದ್ದಾರೆ. ಮಹಾರಾಷ್ಟ್ರವಾದರೂ ಭಾರದಲ್ಲಿ ಒಂದು ರಾಜ್ಯ ಮಾತ್ರ. ಅದರಂತೆ ಭಾರತದಲ್ಲಿ ಇನ್ನೂ ಎಷ್ಟೋ ರಾಜ್ಯಗಳಿರುತ್ತವೆ. ಅವುಗಳನ್ನೆಲ್ಲಾ ಅವರು ಒಂದು ಸರಿಸಮಾನ ಭಾವನೆಯಿಂದ ನೋಡಬೇಕೇ ವಿನಾ ಒಂದನ್ನು ಒಂದು ರೀತಿ ಮತ್ತೊಂದನ್ನು ಮತ್ತೊಂದು ರೀತಿ ನೋಡತಕ್ಕದ್ದು ಸರಿಯಾದ್ದಲ್ಲ. ಆ ದಿವಸ ಅವರು ಆ ಚೌಪಾತಿಯಲ್ಲಿ ಹೇಳಿದಂತೆ ನಾವೂ ಈ ದಿವಸ ನಮ್ಮ ಈ ಏಕನಾಯಕತ್ವದ ಆಯೋಗವನ್ನು ವಿರೋಧಿಸತಕ್ಕ ಕೂಗು ದೆಹಲಿಯವರೆಗೂ ಹೋಗಿ ತಗಲಬೇಕು ಎಂದರೆ ಇದರ ಪರಿಣಾಮವೇನಾಗುವುದು ? ಇಲ್ಲಿಯವರೆಗೂ ಕನ್ನಡಿಗರಾದ ನಾವು ಮಹರಾಷ್ಟ್ರಿಯರಲ್ಲಿ ಬೆಳೆಸಿದ್ದ ಭ್ರಾತೃತ್ವ ಏನಾಗುತ್ತದೆ! ದೇಶಕ್ಕೆ ಇದರಿಂದ ಎಷ್ಟು ಅಪಾಯವಾಗುತ್ತದೆ ! ಈ ದಿವಸ ಇಲ್ಲಿ ಜನರು ಹೂಡತಕ್ಕ ಚಳವಳಿ ನಾಳೆ ಯಾವ ರೂಪವನ್ನು ತಾಳುತ್ತದೆ ಎಂಬುದನ್ನು ಶ್ರೀಮಾನ್ ನಿಜಲಿಂಗಪ್ಪನವರಿಗಾಗಲೀ ಅಥವಾ ಶಿವಪ್ಪನಿಗಾಗಲೀ ಹೇಳುವುದಕ್ಕೆ ಸಾಧ್ಯವಿಲ್ಲ. ರಾಜಕೀಯ ಚಳವಳಿಗಳಿಂದ ದೇಶಕ್ಕೆ ದೊಡ್ಡ ಹಾನಿಯಾಗಬಹುದು. ಈ ವಿಚಾರದಲ್ಲಿ ಇಲ್ಲಿಯವರೆಗೂ ಕೇಂದ್ರದವರು ಅನುಸರಿಸಿರತಕ್ಕ ನೀತಿ ಸರಿಯಾದುದಲ್ಲ. ಇನ್ನು ಮುಂದಾದರೂ ಕೇಂದ್ರದ ನಾಯಕರು ಇಂಥದಕ್ಕೆ ಅವಕಾಶ ಕೊಡದಂತೆ ತಡೆಗಟ್ಟಲು ಈ ಮಾನ್ಯ ಸಭೆ ಒಂದು ಐಕ್ಯಮತ ತೀರ್ಮಾನವನ್ನು ತೆಗೆದುಕೊಳ್ಳಬೇಕಾಗಿದೆ. ಇದು ಒಂದು ಪಕ್ಷಾತೀತವಾದ ಪ್ರಶ್ನೆ, ಕನ್ನಡಿಗರಿಗೆ ಸಂಬಂಧಪಟ್ಟ ಪ್ರಶ್ನೆ, ಕನ್ನಡ ರಾಜ್ಯದ ಗೌರವವನ್ನು ಎತ್ತಿ ಹಿಡಿಯಬೇಕಾದ ಪ್ರಶ್ನೆ. ಆದುದರಿಂದ ನಾನು ತಮ್ಮೆಲ್ಲರಲ್ಲೂ ಬಿನ್ನವಿಸಿಕೊಳ್ಳುವುದೇನೆಂದರೆ, ತಾವೆಲ್ಲರೂ ಇದರಲ್ಲಿ ತಮ್ಮ ತಮ್ಮ ವೈಯುಕ್ತಿಕ ಭಿನ್ನಾಭಿಪ್ರಾಯಗಳನ್ನು ದೂರವಿಟ್ಟು ತಾವೆಲ್ಲರೂ ಏಕಾಭಿಪ್ರಾಯದಿಂದ ಇದನ್ನು ಅಂಗೀಕರಿಸಿ ಏಕ ಸದಸ್ಯ ಆಯೋಗವನ್ನು ರದ್ದು ಮಾಡುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇದು ಕೇವಲ ನಮ್ಮ ಕಾಲಕ್ಕೆ ಮಾತ್ರ ಅನ್ವಯಿಸತಕ್ಕದ್ದಲ್ಲ, ಇದು ನಮ್ಮ ಮಕ್ಕಳ ಮೊಮ್ಮಕ್ಕಳ ಕಾಲಕ್ಕೆ ಯಾವತ್ತೂ ಶಾಶ್ವತವಾಗಿ ನಿಲ್ಲತಕ್ಕಂಥ ವಿಚಾರ, 2 ಕೋಟಿ 40 ಲಕ್ಷ ಜನ ಕನ್ನಡಿಗರಿಗೆಲ್ಲಾ ಸಂಬಂಧಪಟ್ಟ ಪ್ರಶ್ನೆ ಇದಕ್ಕೆ ತಾವೆಲ್ಲರೂ ತಮ್ಮ ಶಕ್ತಿಯನ್ನು ಕೇಂದ್ರೀಕರಿಸಿ ನಮ್ಮೆಲ್ಲರ ವಿರೋಧವನ್ನೂ ದೆಹಲಿಗೆ ಮುಟ್ಟುವಂತೆ ಮಾಡಬೇಕು. ಆದರೆ ಈ ದಿವಸ ದೆಹಲಿಯಲ್ಲಿ ನಮ್ಮವರು ಅಷ್ಟು ಪ್ರಭಾವಶಾಲಿಗಳು ಇಲ್ಲದಿರಬಹುದು, ನಮ್ಮ ಕೂಗು ಅಲ್ಲಿ ಅಷ್ಟು ಪ್ರಾಜ್ವಲ್ಯ ಮಾನಕ್ಕೆ ಬಾರದಿರಬಹುದು ; ಆದರೂ ನಾವು ಈ ದಿವಸ ಕೇಂದ್ರದವರ ದರ್ಪಕ್ಕೆ ತಲೆಬಾಗಬಾರದು. ನಮ್ಮ ನಿಲುವು ನ್ಯಾಯವಾದದ್ದು. ಕೇಂದ್ರದವರಿಗೆ ಎಲ್ಲಾ ರಾಜ್ಯಗಳ ಮೇಲೂ ಒಂದೇ ವಿಧವಾದ ಭಾವನೆಯಿರಬೇಕು ಅವರ ಪ್ರೀತಿ ಎಲ್ಲರ ಬಗ್ಗೆಯೂ ಒಂದೇ ರೀತಿಯಲ್ಲಿ ಹೊರಳಬೇಕು, ಅರಳಬೇಕು. ಇದರಲ್ಲಿ ಪಕ್ಷ ಭಾವನೆಗೆ ಅವಕಾಶವಿಲ್ಲ. ಎಲ್ಲರೂ ಏಕಮುಖನಾಗಿ ಒಂದು ತೀರ್ಮಾನಕ್ಕೆ ಬರಬೇಕಾದ್ದು ಅತ್ಯಗತ್ಯ. ಹೀಗಾದರೇನೇ ನಾವು ಆ ಏಕ ಸದಸ್ಯ ಆಯೋಗವನ್ನು ತಳ್ಳಿ ಹಾಕುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲಿಯವರೆಗೂ ಹೇಳಲಾಗುತ್ತಿದ್ದ ಮೈಸೂರು ಮತ್ತು ಕೇರಳ ರಾಜ್ಯಗಳ ಗಡಿ ಪ್ರಶ್ನೆಯ ವಿಚಾರದಲ್ಲಿ ಈ ದಿವಸ ಅಲ್ಲಿಯ ರಾಜ್ಯಪಾಲರು ಅಲ್ಲಿ ರಾಜ್ಯಪಾಲರ ಆಡಳಿತವಿರುವುದರಿಂದ ಅಲ್ಲಿ ಗಡಿ ಪ್ರಶ್ನೆಯನ್ನು ಎತ್ತುವುದಕ್ಕೆ ಅವಕಾಶವಿಲ್ಲ ಎಂದು ತಿಳಿಸಿದ್ದಾರೆ. ಅಂದಮೇಲೆ ಇನ್ನು ಉಳಿದಿರತಕ್ಕದ್ದು ಯಾವುದು? ಮೈಸೂರು ಮತ್ತು ಮಹಾರಾಷ್ಟ್ರದ ಗಡಿ ಪ್ರಶ್ನೆಯೊಂದು ಮಾತ್ರ. ಏಕ ಸದಸ್ಯ ಆಯೋಗವನ್ನು ರಚಿಸಿದ್ದು ಈ ಒಂದರ ಗಡಿಯ ವಿಚಾರಕ್ಕಾಗಿ ಅಲ್ಲ. ಆದುದರಿಂದ ನಾವು ಇದನ್ನು ಧಿಕ್ಕರಿಸಲೇಬೇಕು ; ಏಕ ವಾಕ್ಯದಿಂದ ಇದನ್ನು ತಿರಸ್ಕರಿಸಬೇಕು. ನಾವು ನಮ್ಮ ಮೈಸೂರು ರಾಜ್ಯದ ಕೀರ್ತಿಯನ್ನು ಎತ್ತಿ ಹಿಡಿಯಬೇಕು, ಇದಕ್ಕೆ ಎಲ್ಲರೂ ಒಮ್ಮತದ ಸಹಕಾರವನ್ನು ನೀಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

MR. CHAIRMAN.—Sri Suryanarayana Rao can move his amendment now.

SRI K. S. SURYANARAYANA RAO.—Sir, I beg to move :

" That At the end of the motion, add the words :—

" and on such consideration the House recommends to the Government to urge on the Government of India, to drop the proposed setting up of the one man Commission."

MR. CHAIRMAN.—Amendment moved :

" That at the end of the motion, add the words :—

" and on such Consideration the House recomends to the Government to urge on the Government of India to drop the proposed Setting up of the one man Commission."

Now both the motion and the amendment one before the House. I call upon Sri S. M. Krishna to speak.

SRI V. S. PATIL.—Sir, I have also moved amendments. I have handed them over to the Secretary and the Speaker had promised to consider it.

MR. CHAIRMAN.—Those amendments have not been considered, and when those amendments are considered they will be taken up.

SRI V. S. PATIL.—They have not been rejected.

MR. CHAIRMAN.—The question of moving those amendments does not arise. Sri S. M. Krishna may continue his speech.

ಶ್ರೀ ಎಸ್. ಎಂ. ಕೃಷ್ಣ (ಮದ್ದೂರು).—ಸ್ವಾಮೀ, ಶ್ರೀಮಾನ್ ಶಿವಪ್ಪನವರು ಈಗತಾನೇ ಸವಿಸ್ತಾರವಾಗಿ ನಮ್ಮ ರಾಜ್ಯದಲ್ಲಿಪರಿಣಮಿಸಿರತಕ್ಕಂತಹ ಅಪೂರ್ವವಾದಂತಹ ವಾತಾವರಣದ ಕಡೆಗೆ ಈ ಸಭೆಯ ಮತ್ತು ದೇಶದ ಗಮನವನ್ನು ಸೆಳೆದಿದ್ದಾರೆ. ಭಾರತ ದೇಶ ಹಿಂದೆ ಹಲವಾರು ಬಾರಿ ಇಂತಹ ಸಮಸ್ಯೆಗಳನ್ನು ಎದುರಿಸಿದ್ದೂ ಆಗಿದೆ. 1956ನೇ ಇಸವಿಯ ಹಿಂದೆ ಭಾರತದಲ್ಲೆಲ್ಲಾ ಒಂದು ಸಮಾಧಾನಕರವಾದ ಆಡಳಿತವಾಗಬೇಕಾದರೆ ಭಾಷಾವಾರು ತತ್ವದ ಆಧಾರದ ಮೇಲೆ ರಾಜ್ಯಗಳ ಪುನರ್ವಿಂಗಡಣೆಯಾದರೆ ದೇಶದಲ್ಲಿ ಸಮಾಧಾನ ಉಂಟಾದೀತು ಮತ್ತು ಜನಗಳಿಗೆ ಅದರಿಂದ ಒಳಿತಾದೀತೇನೋ ಎಂದು ಆಗ ಒಂದು ದೊಡ್ಡ ಚಳುವಳಿ ಕೂಡ ಆಯಿತು. ಆ ಚಳುವಳಿಗೆ ಉತ್ತರ ರೂಪವಾಗಿ ಕೇಂದ್ರ ಸರಕಾರ ಹಾಗೂ ರಾಜ್ಯ ಸರಕಾರ......

† SRI V. S. PATIL.—Sir, On a Point of Order, Sir. The present motion is moved by the Leader of the Opposition and if it is to be governed by Rule 279 of the Rules of Procedure, *i.e.*, a motion that the policy or situation or statement or any other matter be taken into consideration, shall not be put to the vote of the Assembly even the present motion is to be governed by Rule 279. Then the question of moving any amendments does not arise; no amendments can be moved to such a Resolution. But, if it is to be governed by Chapter XVI of the Rules of Procedure—Rule 151, the Speaker shall, at the appointed hour on the allotted day or the last of the allotted days, as the case may be, forthwith put every question necessary to determine the decision of the Assembly on the original question. This Chapter relates to the Motions. In this whole Chapter XVI.

(Sri V. S. Patil)

there is no provision for moving any amendments at all to the motion before this House. An amendment can be moved only if the motion is a Resolution, which must be governed by Chapter XV. With regard to the present motion that is before the House, I would like to know if it is a Resolution under Chapter XV. Then alone an amendment can be moved. If it is a mere motion under Chapter XVI, then there is no provision for moving any amendment, and if it is to be merely a motion for expressing the views of the different hon'ble members, *i.e.*, without taking any vote of this august House, then it is governed by Rule 279. I had a talk with the Hon'ble Speaker that the present motion is to be governed by Rule 279. Is it in order to allow any amendment to the present motion that is being discussed now ?

Sri C. J. MUCKANNAPPA.—Sir, I rise to a Point of Order, My friend, Sri Patil, has no right to point out this because he is too late in the day. He has opened his eyes after the Speaker has given the ruling.

Mr. CHAIRMAN.—That is exactly what I wanted to tell him.

Sri V. S. PATIL.—Sir, let me answer my friend, Sri Muckannappa and then you can give a ruling. For the reason put forth by my friend, Sri Muckannappa, even if the Speaker allows the amendment to be moved, if it is against the rules prescribing the conduct of business of this House, I have quoted all the rules, Chapter XV, Chapter XVI and Rule 279. If the permission granted by the Chairman is against these rules, I submit that the permission will have to be withdrawn and the intermediate thing that has been done, *i.e.*, moving of the amendment, will have to be deleted from the proceedings of this House.

(Mr. Speaker in the Chair)

† Sri ANNARAO GANAMUKHI (Afzalpur).—Sir, the Speaker after the completion of the speech of the Leader of the Opposition and before the second Speaker began, a member who had given notice of the motion was allowed to move the amendment to the motion. It is an amplification of the original resolution itself. So, this amplified resolution in the shape of an amendment was moved with the permission of the Speaker by Sri K. S. Suryanarayana Rao and the Speaker was pleased to say that along with the original motion, the other amendment or motion moved by Sri K. S. Suryanarayana Rao was also before the House and both of them may be discussed together. That was the purport of the Ruling given by the Speaker. Now, the objection raised by the hon'ble member Sri V. S. Patil, is under Rule 279 of the Rules of Procedure. Here, it is clearly stated that the House will discuss the main motion and before the question shall be put or before the conclusion of the debate, a member can also move a substantive motion in appropriate terms to be approved by the Speaker. The Speaker has approved the motion moved by Sri Suryanarayana Rao and it has become already the property of the House.

Mr SPEAKER.—When did the Speaker approve ?

Sri ANNARAO GANAMUKHI.—Just now. The Speaker said that both the original motion and the amendment moved by the Hon'ble Member Sir Suryanarayana Rao are before the House.

Mr. SPEAKER.—What is it that he wants to move ? Sri Suryanarayana Rao may tell me.

Sri K. S. SURYANARAYANA RAO (Mysore City).—Under Rule 279 a Substantive motion was moved. This has happened when you were not in the seat. This is a substantive motion which I have already given notice of. That is what I have moved. The Speaker was pleased to say that both of them are before the House and the House started discussing. When I sent the amendment I was under impression that I have given under Chapter 16. There was a little doubt in my mind with regard to its admissibility. Therefore, I have given immediately a substantive motion under article 279 thinking the technicality may come in the way of the House in expressing its opinion on the subject matter before the House. Therefore I originally intended to move the substantive motion and since I did not properly put it in a proper form I corrected it myself and put it in the proper form. Only for clarification and amplification of the motion that is already moved by the Leader of the Opposition, this substantive motion is moved. Therefore what I have moved is only a substantive motion enabling this House on the subject not to plead or blame any body, but to kindly reject the point of order raised by Sri V. S. Patil.

Mr. SPEAKER.—Hon'ble member Sri Suryanarayana Rao has given notice of an amendment. Now he pleads the amendment may not be in order. He wants to put it on a safe ground by sending a resolution. It is still in my hands and it has not beeu admitted. It has not been circulated to the members and a copy has not been supplied to them. Sri Suryanarayana Rao himself entertains doubt whether the motion of the type is in proper form. If the amendment which might have come in the shape of substantive motion is rejected on certain principles, the matter ends there. If he wants a ruling on that I have no objection.

Sri V. S. PATIL.—What about the point of order.

Mr. SPEAKER.—I will give a ruling tomorrow.

† ಶ್ರೀ ಎಸ್. ಎಂ. ಕೃಷ್ಣ.—ಭಾಷಾವಾರು ತತ್ವಗಳ ಆಧಾರದ ಮೇಲೆ ರಾಜ್ಯಗಳನ್ನು ಪುನರ್ವಿಂಗಡನೆ ಮಾಡಿದರೆ ರಾಷ್ಟ್ರದ ಹಿತವನ್ನು ಕಾಪಾಡುವುದಕ್ಕೆ ಸಹಾಯವಾಗುತ್ತದೆ ಎನ್ನತಕ್ಕಂಥ ಅಭಿಪ್ರಾಯ ಬಂದು 1956ನೇ ಇಸವಿಯಲ್ಲಿ ಸರಿಯೋ ತಪ್ಪೋ, ಎಲ್ಲರಿಗೂ ಸಮಾಧಾನಕರವಾಗಿಯೋ ಅಥವಾ ಕೆಲವರಲ್ಲಿ ಅಸಮಾಧಾನಕ್ಕೆ ಸಾಕಾದಷ್ಟು ಅವಕಾಶಗಳನ್ನು ಉಂಟು ಮಾಡಿಯೋ ರಾಜ್ಯಗಳನ್ನು ವಿಂಗಡನೆ ಮಾಡಿದ್ದಾಯಿತು. 10 ವರ್ಷಗಳ ಕಾಲ ಈ ರಾಜ್ಯಗಳು ನಡೆದುಕೊಂಡು ಬಂದಿವೆ. ಈಗ ಮತ್ತೆ ಈ 10 ವರ್ಷಗಳು ಬೇರೂರಿರತಕ್ಕಂಥ ರಾಜ್ಯ ರಾಜ್ಯಗಳ ಗಡಿಗಳನ್ನು ಒತ್ತರಿಸುವುದಕ್ಕೆ ಅಥವಾ ಬದಲಾವಣೆ ಮಾಡುವುದಕ್ಕೆ ಹಲವಾರು ಪ್ರಯತ್ನಗಳು ಹಿಂದೆ ನಡೆದಿದ್ದರೂ ಕೂಡ, ಈ ದಿವಸ ಅದು ಸಾಧ್ಯವಾಗಬಹುದಾದಂತಹ ರೀತಿಯಲ್ಲಿ ಪ್ರಯತ್ನಗಳು ನಡೆದಿರುವುದರಿಂದ ನಮ್ಮ ರಾಜ್ಯದಲ್ಲಿ ಅಸಮಾಧಾನ ಉಂಟಾಗಿದೆ. ನಮ್ಮ ರಾಜ್ಯದಲ್ಲ ಜನಗಳಿಗೆ ಜಿಗುಪ್ಸೆ ಮತ್ತು ಅತೃಪ್ತಿ ಉಂಟಾಗಿದೆ. ಇದರಿಂದ ಉದ್ಭವವಾಗಿರುವ ಪರಿಸ್ಥಿತಿಯನ್ನು ಶಾಸನ

(ಶ್ರೀ ಎಸ್. ಎಂ. ಕೃಷ್ಣ)

ಸಭೆಯು ಗಮನಕ್ಕೆ ತೆಗೆದುಕೊಳ್ಳಬೇಕಾಗಿದೆ. ಮತ್ತು ಇದಕ್ಕೆ ಪರಿಹಾರವನ್ನು ಹುಡುಕುವುದಕ್ಕಾಗಿ ನಾವೆಲ್ಲರೂ ಸಾಮೂಹಿಕವಾಗಿ ಪ್ರಯತ್ನ ಮಾಡತಕ್ಕಂಥದ್ದು ಬಹಳ ಅಗತ್ಯವೆಂದು ನನಗೆ ಕಾಣಿಸುತ್ತದೆ. ಈ ಸಮಸ್ಯೆಯ ಮೂಲಕ್ಕೆ ಹೋಗುವ ಮೊದಲು ಶ್ರೀಮಾನ್ ಶಿವಪ್ಪನವರು ಹೇಳಿದಂತಹ ಹಲವಾರು ದೊಡ್ಡ ಸಮಸ್ಯೆಗಳು ನಮ್ಮನ್ನು ಕಾದಿರುವಾಗ ಆ ಎಲ್ಲಾ ಸಮಸ್ಯೆಗಳನ್ನು ಬದಿಗೊತ್ತಿ ಈ ಗಡಿ ಸಮಸ್ಯೆಯನ್ನು ಬೃಹಥಾಕಾರವಾಗಿ ಮಾಡಿ ದೇಶದ ಜನರಲ್ಲಿ ಗೊಂದಲವನ್ನು ಎಬ್ಬಿಸಿದಂತಹ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ನಿರ್ಣಯದ ಬಗ್ಗೆ 2 ಮಾತುಗಳನ್ನು ಹೇಳಬೇಕಾಗಿದೆ. ನನಗೆ ಶಕ್ತಿ ರಾಜಕೀಯದಲ್ಲಿ ಆಸಕ್ತಿ ಇಲ್ಲ. ಆದರೆ ರಾಷ್ಟ್ರದ ರಾಜಕೀಯದಲ್ಲಿ ಸಾಕಾದಷ್ಟು ಆಸಕ್ತಿ ಇದೆ. ಕೆಲವು ಜನ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ನಿರ್ಣಯದ ಬಗ್ಗೆ ಆದರಲ್ಲೂ ಶ್ರೀಮಾನ್ ನಿಜಲಿಂಗಪ್ಪನವರ ಪಾತ್ರ ಇವುಗಳ ಬಗ್ಗೆ ಒಂದು ದೊಡ್ಡ ಗೊಂದಲ ಎದ್ದಿದೆ. ನಾನು ಈ ವೇದಿಕೆಯಿಂದ ಬಹಳ ಗಂಭೀರವಾಗಿ ಈ ದಿವಸ ಶ್ರೀಮಾನ್ ನಿಜಲಿಂಗಪ್ಪನವರ ಪಾತ್ರವನ್ನು ಪ್ರಶ್ನಿಸಲು ನಿಂತಿದ್ದೇನೆ. ಯಾವ ದೃಷ್ಟಿಯಿಂದ ಅವರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ನಿರ್ಣಯಕ್ಕೆ ಸಹಭಾಗಿಗಳಾದರು ಎಂಬುದನ್ನು ಈ ದಿವರ ನಮ್ಮ ದೇಶದ ಜನಕ್ಕೆ ಸ್ಪಷ್ಟವಾಗಿ ತಿಳಿಸಬೇಕಾದಂತಹ ಕಾಲ ಸನ್ನಿಹಿತವಾಗಿದೆಯೆಂದು ನಾನು ಭಾವನೆ ಮಾಡುತ್ತೇನೆ. ಮಹಾರಾಷ್ಟ್ರದವರ ಅಭಿಪ್ರಾಯವೇನೇ ಇರಲಿ, ಬಂಗಾಳದವರ ಅಭಿಪ್ರಾಯವೇನೇ ಇರಲಿ, ನಮ್ಮ ರಾಜ್ಯದ ಮುಖ್ಯಮಂತ್ರಿಯವರ, ಅಂದರೆ, ಈ ರಾಜ್ಯದ ಶಾಸನಸಭೆಯ ನಾಯಕರ ಪಾತ್ರವನ್ನು ನಾವು ಈ ದಿವಸ ವಿಮರ್ಶೆ ಮಾಡಬೇಕಾಗಿದೆ. ದೇಶದಲ್ಲಿ ಇನ್ನಾವ ಸಮಸ್ಯೆಗಳೇ ಇಲ್ಲವೆ, ದೇಶದಲ್ಲಿರುವ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಿ ಅನಂತರ ನಮ್ಮ ತುರುಬಿಗೆ ಮಲ್ಲಿಗೆ ಹೂವನ್ನು ಮುಡಿಸಬಹುದು. ಈ ಭಾಷಾವಾರು ಪ್ರಶ್ನೆಯನ್ನು ನಿಧಾನವಾಗಿ ತೆಗೆದುಕೊಳ್ಳಬಹುದಾಗಿತ್ತು. ಈಗ ರೂಪಾಯಿಗೆ ಮುಖಭಂಗವಾಗಿದೆ. ದೇಶದಲ್ಲಿ ಕ್ಷಾಮವಿಲ್ಲದಿದ್ದರೂ ಕ್ಷಾಮ ಬರುವ ಸನ್ನಿವೇಶಗಳು ಕಾಣುತ್ತಿವೆ.

4-30 P.M.

ನಿರುದ್ಯೋಗ ಸಮಸ್ಯೆ ದಿನೇ ದಿನೇ ಜಾಸ್ತಿಯಾಗುತ್ತಿದೆ. ದಿನೇ ದಿನೇ ಏರತಕ್ಕ ಜನಸಂಖ್ಯೆ ಎಲ್ಲರನ್ನೂ ಒಂದು ಭಯಂಕರ ಪರಿಸ್ಥಿತಿಗೆ ತರುತ್ತಿದೆ. ಭಾರತದ ಗಡಿಗಳೇ ಭದ್ರವಾಗಿ ಇಲ್ಲದೇ ಇರತಕ್ಕಂಥ ದುರ್ಭರವಾದ ಸನ್ನಿವೇಶ ಇದೆ. ಚೈನಾ ದೇಶದವರು ನಮ್ಮ ದೇಶದ ಹತ್ತಾರು ಸಾವಿರ ಚದರಮೈಲಿಗಳನ್ನು ಅವರ ವಶದಲ್ಲಿಟ್ಟುಕೊಂಡಿದ್ದಾರೆ. ಪಾಕೀಸ್ಥಾನದವರು ಆಕ್ರಮಣ ಮಾಡುವುದಕ್ಕೆ ಸನ್ನಾಹವಾಗಿ ನಿಂತಿದ್ದಾರೆ. ಹೀಗೆ ಭಾರತದ ಗಡಿಗಳೇ ಭದ್ರವಾಗಿಲ್ಲದೇ, ದುಃಖಕರವಾದ ಮತ್ತು ಸಂದಿಗ್ಧವಾದ ಕಾಲದಲ್ಲಿ ಮಹಾರಾಷ್ಟ್ರದವರು ತಮ್ಮ ಗಡಿಯನ್ನು ಭದ್ರ ಮಾಡುವುದಕ್ಕೆ ಹೊರಟರೆ, ಕನ್ನಡನಾಡಿನ ಗಡಿಯನ್ನು ಭದ್ರಮಾಡುವುದಕ್ಕೆ ಕನ್ನಡಿಗರು ಟೊಂಕಕಟ್ಟಿ ನಿಂತಿದ್ದಾರೆ, ಈರೀತಿ ಇರುವ ಪ್ರವೃತ್ತಿಯನ್ನು ನಿರ್ವಿಕಾರ ಮನಸ್ಸಿನಿಂದ ವಿಚಾರ ಮಾಡಬೇಕಾಗಿದೆ. ಕನ್ನಡನಾಡಿನ ಅಭಿಮಾನ ಹೊಂದಿದವರು ಕನ್ನಡನಾಡಿನ ಒಂದು ಇಂಚು ನೆಲವನ್ನೂ ಬಿಟ್ಟುಕೊಡುವುದಿಲ್ಲ ಎಂದು ಹೇಳುತ್ತಿದ್ದಾರೆ. ಹಾಗೆಯೇ ಮಹಾರಾಷ್ಟ್ರದವರೂ ಕೂಡ ಒಂದು ಅಂಗುಲ ಭೂಮಿಯನ್ನೂ ಬಿಟ್ಟುಕೊಡುವುದಿಲ್ಲ ಎಂದು ಹೇಳುತ್ತಿದ್ದಾರೆ. ಮಹಾರಾಷ್ಟ್ರದವರು ಮತ್ತು ಮಹಾರಾಷ್ಟ್ರ ರಾಜ್ಯದ ಹಿತಾಸಕ್ತಿಗಳನ್ನು ಬಹಳ ಮಟ್ಟಿಗೆ ಮತ್ತು ಹೃದಯಕ್ಕೆ ಮನಸ್ಸಿಗೆ ಹಂಚಿಕೊಂಡಿರತಕ್ಕ ಜನ ನಾಯಕರು ಮತ್ತು ಕೆಲವು ಜನ ಹಿಂಬಾಲಕರು ಈ ದಿವಸ ನಮ್ಮ ಮಹಾರಾಷ್ಟ್ರ ಚಕ್ರಾಧಿಪತ್ಯವನ್ನು ಪ್ರತಿಷ್ಠಾಪನೆ ಮಾಡಬೇಕು ಎಂಬ ಮನೋಭಾವನೆಯಿಂದ ಕೂಡಿರುವುದನ್ನು ಖಂಡಿಸಬೇಕಾಗಿದೆ. ಈ ಎರಡು ವಾದಗಳನ್ನೂ ನಾವು ಸಮತೂಕ ದೃಷ್ಟಿಯಿಂದ ವಿಚಾರ ಮಾಡಬೇಕು. ಈ ಎರಡು ಭಾಗಗಳು ಭವ್ಯಭಾರತದ ಅವಿಭಾಜ್ಯ ಅಂಗಗಳು ಎನ್ನುವುದನ್ನೂ ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕಾಗಿದೆ. ಇತರ ಬೃಹತ್ ಸಮಸ್ಯೆಗಳು ಇರುವಾಗ, ಏಕಾಏಕಿ ಮಹಾರಾಷ್ಟ್ರ ಮೈಸೂರು ಗಡಿ ವಿವಾದದ ಪ್ರಶ್ನೆ ಏಕೆ ಮೇಲೆ ಬಂತು ? ಇದುವರೆಗೂ ಸುಪ್ತವಾಗಿ ಹುದುಗಿರತಕ್ಕ ಸಮಸ್ಯೆಯನ್ನು ಮೇಲಕ್ಕೆ ಎತ್ತಿ ಹಾಕತಕ್ಕ ಪಾಪದ ಕೆಲಸವನ್ನು ಯಾರು ಮಾಡಿದರು ಎಂದು ವಿಮರ್ಶೆ ಮಾಡಿದರೆ ಅದು ಕಾಂಗ್ರೆಸ್ ಕಾರ್ಯಕಾರೀ ಸಮಿತಿ ಎಂದು ತೋರುತ್ತದೆ. ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ನಿರ್ಣಯದಲ್ಲಿ ಭಾಗಿಗಳಾಗಿರತಕ್ಕ ಎಲ್ಲಾ ಸದಸ್ಯರಿಗೂ ಆ ಪಾಪ ತಟ್ಟುತ್ತದೆ. ಈ ಕಾರ್ಯದಲ್ಲಿ ನಮ್ಮ ಮೈಸೂರು ಮುಖ್ಯಮಂತ್ರಿಗಳ ಪಾತ್ರ ಏನು ? ಮಿಕ್ಕ ಎಲ್ಲಾ ಸದಸ್ಯರುಗಳು ಗಡಿ ವಿವಾದವನ್ನು ಮತ್ತೆ ಎತ್ತಿ ಹಿಡಿಯಬೇಕು ಎಂದು ನಿರ್ಣಯ ಮಾಡತಕ್ಕ ಕಾಲದಲ್ಲಿ, ಇವರೊಬ್ಬರು ಆದರೂ ಕೂಡ, ನಮ್ಮ ದೇಶದಲ್ಲಿ ಬಹಳ ಕಷ್ಟ ಇದೆ,

ಅದಕ್ಕಿಂತಲೂ ಮಿಗಿಲಾದ ಸಮಸ್ಯೆಗಳು ಇವೆ, ಆ ಸಮಸ್ಯೆಗಳನ್ನು ಬಗೆಹರಿಸಬೇಕಾದರೆ ನಮ್ಮಲ್ಲಿ ಸಾಕಾದಷ್ಟು ವ್ಯವಧಾನಬೇಕಾಗಿದೆ. ನಮ್ಮ ಶಕ್ತಿ ಎಲ್ಲವೂ ಕೂಡ ಆ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಕೇಂದ್ರೀಕೃತವಾಗಬೇಕು, ಕ್ರೋಢೀಕೃತವಾಗಬೇಕು. ಆ ನಿಲುವನ್ನು ಹೊಂದದೆ ಅವರು ಬೇರೆ ಯಾವ ನಿಲುವನ್ನು ಹೊಂದಿದ್ದರೂ ಜನತೆ ಅವರನ್ನು ಕ್ಷಮಿಸುವುದಕ್ಕೆ ತಯಾರಾಗಿಲ್ಲ. ಈ ದೃಷ್ಟಿಯಿಂದ ನಮ್ಮ ಗಡಿ ವಿವಾದಗಳೆಲ್ಲವನ್ನೂ ಕೂಡ ಸಾಧ್ಯವಾದರೆ ರೆಫ್ರಿಜರೇಟರ್‌ನಲ್ಲಿ ಇಟ್ಟು ಫ್ರೀಸ್ ಮಾಡೋಣ. ಎಲ್ಲಿಯವರೆಗೆ ನಮ್ಮ ದೇಶದಲ್ಲಿ ತುರ್ತು ಪರಿಸ್ಥಿತಿ ಇರುತ್ತದೋ ಅಲ್ಲಿಯವರೆಗೆ ಆ ತುರ್ತು ಪರಿಸ್ಥಿತಿಯಲ್ಲಿ ಏನೇನು ನಡೆಯಬೇಕೋ ಅವುಗಳೆಲ್ಲವನ್ನೂ ಮಾತ್ರ ನಡೆಯಿಸುತ್ತೇವೆ ಎಂದು ಕೇಂದ್ರ ಸರ್ಕಾರದವರೂ ಮತ್ತು ರಾಜ್ಯ ಸರ್ಕಾರದವರೂ ಇಬ್ಬರೂ ಒಪ್ಪಿದ್ದಾರೆ. ಇಂತಹ ತುರ್ತು ಪರಿಸ್ಥಿತಿಯಲ್ಲಿ ಜನಗಳಲ್ಲಿ ಭಾವನಾತ್ಮಕ ವಿಚಾರಗಳನ್ನು ಪ್ರಚೋದನೆ ಮಾಡತಕ್ಕ ವಿಚಾರಗಳಿಗೆ ಆದ್ಯತೆ ಕೊಟ್ಟು, ದೇಶಕ್ಕೆ ಅಪಘಾತ ಮಾಡಿದ್ದಾರೆ ಎಂದು ಹೇಳಿದರೆ, ಅದರಲ್ಲಿ ನಾನು ಯಾವ ತಪ್ಪನ್ನೂ ಕೂಡ ಕಾಣಲಾರದವನಾಗಿದ್ದೇನೆ. ಒಂದು ವಾದ ಏನೆಂದರೆ, ರಾಜ್ಯ ರಾಜ್ಯಗಳು ಗಡಿಗಳನ್ನು ಅಥವಾ ಗಡಿ ಸಮಸ್ಯೆಗಳನ್ನು ಇದೇ ರೀತಿ ಮುಂದುವರಿಯುವುದಕ್ಕೆ ಬಿಡಬೇಕೇ ಅಥವಾ ಯಾವುದಾದರೂ ಒಂದು ಘಟ್ಟದಲ್ಲಿ ಈ ಗಡಿ ಸಮಸ್ಯೆಗಳನ್ನು ಬಗೆಹರಿಸಬಾರದು ಏಕೆ ಎಂಬುದು ಮತ್ತೊಂದು ವಾದ. ದೇಶದಲ್ಲಿ ಬೃಹದಾಕಾರವಾದ ಇತರ ಸಮಸ್ಯೆಗಳು ಇರುವಾಗ, ಗಡಿ ಸಮಸ್ಯೆಗಳನ್ನು ಮುಂದೆ ತರುವಂಥಾದ್ದು ದೂರದೃಷ್ಟಿಯ ಲಕ್ಷಣವಲ್ಲ ಮತ್ತು ರಾಜಕೀಯ ನೀತಿಯಲ್ಲ ಎನ್ನುವುದು ಇನ್ನೊಂದು ವಾದ. ಈ ಎರಡು ವಾದಗಳಲ್ಲಿ ಕೂಡ ಸಾಕಾದಷ್ಟು ಸಮರ್ಥನೆಯನ್ನು ಕಾಣಬಯಸುವವನಾಗಿದ್ದೇನೆ. ಯಾವಾಗ ಭಾಷಾವಾರು ತತ್ವದ ಮೇಲೆ ರಾಜ್ಯಗಳನ್ನು ಪುನರ್ವಿಂಗಡಣೆ ಮಾಡಿದೆವೋ, ಆ ರೀತಿ ಪುನರ್ವಿಂಗಡಣೆ ಆದಕಾಲಕ್ಕೆ, ಗಡಿ ಸಮಸ್ಯೆಗಳು ಉದ್ಭವವಾಗುತ್ತವೆ ಎಂಬುದು ಎಲ್ಲರಿಗೂ ತಿಳಿದಿದೆ. ಅಂತಹ ಗಡಿ ಸಮಸ್ಯೆಗಳು ಬಂದಾಗ ಯಾವ ರೀತಿ ನಿರ್ಣಯ ಮಾಡಬೇಕು ಎನ್ನುವುದರ ಬಗ್ಗೆ ಸಾಕಾದಷ್ಟು ವಿವೇಚನೆ ಮಾಡಿ ಒಂದು ಸೂತ್ರವನ್ನು ಅಲ್ಲಿ ಕೊಟ್ಟಿದ್ದಾರೆ. ಇವೊತ್ತಿನ ದಿವಸ ಅದೇ ಸೂತ್ರವನ್ನು ಅನ್ವಯ ಮಾಡಿ ನಮ್ಮ ನಮ್ಮ ರಾಜ್ಯಗಳಲ್ಲಿ ಉಂಟಾಗಿರತಕ್ಕ ಅಸಹನೀಯವಾದ ಗಡಿ ವಿವಾದಗಳನ್ನು ತೀರ್ಮಾನ ಮಾಡುವುದಕ್ಕೆ ಪ್ರಯತ್ನ ಮಾಡಬಾರದೇಕೆ ಎನ್ನುವುದು ಒಂದು ಆಲೋಚನೆ. ಮತ್ತೊಂದು ಆಲೋಚನೆ ಮಹಾಚುನಾವಣೆಗಳು ಹತ್ತಿರ ಬರುತ್ತಿವೆ, ಆದುದರಿಂದ ಮಹಾಚುನಾವಣೆಗಳು ಮುಗಿಯುವ ತನಕ ಗಡಿ ವಿವಾದಗಳನ್ನು ಎತ್ತಬಾರದು ಎನ್ನುವುದು. ನನಗೆ ಇಲ್ಲಿ ರಾಜಕಾರಿಣಿಗಳ ಕೈಚಳಕ ಕಾಣುತ್ತದೆ. ಮಹಾಚುನಾವಣೆಗಳು ಬಂದ ಮಾತ್ರಕ್ಕೇ ಈ ಗಡಿ ವಿವಾದಗಳನ್ನು ನಾವು ಮುಂದಕ್ಕೆ ತರಬಾರದು, ಮಹಾಚುನಾವಣೆಗಳು ಮುಗಿದ ತರುವಾಯ ಏನು ಬೇಕಾದರೂ ಯುದ್ಧ ಮಾಡಬಹುದು, ಕುಸ್ತಿ ಮಾಡಬಹುದು, ಒಬ್ಬರನ್ನೊಬ್ಬರು ನಿಂದಿಸಬಹುದು, ಟೀಕೆ ಮಾಡಬಹುದು ಎಂದು ಅರ್ಥವಾಗುತ್ತದೆ. ಯಾವುದೇ ರಾಜಕೀಯ ಪಕ್ಷಗಳು ಏನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲಿ, ಏನು ತೀರ್ಮಾನ ತೆಗೆದುಕೊಳ್ಳಲಿ, ಅವುಗಳೆಲ್ಲವೂ ಕೂಡ ಚುನಾವಣೆಗಳನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ತೆಗೆದುಕೊಳ್ಳುತ್ತಾರೆ ಎನ್ನುವುದನ್ನು ನಾನು ಈಗ ಚೆನ್ನಾಗಿ ಕಂಡಿದ್ದೇನೆ. ಈ ದಿವಸ ಮಹಾರಾಷ್ಟ್ರ, ಮೈಸೂರು ಗಡಿ ವಿವಾದಕ್ಕೆ ಅದರ ಯೋಗ್ಯತೆಗೂ ಕೂಡ ಮೀರಿದಂಥ ಪ್ರಾಮುಖ್ಯತೆಯನ್ನು ಕೊಟ್ಟಿರುವುದರ ಔಚಿತ್ಯವನ್ನು ಈ ಸಭೆಯಲ್ಲಿ ನಾವೆಲ್ಲರೂ ಕೂಡ ಪ್ರಶ್ನೆ ಮಾಡಬೇಕಾಗಿದೆ. ಮಹಾರಾಷ್ಟ್ರ ಬೆಳೆಯಬೇಕು, ಅಭಿವೃದ್ಧಿ ಆಗಬೇಕು, ಮುಂದುವರಿಯಬೇಕು ಎನ್ನತಕ್ಕಂಥಾದ್ದು ನಮ್ಮೆಲ್ಲರ ಆಶಯ. ಅದರ ಬಗ್ಗೆ ಶ್ರೀಮಾನ್ ಪಾಟೀಲ್ ಅವರಿಗಾಗಲಿ ಶ್ರೀಮಾನ್ ಸುಂಠನ್‌ಕರ್ ಅವರಿಗಾಗಲಿ ಯಾವುದೇ ಅನುಮಾನ ಬೇಡ. ನಾವು ಮಹಾರಾಷ್ಟ್ರದ ಹಿತಮಿತ್ರರು. ಮಹಾರಾಷ್ಟ್ರದ ಹಿತಶತ್ರುಗಳಲ್ಲ. ಮಹಾರಾಷ್ಟ್ರ ಅಳಿದರೆ ಮೈಸೂರು ಅಳಿದಂತೆಯೇ ಸರಿ. ಭಾರತವು ಅಳಿದಂತೆಯೇ ಸರಿ. ಮಹಾರಾಷ್ಟ್ರ ಬೆಳೆದರೆ ಮೈಸೂರು ಬೆಳೆದಂತೆಯೇ ಸರಿ, ಭಾರತವು ಬೆಳೆದಂತೆಯೇ ಸರಿ ಎನ್ನತಕ್ಕ ಮನೋಭಾವನೆಯನ್ನು ನಾವು ಇವೊತ್ತಿನ ದಿವಸ ವ್ಯಕ್ತ ಮಾಡುತ್ತೇವೆ. ಮಹಾರಾಷ್ಟ್ರ ಮತ್ತು ಮೈಸೂರು ಇವೆರಡು ರಾಜ್ಯಗಳ ಬಾಂಧವ್ಯ, ಎರಡೂ ರಾಜ್ಯ ಸರ್ಕಾರಗಳ ಬಾಂಧವ್ಯ ಮೇಲಾಗಿ ಎರಡೂ ರಾಜ್ಯಗಳ ಮುಖ್ಯಮಂತ್ರಿಗಳ ಬಾಂಧವ್ಯ ಬಹಳ ಹಿತಕರವಾಗಿ ಇದೆ ಎಂದು ನಾನು ಭಾವನೆ ಮಾಡುತ್ತೇನೆ. ಇಲ್ಲಿ ನಮ್ಮ ಸ್ನೇಹಿತರು 7 ಜನ ಇದ್ದಾರೆ. 7 ಬಹುಶಃ ನಮ್ಮ ಜನರ ನಂಬಿಕೆಯ ಪ್ರಕಾರ, it is unlucky number. But my sympathies are with them. ಆ ನಮ್ಮ ಮಿತ್ರರುಗಳೂ ಕೂಡ ನಮ್ಮ ಬಗ್ಗೆ ಅಸಹನೀಯವಾದ ಚಳುವಳಿಯನ್ನು ಪ್ರಚೋದನೆ ಮಾಡುತ್ತಾರೆ ಎಂದು ಅಪಾದನೆಯನ್ನು ಮಾಡಿಲ್ಲ, ಮುಂದೆಯೂ ಮಾಡುವುದಿಲ್ಲ. ಏತಕ್ಕೆಂದರೆ ನಾವು ವಿಚಾರ ಮಾಡುವಾಗ ಎರಡು ಕಡೆಯವರೂ ಏನು ಹೇಳುತ್ತಾರೋ ಅವೆರಡನ್ನೂ ಕೂಡ ನಾವು ಮನಸ್ಸಿಗೆ ತೆಗೆದುಕೊಂಡು ಅನಂತರ ಪ್ರಾಂತ್ಯಕ್ಕೇ, ಇಡೀ ದೇಶಕ್ಕೇ ಸಾಧುವಾದಂಥ ಮಾರ್ಗದಲ್ಲಿ ಹೋಗಬೇಕು.

(ಶ್ರೀ ಎಸ್. ಎಂ. ಕೃಷ್ಣ)

ಮಹಾರಾಷ್ಟ್ರಕ್ಕೆ ಮೈಸೂರಿನ ಜೊತೆಯಲ್ಲಿ ಕೇವಲ ಸಣ್ಣಪುಟ್ಟ ಗಡಿ ಪ್ರಶ್ನೆ ಇದೆ. ಮಹಾರಾಷ್ಟ್ರದವರಿಗೆ ಮಿಕ್ಕ ಯಾವ ರಾಜ್ಯದ ಜೊತೆಯಲ್ಲೂ ಕೂಡ ಸೇರಿದರೆ ಕಷ್ಟವಾಗುತ್ತದೆ. ಮೈಸೂರು ರಾಜ್ಯಕ್ಕೆ ನಾಲ್ಕಾರು ಕಡೆಗಳಿಂದ ಗಡಿ ಹೊಂದಾಣಿಕೆ ಪ್ರಶ್ನೆ ಮಿಕ್ಕ ನಾಲ್ಕು ರಾಜ್ಯಗಳ ಜೊತೆಯಲ್ಲಿ ಈಗ ಬಂದಿರುವುದರಿಂದ ಮೈಸೂರು ಈ ದಿವಸ ಕನ್ನಡ ನಾಡಾಗಿ ಬಹಳ ಕಷ್ಟದ ಪರಿಸ್ಥಿತಿಯಲ್ಲಿದೆ. 1956ನೇ ಇಸವಿಯಲ್ಲಿ ನಮಗೆ ಬೇಕಾದ ಗೆಲುವು ಸಿಕ್ಕಲಿಲ್ಲ. ಕಾಸರಗೋಡಿಗೆ ನಾನು ಸುಮಾರು ಎರಡು ವರ್ಷಗಳ ಹಿಂದೆ ಹೋಗಿದ್ದೆ. ಅಲ್ಲಿ ಒಂದು ಐಕ್ಯ ಸಮ್ಮೇಳನ ನಡೆಯುವ ಕಾಲದಲ್ಲಿ ಒಂದು ಸಣ್ಣ ಭೂ ಪ್ರದೇಶವನ್ನು ಮೈಸೂರು ರಾಜ್ಯದೊಡನೆ ಸೇರಿಸಬೇಕೆಂಬ ಪ್ರಬಲವಾದ ಜನಾಭಿಪ್ರಾಯವಿತ್ತು. ಆಗ ಅಲ್ಲಿ ಆ ಪ್ರದೇಶ ಮಹಾರಾಷ್ಟ್ರಕ್ಕೋ, ಮಂಗಳೂರಿಗೋ ಅಥವಾ ಮೈಸೂರಿಗೋ ಸೇರಬೇಕೆಂಬ ಬಗ್ಗೆ ಭೌಗೋಳಿಕ ಹಾಗೂ ಅಡ್ಮಿನಿಸ್ಟ್ರೇಟಿವ್ ಕನ್‌ವೀನಿಯನ್ಸ್ ಕಂಟೀನ್ಯುಯಿಟಿ—ಇವುಗಳ ದೃಷ್ಟಿಯಿಂದ ಕಾಸರಗೋಡು ಪ್ರದೇಶವನ್ನು ಮೈಸೂರಿನಲ್ಲಿ ಸೇರಿಸಬೇಕೆಂಬ ಒಂದು ನಿಲುವಳಿಯನ್ನು ತೆಗೆದುಕೊಂಡಂಥ ಜನಗಳ ಪ್ರತಿನಿಧಿಗಳ ಸಮ್ಮೇಳನದಲ್ಲಿ ಭಾಗವಹಿಸುವ ಒಂದು ಅವಕಾಶ ನನಗೆ ಸಿಕ್ಕಿತು. ಅಲ್ಲಿ ನಾನು ಹೋಗಿ ನೋಡಿದ್ದೇನೆ. ಅಲ್ಲಿನ ಜನ ಎಷ್ಟು ಅಭಿಮಾನದಿಂದ, ಎಷ್ಟು ಒಳ್ಳೆಯ ದೃಷ್ಟಿಯಿಂದ ಮೈಸೂರಿನಲ್ಲಿಯೇ ಅವರು ಸೇರಬೇಕೆಂದು ಅಪೇಕ್ಷೆ ಪಡುತ್ತಾರೆಂಬುದನ್ನು ನೋಡಬಹುದು. ಆದ್ದರಿಂದ ನಾವು ಈ ದಿವಸ ಭಾಷಾವಾರು ಗಡಿ ಹೊಂದಾಣಿಕೆ ಪ್ರಶ್ನೆಯನ್ನು ಮುಂದಕ್ಕೆ ಹಾಕಬೇಕು. ಏತಕ್ಕೆಂದರೆ ಮಿಕ್ಕ ಸಮಸ್ಯೆಗಳು ಬೇಕಾದಷ್ಟಿವೆ. ಒಂದು ವೇಳೆ ಈ ಪ್ರಶ್ನೆಗೆ ಆದ್ಯ ಸ್ಥಾನ ಕೊಟ್ಟರೂ ಕಾಸರಗೋಡು ಹಾಗೆಯೇ ಉಳಿಯುತ್ತದೆ. ಈ ಪ್ರಶ್ನೆ ಮುಂದಕ್ಕೆ ಹೋಗಲೇಬೇಕಾಗುತ್ತದೆ. ನನಗೆ ಕಾಸರಗೋಡು ಜನತೆಯ ಬಗ್ಗೆ ಸಾಕಾದಷ್ಟು ಅನುಕಂಪ ಮತ್ತು ಬೆಂಬಲವಿದ್ದರೂ ಕೂಡ ಈ ದಿವಸ ನನ್ನ ವೈಯಕ್ತಿಕ ನಿಲುವು ಏನೆಂದರೆ, ನಮ್ಮ ನಮ್ಮಲ್ಲಿರುವ ವೈಷಮ್ಯ, ಅಸಹನೆಯನ್ನು ಹೋಗಲಾಡಿಸಿ, ನಮ್ಮ ನಮ್ಮಲ್ಲಿಯೇ ವಿಷವನ್ನು ವೃದ್ಧಿಮಾಡುವ ಈ ಗಡಿ ಪ್ರಶ್ನೆಯನ್ನು ಇನ್ನು ಕೆಲವು ವರ್ಷಗಳಾದರೂ ಕೂಡ ಮುಂದೆ ಹಾಕಬೇಕು ಎಂಬುದಾಗಿದೆ. ಇದು ನನ್ನ ನಿಸ್ಸಂಶಯವಾದ ಅಭಿಪ್ರಾಯ. ಈ ಒಂದು ಅಭಿಪ್ರಾಯಕ್ಕೆ ಕಾರಣವೇನೆಂದರೆ, ಕೇವಲ ಈ ಗಡಿ ಪ್ರಶ್ನೆಯನ್ನು ಮುಂದೂಡಬೇಕೆಂಬ ಒಂದು ಸಣ್ಣ ಚಾಣಕ್ಯ ಬುದ್ಧಿಯಲ್ಲ. ಈ ಪ್ರಶ್ನೆ ನಿರ್ಣಯವಾಗುವುದಕ್ಕೆ ಸಾಕಾದಷ್ಟು ಒಳ್ಳೆಯ ವಾತಾವರಣ ಈ ದಿವಸ ಈ ದೇಶದಲ್ಲಿ ಇನ್ನೂ ನಿರ್ಮಾಣವಾಗಲಿಲ್ಲ. ಈ ದೇಶದಲ್ಲಿ ಈ ದಿವಸ ಸಾಕಾದಷ್ಟು ನೆಮ್ಮದಿ ಉಂಟಾಗಲಿಲ್ಲ. ನೆಮ್ಮದಿ ಇಲ್ಲದೇ ಇರುವ ಜನಗಳಿಗೆ, ದಿಕ್ಕು ತೋಚದೆ ಇರತಕ್ಕ ಜನಗಳಿಗೆ, ಈ ಗಡಿ ಪ್ರಶ್ನೆಗಳನ್ನು ಕೊಟ್ಟರೆ ದೇಶದಲ್ಲಿ ಒಂದು ದೊಡ್ಡ ಅನಾಹುತವುಂಟಾಗುತ್ತದೆ. ಈ ವಿಚಾರವನ್ನು ನಮ್ಮ ದೇಶದಲ್ಲಿ ರಾಜ್ಯಾಡಳಿತವನ್ನು ಮಾಡತಕ್ಕ ವರಿಷ್ಠರು ಚೆನ್ನಾಗಿ ಅರ್ಥಮಾಡಿಕೊಳ್ಳಬೇಕೆಂಬುದಾಗಿ ಈ ಸಮಯದಲ್ಲಿ ಪ್ರಾರ್ಥನೆ ಮಾಡುತ್ತೇನೆ. ಇನ್ನು ಈ ವಿಚಾರದ ಬಗ್ಗೆ ಕೇಂದ್ರ ಸರ್ಕಾರದ ನಿಲುವು ಹಾಗೂ ಪ್ರಧಾನ ಮಂತ್ರಿಗಳ ನಿಲುವಿನ ವಿಷಯದಲ್ಲಿ ಶ್ರೀಮಾನ್ ಶಿವಪ್ಪನವರು ಸಾಕಾದಷ್ಟು ಮಾತುಗಳನ್ನು ಆಡಿದ್ದಾರೆ. ಪ್ರಧಾನಮಂತ್ರಿಗಳು ಈ ದೇಶದ ಎಲ್ಲಾ ರಾಜ್ಯಗಳ ಜನರ ಹಿತಾಸಕ್ತಿಯನ್ನು ಕಾಪಾಡುವುದಕ್ಕೆ ಪ್ರಮಾಣವಚನವನ್ನು ಸ್ವೀಕರಿಸಿದ್ದಾರೆ. ಅವರು ತೆಗೆದುಕೊಂಡಿರತಕ್ಕ ಪ್ರಮಾಣವಚನಕ್ಕೆ ಯಾವ ರೀತಿಯಲ್ಲೂ ಭಂಗ ಬಾರದೆ ಇರುವ ಹಾಗೆ ಮಾತುಗಳನ್ನು ಆಡಿರುವುದರಲ್ಲಿ ಈ ದೇಶದ ಜನರಲ್ಲಿ ಅವರ ವಿಷಯದಲ್ಲಿ ಸಾಕಾದಷ್ಟು ನಂಬಿಕೆ ಇಲ್ಲವೋ ಏನೋ ಎಂಬ ಸಂಶಯವಾಗುತ್ತಿದೆ. ಇಂತಹ ಒಂದು ಸಂಶಯಕ್ಕೆ ಪ್ರಧಾನಮಂತ್ರಿಗಳು ಅವಕಾಶವನ್ನು ಕೊಡಬಾರದಾಗಿತ್ತು. ಈ ಮಾತನ್ನು ನಾನು ಬಹಳ ನೊಂದ ಮನಸ್ಸಿನಿಂದ ಹೇಳಬಯಸುತ್ತೇನೆ. ಪ್ರಧಾನಮಂತ್ರಿಗಳು ಒಂದು ರಾಜ್ಯದ ಪ್ರಭಾವಕ್ಕೊಳಗಾದರೆ ಅಥವಾ ಎರಡು ಮೂರು ರಾಜ್ಯಗಳು ಕಟ್ಟಿರತಕ್ಕ ಸಣ್ಣ ಸಣ್ಣ ಗುಂಪಿನ ಪ್ರಭಾವದ ಹಿಡಿತಕ್ಕೆ ಸಿಕ್ಕಿಬಿದ್ದು ಆ ಹಿಡಿತದ ಸೆರೆಯಾಳುಗಳಾದರೆ ಈ ದೇಶದ ಭವಿಷ್ಯ ನಿಜವಾಗಿ ನೆಟ್ಟಗೆ ಆಗುವುದಿಲ್ಲವೆಂಬುದನ್ನು ನಾವೆಲ್ಲರೂ ಚೆನ್ನಾಗಿ ತಿಳಿಯಬೇಕಾಗಿದೆ. ಇದರಿಂದ ಮೈಸೂರು ದೇಶದಲ್ಲಿ ಒಂದು ರೀತಿಯ ಅಭಿಪ್ರಾಯ ವ್ಯಕ್ತವಾಗಲಿದೆಯೆಂದು ನಾನು ಹೇಳುತ್ತೇನೆ. ಅದೇನೆಂದರೆ, ಮೈಸೂರು ದೇಶ ಈ ದಿವಸ ಪ್ರಭಾವಶಾಲಿಗಳ ಹಿಡಿತಕ್ಕೆ ಸಿಕ್ಕಿದೆ. ಅದರಿಂದ ನಮಗೆ ನ್ಯಾಯ ದೊರಕುವುದಿಲ್ಲವೆಂಬುದು ಗೊತ್ತಾಗಿದೆ. ಈ ಪಕ್ಷದಲ್ಲಿ ಕುಳಿತಿರತಕ್ಕ ಕೆಲವು ಸದಸ್ಯರು ಅನೇಕವೇಳೆ ಕೇಂದ್ರ ಸರ್ಕಾರವನ್ನು ಪ್ರಬಲವಾಗಿ ಟೀಕೆ ಮಾಡಿದ್ದೇವೆ. ಮೈಸೂರು ರಾಜ್ಯದ ಹಿತಾಸಕ್ತಿ ಬಗ್ಗೆ ಕೇಂದ್ರ ಸರ್ಕಾರಕ್ಕೆ ಸ್ವಲ್ಪವೂ ಅನುಕಂಪವಿಲ್ಲ. ಅವರು ನಮ್ಮ ಬೇಡಿಕೆಗಳು ಮತ್ತು ಹೇಳಿಕೆಗಳು ಎಷ್ಟೇ ನ್ಯಾಯವಾಗಿದ್ದರೂ ಬಹಳ ಸರಳವಾಗಿ ತಿರಸ್ಕಾರ ಮಾಡಿದ್ದಾರೆ. ಈಗಲೂ ಮಾಡುತ್ತಿದ್ದಾರೆಂದು ನಾವು ಟೀಕೆ ಮಾತುಗಳನ್ನು ಆಡಿದ್ದೇವೆ. ಈ ಗಡಿ ಹೊಂದಾಣಿಕೆ ಪ್ರಶ್ನೆ ವಿಚಾರದಲ್ಲಿ ಕೇಂದ್ರ ಸರ್ಕಾರ

ದವರು ಮೈಸೂರು ರಾಜ್ಯಕ್ಕೆ ನ್ಯಾಯ ದೊರಕಿಸಿಕೊಟ್ಟಂಥಾಗಲಿಲ್ಲ ಎನ್ನುವ ಮಾತನ್ನು ನಾವು ಈ ದಿವಸ ಹೇಳಬೇಕಾಗಿದೆ. ಒಟ್ಟಾರೆ ಈ ದೇಶದಲ್ಲಿ ಕಲುಷಿತವಾದ ವಾತಾವರಣ ಉಂಟಾಗಿರುವ ದೃಷ್ಟಿಯಿಂದ ಎಲ್ಲರೂ ತಿಳಿದುಕೊಂಡಿರುವ ರೀತಿಯಲ್ಲಿ ಇಲ್ಲಿ ಏನೇ ನಡೆದರೂ ಕೂಡ ಜನ ಸುಮ್ಮನಿರುತ್ತಾರೆ, ಏನೇ ಕೆಲಸಕಾರ್ಯಗಳು ನಡೆದರೂ ಇಲ್ಲಿನ ಜನಗಳು ಅದರ ಬಗ್ಗೆ ಆಲೋಚನೆ ಮಾಡುವುದಿಲ್ಲ ಎನ್ನುವ ಒಂದು ಅಭಿಪ್ರಾಯ ಹೊರಗಡೆ ವ್ಯಕ್ತವಾಗಿದೆ. ಆದರೆ ಕಳೆದ ಎರಡು ತಿಂಗಳುಗಳಲ್ಲಿ ನಮ್ಮ ರಾಜ್ಯದಲ್ಲಿ ನಡೆದಿರತಕ್ಕದ್ದನ್ನು ನೋಡಿದರೆ ಜನಗಳೇ ತಾವಾಗಿ ಮುಂದೆ ಬಂದು ಈ ಗಡಿ ಹೊಂದಾಣಿಕೆ ಪ್ರಶ್ನೆಯನ್ನು ಸದ್ಯಕ್ಕೆ ತೆಗೆಯುವುದರಿಂದ ದೇಶಕ್ಕೆ ಒಂದು ದೊಡ್ಡ ಅಪಘಾತ ಉಂಟಾಗುತ್ತದೆ ಎನ್ನುವುದನ್ನು ರಾಜ್ಯ ಸರ್ಕಾರಕ್ಕೂ ತಿಳಿಸಿದ್ದೇವೆ ಮತ್ತು ಕೇಂದ್ರ ಸರ್ಕಾರದ ಗಮನವನ್ನೂ ಸಹ ಸೆಳೆದಿದ್ದೇವೆ. ಅದು ಈ ದಿವಸ ಸ್ವಯಂ ವೇದ್ಯವಾಗಿದೆ. ಈ ವಿಚಾರವನ್ನೂ ಕೂಡ ಪ್ರಜಾ ಪ್ರತಿನಿಧಿಗಳಾದ ನಾವು ಗಮನದಲ್ಲಿಟ್ಟುಕೊಳ್ಳಬೇಕಾಗಿದೆ.

ಇನ್ನು ಮಹಾರಾಷ್ಟ್ರದಲ್ಲಿಯಾದರೂ ಇದರ ಬಗ್ಗೆ ಒಮ್ಮತವಿದೆಯೇ ಎಂದು ನೋಡುವುದಾದರೆ, ಅಲ್ಲಿಯೂ ಕೂಡ ಒಡಕು ಧ್ವನಿಯನ್ನು ಕೇಳುತ್ತಿದ್ದೇವೆ. ನಮ್ಮ ದೇಶದಲ್ಲಿ ಬಹಳ ಗೌರವಯುತರಾದ ಮತ್ತು ನಾಗಾ ವಿದರ್ಭ ಅಂದೋಳನ ಮುಖಂಡರಾದ ಶ್ರೀಮಾನ್ ಅಣೆಯವರು ಈಗ್ಗೆ ಎರಡು ಮೂರು ದಿವಸಗಳ ಕೆಳಗೆ ಒಂದು ಹೇಳಿಕೆಯನ್ನು ಕೊಟ್ಟಿದ್ದನ್ನೂ ಸಹ ನಾವು ಕೇಳಿದ್ದೇವೆ. ಆ ಹೇಳಿಕೆಯಲ್ಲಿ ಬರೀ ವಿದರ್ಭ ವಿಷಯದ ಬಗ್ಗೆ ಮಾತನಾಡಿದ್ದಾರೆ. ಬಹುಶಃ ಶ್ರೀ ಅಣೆಯವರು ಅದೊಂದನ್ನೇ ಹೇಳಬೇಕೆಂದಿರಲಿಲ್ಲ. ವಿದರ್ಭ ಹೊಸಲನ್ನು ದಾಟಿ ಕರ್ಣಾಟಕಕ್ಕೆ ಬಂದು ಬೆಳಗಾಂ ಕನ್ನಡನಾಡಿಗೇ ಸೇರಬೇಕೆಂದು ಆಡಿದ್ದಾರೆ.

Sri B. P. KADAM (Karwar).—When you say these things, have you got anything on record or do you say this from memory ?

ಶ್ರೀ ಎಸ್. ಎಂ. ಕೃಷ್ಣ.—ಶ್ರೀಮಾನ್ ಕದಂ ಅವರಿಗೆ ಅವರ ಕಿವಿಗೆ ಏನು ಇಂಪು ಆಗುತ್ತದೋ ಅಂತಹ ಮಾತುಗಳನ್ನು ಹೆಚ್ಚಿಗೆ ಕೇಳಬೇಕೆಂಬುದಾಗಿ ಹೇಳುವುದು ಮಾನವ ಸಹಜವಾದ ಗುಣ. To satisfy my friend, Sri Kadam, who happens to belong to the same age group as mine, I say that my information is based on what is reported in newspapers. To satisfy Sri Kadam again, I will write to Sri Ane to-day and directly pass on the reply to him if he wants. ಆದರೆ ವಾಸ್ತವಾಂಶವಾದರೂ ಕೂಡ ಮಹಾರಾಷ್ಟ್ರದಲ್ಲಿಯೂ ಕೂಡ ಇದರ ಬಗ್ಗೆ 2–3–4 ಧ್ವನಿಗಳು ಇವೆ ಎನ್ನುವುದನ್ನೂ ಕೂಡ ನಾವು ಗಮನದಲ್ಲಿಟ್ಟುಕೊಳ್ಳಬೇಕಾಗಿದೆ. ಈ ಗಡಿ ಹೊಂದಾಣಿಕೆ ಪ್ರಶ್ನೆ ಹೇಗಿದೆಯೆಂದಿರೆ, It is just like opening a Pandora's Box. ಇನ್ನೊಂದುಸಾರಿ ಈ ವಿಷಯವನ್ನು ಪ್ರಸ್ತಾಪಮಾಡಿ ಮತ್ತೆ ಗಡಿ ಹೊಂದಾಣಿಕೆ ಮಾಡುತ್ತೇವೆಂದು ಮುಂದೆ ಅಡಿ ಇಟ್ಟರೆ ವಿದರ್ಭ ಬೇಕು ಎಂದು ಹೇಳುವ ಜನ ಇದ್ದಾರೆ, ಈ ಮೈಸೂರು ರಾಜ್ಯ ಎರಡಾಗಲಿ ಎಂದು ಹೇಳುವ ಜನ ಇದ್ದಾರೆ. ಈ ಎಲ್ಲಾ ಭಾವನೆಗಳಿಗೂ ಕೂಡ ರೂಪ ಕೊಡಬೇಕೆಂಬ ಸನ್ನಿವೇಶವನ್ನು ಈಗ ಏಕೆ ಕಲ್ಪನೆ ಮಾಡಬೇಕೆಂದು ನಾವು ಯೋಚನೆ ಮಾಡಬೇಕಾಗಿದೆ.

ನಮ್ಮಲ್ಲಿ ಕೆಲವರು ಹಿತಾಸಕ್ತಿಗಳನ್ನು ಗಮನದಲ್ಲಿಟ್ಟುಕೊಂಡು ಮಾತನಾಡುವುದಾದರೆ, ಗಡಿ ಹೊಂದಾಣಿಕೆಯನ್ನು ಮಾಡಬೇಕು ಎಂದು ಹೇಳಬಹುದು. ಆದರೆ ಇಡೀ ಭಾರತದ ಒಟ್ಟಾರೆ ಎಲ್ಲರ ಹಿತಾಸಕ್ತಿಗಳನ್ನೂ ಗಮನದಲ್ಲಿಟ್ಟುಕೊಂಡು ಈ ಗಡಿ ವಿವಾದಗಳನ್ನು ಆಲೋಚನೆ ಮಾಡಬೇಕಾಗಿದೆ. ಈ ದೃಷ್ಟಿಯಿಂದ ಸೆನ್ಸಿಟೀವ್ ಪ್ರಶ್ನೆ, ಎಮೋಷನಲ್ ಪ್ರಶ್ನೆ ಈ ಎಲ್ಲಾ ಪ್ರಶ್ನೆಗಳನ್ನೂ ಕೂಡ ದೇಶದಲ್ಲಿ ಸಾಧಾರಣವಾದ ಸಮಯ, ನಾರ್ಮಲ್ ಟೈಮ್ ಬರುವವರೆಗೂ ಕೂಡ ಇದನ್ನು ಮುಂದೂಡಬೇಕು. ನಮ್ಮದೇಶದಲ್ಲಿ ತುರ್ತು ಪರಿಸ್ಥಿತಿ ಎಲ್ಲಿಯವರೆಗೆ ಇರುತ್ತದೆಯೋ ಮತ್ತು ಎಲ್ಲಿಯವರೆಗೆ ನಮ್ಮದೇಶ ಹೊರಗಡೆಯ ಶತೃಗಳಿಂದ ವಿಮುಕ್ತರಾಗುವುದಿಲ್ಲವೋ ಅಲ್ಲಿಯವರೆಗೆ ಈ ವಿಷಯವನ್ನು ಮುಂದಕ್ಕೆ ಹಾಕಬೇಕು. ಈಗ ನಮ್ಮ ರಾಜ್ಯದಲ್ಲಿ ಈ ಗಡಿ ವಿವಾದಕ್ಕೆ ಸಂಬಂಧಪಟ್ಟ ಹಾಗೆ ಅಂದೋಳನ ನಡೆದಿದೆ, ಸತ್ಯಾಗ್ರಹ, ಚಳುವಳಿ ನಡೆದಿದೆ; ಮತ್ತು ಗಡಿ ಚಳುವಳಿಯ ಪ್ರತಿರೂಪವಾಗಿ ಲಾಠಿ ಚಾರ್ಜ್ ನಡೆದಿದೆ. ಜನಗಳಿಗೆ ಗುಂಡು ಹಾರಿಸಿದಂತಹ ಕ್ರೌರ್ಯ ನಡೆದಿದೆ. ಎಲ್ಲವನ್ನೂ ಕೂಡ ಗಮನದಲ್ಲಿ ಇಟ್ಟುಕೊಂಡು ಕಾಂಗ್ರೆಸ್ ವರಿಷ್ಠರು ಎಲ್ಲಾ ವಿಚಾರಗಳನ್ನೂ ಕೂಡ ಸುಧೀರ್ಘವಾಗಿ ಆಲೋಚನೆ ಮಾಡಬೇಕು. ಹಾಗೆ ಆಲೋಚನೆ ಮಾಡಿ ಈ ಸಮಸ್ಯೆಯನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೆ ಹಾಕುವುದರಿಂದ ದೇಶಕ್ಕೆ ದೊಡ್ಡ ಉಪಕಾರ ಮಾಡಿದಂತಾಗುತ್ತದೆ ಎಂದು ನಾನು ಹೇಳುತ್ತೇನೆ. ನಾನು ಈ ಕೆಲವು ಸೂಚನೆಗಳನ್ನು ಸೂಚಿಸಿ ಈ ನಿರ್ಣಯವನ್ನು ಸಮರ್ಥನೆ ಮಾಡುತ್ತೇನೆ.

†ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೆ, ಈ ಸಭೆಯಮುಂದೆ ಶ್ರೀ ಶಿವಪ್ಪನವರು ತಂದಿರತಕ್ಕಂಥ ನಿಲುವಳಿ ಸೂಚನೆಯನ್ನು ಸಮರ್ಥಿಸಿ ಮಾತನಾಡುತ್ತಾ ಕೆಲವು ವಿಷಯಗಳನ್ನು ಈ ಸಭೆಯ ಗಮನಕ್ಕೆ ತರಬೇಕೆಂದು ನಾನು ಇಷ್ಟ ಪಡುತ್ತೇನೆ. 1956 ನೇ ಇಸವಿಯಲ್ಲಿ ನಮ್ಮ ಕರ್ನಾಟಕ ರಾಜ್ಯಗಳ ಪುನರ್‌ವಿಂಗಡಣೆಯ ಕಾನೂವಿನ ಪ್ರಕಾರ ಅಸ್ತಿತ್ವಕ್ಕೆ ಬಂತು. ಆ ಲಾಗಾಯಿತು ಕೆಲವು ಪ್ರದೇಶಗಳಲ್ಲಿ ರಾಜ್ಯಗಳ ಅಂಚಿನಲ್ಲಿರತಕ್ಕ ಸೀಮೆಯಲ್ಲಿ, ಪ್ರದೇಶದಲ್ಲಿ ಹೊಸರಾಜ್ಯಗಳ ನಿರ್ಮಾಣದಿಂದ ಅತೃಪ್ತಿಗೊಂಡಂತಹ ಜನರು ಬೇರೆ ರಾಜ್ಯಗಳಿಗೆ ನಾವು ಹೋಗಕೂಡದು ಎನ್ನತಕ್ಕಂಥ ವಾದವನ್ನು ಇಟ್ಟು ಕೊಂಡು ಬಂದಿದ್ದಾರೆ. ಇಂಥಾ ವಾದದಲ್ಲಿ ಮೈಸೂರು ಮತ್ತು ಮಹಾರಾಷ್ಟ್ರ ಗಡಿಗಳಲ್ಲಿರತಕ್ಕಂಥ ಕೆಲವು ಪ್ರದೇಶಗಳಲ್ಲಿ ಈ ವಾದ ಇಂದಿನ ವರೆಗೂ ನಡೆದುಕೊಂಡು ಬಂದಿದೆ. ಹಾಗೆಯೇ ಕರ್ನಾಟಕ ರಾಜ್ಯವು ಕೂಡ ಬೇರೆ ಗಡಿಗಳಲ್ಲಿ, ಎಂದರೆ, ಆಂಧ್ರ, ಮದ್ರಾಸು ಮತ್ತು ಕೇರಳ ಗಡಿಗಳಲ್ಲಿ ಕೂಡ ಕೆಲವು ಕನ್ನಡ ಪ್ರದೇಶಗಳು ಇದ್ದು ಅವು ಕರ್ನಾಟಕ ರಾಜ್ಯಕ್ಕೆ ಸೇರಬೇಕು ಎಂದು ಹೇಳಿ ಅನೇಕ ರೀತಿಯಲ್ಲಿ ಪ್ರಬಲವಾದ ಚಳುವಳಿಗಳು ನಡೆದಿವೆ. ಕಾನೂನು ದೃಷ್ಟಿಯಿಂದ ನಾವು ಈ ಸಮಸ್ಯೆಯನ್ನು ನೋಡುವುದಾದರೆ, ರಾಜ್ಯಗಳ ಪುನರ್‌ವಿಂಗಡಣೆ ಮಾಡುವ ಕಾನೂನಿನಲ್ಲಿ ಏನಾದರೂ ಸಣ್ಣ ಪುಟ್ಟ ಭಿನ್ನಾಭಿಪ್ರಾಯಗಳು ಅಂತರ ರಾಜ್ಯ ಗಡಿಗಳಲ್ಲಿ ಇದ್ದ ಪಕ್ಷದಲ್ಲಿ ಅವುಗಳನ್ನು ವಲಯ ಆಯೋಗದವರು ಜೋನಲ್ ಕಮಿಷನ್ನಿನವರು ವಿಚಾರ ಮಾಡಿ ಅವರು ಕೇಂದ್ರ ಸರ್ಕಾರಕ್ಕೆ ಪಾರ್ಲಿಮೆಂಟಿಗೆ ಸಲಹೆ ಕೊಡಬೇಕು. ಪಾರ್ಲಿಮೆಂಟಿನವರು ಕಾನೂನನ್ನು ತಿದ್ದುಪಡಿ ಮಾಡುವ ಮೂಲಕ ಆ ಪ್ರದೇಶಗಳನ್ನು ಹೊಂದಾಣಿಕೆ ಮಾಡತಕ್ಕಂಥ ಏರ್ಪಾಡು ಮಾಡಬಹುದು ಎಂದು ಇದೆ. ಇನ್ನೊಂದು ಏನೆಂದರೆ ರಾಜ್ಯಾಂಗದ ಆರ್ಟಿಕಲ್ 3ರ ಪ್ರಕಾರ ಈ ವಿಚಾರಗಳನ್ನು ರಾಷ್ಟ್ರಾಧ್ಯಕ್ಷರಿಗೆ ಮತ್ತು ಯೂನಿಯನ್ ಸರ್ಕಾರಕ್ಕೆ ತಿಳಿಸಬೇಕು ; ಮತ್ತು ಆ ವಿಚಾರಗಳು ಸಂಬಂಧಪಟ್ಟ ರಾಜ್ಯದ ಲೆಜಿಸ್ಲೇಟರುಗಳ ಮುಂದೆ ಬರಬೇಕು ಎಂದು ಒಂದು ನಿರ್ದೇಶನ ಇದೆ. ಆದರೆ ಈ 10 ವರ್ಷಗಳಲ್ಲಿ ಕೇಂದ್ರ ಹಾಗೂ ರಾಜ್ಯಗಳಲ್ಲಿ ವಲಯ ಆಯೋಗದವರು ಮತ್ತು ಜೋನಲ್ ಕಮಿಷನ್ನಿನವರು ಕೆಲವು ವರ್ಷ ಕೆಲಸ ಮಾಡಿದರು. ಈಗ ಅವು ಕೆಲಸ ಮಾಡುತ್ತಿವೆಯೋ ಇಲ್ಲವೋ ಗೊತ್ತಿಲ್ಲ. ಅವರು ಇಂಥಾ ಯಾವ ಸಮಸ್ಯೆಗಳನ್ನೂ ಕೂಡ ಕೈಗೆ ತೆಗೆದುಕೊಂಡು ಅವುಗಳಿಗೆ ಪರಿಹಾರವನ್ನು ಹುಡುಕತಕ್ಕಂಥ ಪ್ರಯತ್ನವನ್ನು ಮಾಡಲಿಲ್ಲ. ಇದು ದುರದೃಷ್ಟಕರ.

ಇನ್ನೊಂದು ವಿಚಿತ್ರವಾದ ಸನ್ನಿವೇಶ ಏನೆಂದರೆ, ಇತ್ತೀಚೆಗೆ ದಿವಂಗತ ನೆಹರೂ ಅವರ ನಂತರ ಕೇಂದ್ರದವರು ತಮ್ಮ ದೌರ್ಬಲ್ಯವನ್ನು ಪ್ರದರ್ಶನ ಮಾಡುತ್ತಿದ್ದಾರೆ. ಅಲ್ಲದೆ ರಾಜ್ಯದ ಮುಖ್ಯ ಮಂತ್ರಿಗಳು ಕೇಂದ್ರದ ಕಾಂಗ್ರೆಸ್ ವರಿಷ್ಠರ ಕೈಗೊಂಬೆ ಗಳಾಗಿದ್ದಾರೆ. ಇದರಿಂದ ದೇಶದಲ್ಲಿ ವಿಚಿತ್ರಕಾರಕವಾದ ಪ್ರವೃತ್ತಿಗಳು ಬೆಳೆದುಕೊಂಡು ಹೋಗುತ್ತಿವೆ. ಯಾವುದೇ ಒಂದು ಸಮಸ್ಯೆಯನ್ನಾದರೂ ಕೂಡ ನಿರ್ದಿಷ್ಟವಾಗಿ ಧೈರ್ಯವಾಗಿ ತೀರ್ಮಾನ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಈ ಹಿಂದೆ ಭಾರತ ಮತ್ತು ಪಾಕಿಸ್ತಾನಗಳ ಮಧ್ಯೆ ಯುದ್ಧ ನಡೆದಾಗ ದಿವಂಗತ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಗಳವರು ವಿಶೇಷವಾದ ದಿಟ್ಟತನವನ್ನು ಪ್ರದರ್ಶಿಸಿ ಆಗ ಸೈನ್ಯ ಕಾರ್ಯಾಚರಣೆ ಮಾಡಿದರು. ಆ ಒಂದು ವಿಷಯವನ್ನು ಬಿಟ್ಟರೆ ಬಾಕಿ ವಿಷಯಗಳಲ್ಲಿ, ಅದರಲ್ಲೂ ಇತ್ತೀಚಿನ ಕೆಲವು ದಿವಸಗಳಲ್ಲಿ ನಡೆದ ವಿಷಯಗಳನ್ನು ನೋಡುವುದಾದರೆ, ಕೇಂದ್ರದವರು ತಮ್ಮ ದೌರ್ಬಲ್ಯವನ್ನು ಪ್ರದರ್ಶನ ಮಾಡುತ್ತಿದ್ದಾರೆ ಎಂಬುದು ಗೊತ್ತಾಗುತ್ತದೆ. ಇದಕ್ಕೆ ಕನ್ನಡದಲ್ಲಿ ಒಂದು ಗಾದೆಯನ್ನು ಹೇಳುತ್ತಾರೆ. ಅದು ಈ ರೀತಿ ಇದೆ. 'ಒತ್ತಿದರೆ ಸರಿ, ಸರಿದರೆ ಒತ್ತು' ಎಂದು. ಯಾರ ಕಡೆ ಎಳೆದರೂ ಅವರ ಕಡೆ ವಾಲತಕ್ಕ ಒಂದು ಪ್ರವೃತ್ತಿ ಅವರಲ್ಲಿ ಬಂದಿದೆ. ಇದಕ್ಕೆ ಅನೇಕ ದೃಷ್ಟಾಂತಗಳನ್ನು ಕಂಡುಕೊಳ್ಳಬಹುದು. ಅದು ಅಪಾಯಕಾರಿ ಪರಿಸ್ಥಿತಿಗೆ ಎಡೆ ಕೊಡುತ್ತದೆ. ಹಿಂದೆ ಒಂದು ಸಲ ಶ್ರೀ ಲಾಲ್‌ಬಹದ್ದೂರ್ ಶಾಸ್ತ್ರಿಗಳವರು ಮರಾಠಿ ಮುಖಂಡರ ಒತ್ತಾಯಕ್ಕೆ ಮಣಿದು ಇನ್ನು ಎರಡು ತಿಂಗಳಲ್ಲಿ ಗೋವಾ ಸಮಸ್ಯೆಯನ್ನು ಬಗೆಹರಿಸುತ್ತೇನೆಂದು ಹೇಳಿದ್ದರು. ಆದರೆ ದುರದೃಷ್ಟವಶಾತ್ ಅವರು ನಿಧನ ಹೊಂದಿದರು. ಅದು ಆದಮೇಲೆ ಈಗ ಪ್ರಧಾನ ಮಂತ್ರಿಗಳಾಗಿರತಕ್ಕ ಶ್ರೀಮತಿ ಇಂದಿರಾ ಗಾಂಧಿಯವರು ಮರಾಠಿ ಮುಖಂಡರ ಒತ್ತಾಯಕ್ಕೆ ಮಣಿದು ಈ ಗಡಿ ಸಮಸ್ಯೆಯನ್ನು ಕೈಗೆ ಎತ್ತಿಕೊಂಡು ಈ ಸಮಸ್ಯೆಯನ್ನ ಬಗೆಹರಿಸಲು ಪರಿಹಾರವನ್ನು ಹುಡುಕುತ್ತೇನೆ ಎಂದು ಹೇಳಿದ್ದಾರೆ. ಹಿಂದೆ ಬೆಂಗಳೂರಿನಲ್ಲಿ ಸೇರಿದ್ದಂಥ ಎ.ಐ.ಸಿ.ಸಿ. ಅಧಿವೇಶನದಲ್ಲಿ ಅಂತರರಾಜ್ಯ ಗಡಿ ವಿವಾದದಬಗ್ಗೆ ಏನಾದರೂ ಒಂದು ಕ್ರಮವನ್ನು ತೆಗೆದುಕೊಳ್ಳಬೇಕು ಎನ್ನುವ ಒಂದು ನಿರ್ಣಯವನ್ನು ಮಾಡಲಾಗಿತ್ತು. ಆ ನಂತರ ಮುಂಬೈನಲ್ಲಿ ಸೇರಿದ್ದ ಎ.ಐ.ಸಿ.ಸಿ ಅಧಿವೇಶನ ನಡೆದಾಗ ಈ ಗಡಿಯ ಸಮಸ್ಯೆಯ ಬಗ್ಗೆ ಅನೇಕರೀತಿಯ ಒತ್ತಾಯಗಳು ನಡೆದಿವೆ. ಆ ಸಂದರ್ಭದಲ್ಲಿ ಈ ಗಡಿ ಸಮಸ್ಯೆಯ ಬಗ್ಗೆ ಶ್ರೀ ಸೇನಾಪತಿ ಭಾಪಟ್ ಅವರು ಉಪವಾಸ ಮಾಡಿದರು ಮತ್ತು ಇನ್ನೂ ಅನೇಕರು ಉಪವಾಸ ಮಾಡಿದರು. ಅವರು ಉಪವಾಸ ಮಾಡುವುದಕ್ಕೆ ಮಹಾರಾಷ್ಟ್ರದ ಮುಖ್ಯ

ಮಂತ್ರಿಗಳ ಗೃಹವನ್ನೇ ಬಿಟ್ಟು ಕೊಡಲಾಗಿತ್ತು. ಅಲ್ಲಿ ಉಪವಾಸ ಮಾಡುತ್ತಿದ್ದವರನ್ನು ನೋಡಲು ರಾಷ್ಟ್ರದ ಪ್ರಧಾನ ಮಂತ್ರಿಗಳು ಹೋಗಿ ಉಪವಾಸ ಮಾಡುತ್ತಿದ್ದವರನ್ನು ಸಂತೈಸಿ ಅವರಿಗೆ ಕೆಲವು ಆಶ್ವಾಸನೆಗಳನ್ನು ಕೂಡ ಪ್ರಧಾನ ಮಂತ್ರಿಗಳು ಕೊಟ್ಟು ಬಂದಿದ್ದಾರೆ ಎಂದು ನಾನು ಕೇಳಿದ್ದೇನೆ.

5–00 P.M.

ಅಷ್ಟು ಮಟ್ಟಿಗೆ ಈ ಚಳವಳಿ ಮಹಾರಾಷ್ಟ್ರದಲ್ಲಿ ನಡೆದು ಹೋಯಿತು. ಪರಿಣಾಮವಾಗಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಒಂದು ನಿರ್ಣಯವನ್ನು ಕೂಡ ತೆಗೆದುಕೊಂಡಿತು. ಬಹುಶಃ 23ನೇ ತಾರೀಖು ಮಧ್ಯ ರಾತ್ರಿ ಹತ್ತೂವರೆಯ ಮೇಲೆ ಈ ನಿರ್ಣಯವಾದುದು ಎಂದು ಕಾಣುತ್ತದೆ. ಅದು ಮಹಾರಾಷ್ಟ್ರ ಮತ್ತು ಮೈಸೂರು ಗಡಿ ಮತ್ತು ಮೈಸೂರು ಮತ್ತು ಕೇರಳ ಗಡಿಗಳ ವಿಷಯದಲ್ಲಿ ಒಂದು ಒಬ್ಬ ಸದಸ್ಯ ಇರತಕ್ಕ ಆಯೋಗವನ್ನು ರಚಿಸತಕ್ಕ ಒಂದು ನಿರ್ಣಯವನ್ನು ತೆಗೆದುಕೊಂಡದ್ದು ಮಾತ್ರವಲ್ಲ, ಶ್ರೀಮತಿ ಇಂದಿರಾಗಾಂಧಿಯವರು ಮಹಾರಾಷ್ಟ್ರವನ್ನು ಬಿಡುವ ಮುಂಚೆ, ಒಂದು ತಿಂಗಳೊಳಗಾಗಿ ಒಂದು ಆಯೋಗವನ್ನು ರಚಿಸುತ್ತೇವೆಂದು ಆಶ್ವಾಸನೆಯನ್ನು ಕೂಡ ಕೊಟ್ಟರು ಎಂದು ಪತ್ರಿಕೆಯಲ್ಲಿ ಬಂತು. ಇದರಿಂದ ಕರ್ಣಾಟಕದ ಜನತೆಯು ವಿವಂಚನೆಗೆ ಒಳಗಾದರಲ್ಲದೆ, ಈ ಗಂಡಾಂತರ ಸ್ವರೂಪವನ್ನು ಕಂಡು ಭಯಭೀತರಾಗಿ ಅನೇಕ ರೀತಿಯ ಪ್ರತಿಭಟನೆಯನ್ನು ಅವರು ಸಲ್ಲಿಸಬೇಕಾಯ್ತು. ಈ ಚಳವಳಿಯನ್ನು ಹುಟ್ಟು ಹಾಕಿದವರು ಯಾರು? ದೇಶದ ಜನತೆಯ ಇತರ ಜಟಿಲ ಸಮಸ್ಯೆಗಳಲ್ಲಿದ್ದಂತಹ ಲಕ್ಷವನ್ನು ಬೇರೆ ಕಡೆಗೆ ತಕ್ಷಣ ಬೇರೆ ಸಮಸ್ಯೆಗೆ ಎಳೆದವರು ಯಾರು? ವಿರೋಧ ಪಕ್ಷದವರೇ ಅಥವಾ ಆಡಳಿತವನ್ನು ನಡೆಸತಕ್ಕ ಕಾಂಗ್ರೆಸ್ ಸರ್ಕಾರವೇ ಎನ್ನುವುದನ್ನು ಜನತೆ ಹಾಗೂ ನಾವು ಗಂಭೀರವಾಗಿ ವಿಚಾರ ಮಾಡಬೇಕಾಗಿದೆ. ಇದು ನಾವು ಬಯಸಿ ಬೇಡಿ ನಡೆಸಿರತಕ್ಕ ಚಳವಳಿಯಲ್ಲ, ಹೋರಾಟವಲ್ಲ,—ಇದು ನಮ್ಮ ಮೇಲೆ ಕಡಿದುಬಿದ್ದಂತಹ ಸಮಸ್ಯೆ. ಇದರಲ್ಲಿ ಕನ್ನಡ ನಾಡಿನ ಜನತೆಯ ಪರವಾಗಿ ಮೆಚ್ಚಿಗೆಯನ್ನು, ಹೆಮ್ಮೆಯನ್ನು ನಾನು ವ್ಯಕ್ತಪಡಿಸಬೇಕಾಗುತ್ತದೆ. ಈಗ ಅಧ್ಯಕ್ಷತೆ ವಹಿಸಿರತಕ್ಕ ನಮ್ಮ ಉಪಸಭಾಪತಿಯವರು, ತಮ್ಮ ಸರ್ಕಾರದ ನಿಲುವೇನೇ ಆಗಲಿ, ತಮ್ಮ ಪಕ್ಷದ ನಿಲುವೇನೇ ಇರಲಿ, ಅಥವಾ ಯಾವುದೇ ನಿಲುವನ್ನಾಗಲೀ ಯೋಚನೆ ಮಾಡದೆ, ಈ ರಾಜ್ಯದ ಗಡಿಗಳನ್ನು ಉಳಿಸಿಕೊಳ್ಳುವುದಕ್ಕೆ ಹೋರಾಟದಲ್ಲಿ ಧುಮುಕಿದರು; ಮತ್ತು ಬಂಧನಕ್ಕೆ ಒಳಗಾದರು ಎಂದು ಪತ್ರಿಕೆಗಳಲ್ಲಿ ಓದಿ ತಿಳಿದಿದ್ದೇವೆ. ಅದೇ ರೀತಿ ಮೇಲ್ಮನೆಯ ಅಧ್ಯಕ್ಷರಾಗಿದ್ದಂತಹ ಶ್ರೀ ಜಿ. ವಿ. ಹಳ್ಳಿಕೇರಿಯವರೂ ಬೆಳಗಾಂ ಸದಸ್ಯರ ಜೊತೆಯಲ್ಲಿ ಮುಖಂಡತ್ವವನ್ನು ವಹಿಸಿ ಹೋರಾಟವನ್ನು ನಡೆಸಿದರು. ಈ ಹೋರಾಟವನ್ನು ಕಾಂಗ್ರೆಸ್ ಸರ್ಕಾರದ ವಿರುದ್ಧ ಕಾಂಗ್ರೆಸ್ಸಿಗರೇ ಮಾಡುವುದು ವಿಚಿತ್ರ. ಕೆಲವು ಸಲ ಇದು ಒಂದು ನಾಟಕೀಯವಾಗಿ ಕಾಣಿಸುತ್ತದೆ ಎಂದು ಬಣ್ಣಿಸಿದ್ದಾರೆ. ಆದ್ದರಿಂದ ಈ ಹೋರಾಟದಲ್ಲಿ ಭಾಗವಹಿಸಿರುವ ಶಾಸಕರಿಗೆ, ಬೇರೆ ಶಾಸಕರಿಗೆ ಮತ್ತು ಜನರಿಗೆ, ನಾನು ಈ ಮನೆಯ ಪರವಾಗಿ ಮತ್ತು ಕನ್ನಡ ಜನತೆಯ ಪರವಾಗಿ ಅಭಿನಂದನೆ ಮತ್ತು ಗೌರವವನ್ನು ಸೂಚಿಸಬಯಸುತ್ತೇನೆ. ಬೆಂಗಳೂರಿನಲ್ಲಿ ಎಷ್ಟೋ ತರುಣರು ಎರಡು ದಿನಗಳ ಕಾಲ ಸತತವಾಗಿ ಸತ್ಯಾಗ್ರಹವನ್ನು ಮಾಡಿದ್ದಾರೆ. ಅವರಿಗೂ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಮಾತ್ರವಲ್ಲ, ಇದೇ ಹೋರಾಟದ ಒಂದು ಶಿಖರ ರೂಪದಲ್ಲಿ ಹರಿಹರ, ದಾವಣಗೆರೆ ಮತ್ತು ಗುಲ್ಬರ್ಗದಲ್ಲಿ ಕೆಲವು ಗಲಭೆಗಳು ಉಂಟಾದುವು. ಅದರಲ್ಲೂ ಕಾಂಗ್ರೆಸ್ ಸರ್ಕಾರದ ತಪ್ಪು ಇತ್ತು. ತಾವು ಒಂದು ಕಡೆ ಸತ್ಯಾಗ್ರಹ ಮಾಡಿ, ನಿಜವಾಗಿ ಸತ್ಯಾಗ್ರಹ ಮಾಡಿದವರ ಕಡೆ ರೈಲೇ ಬಾರದ, ಕಡೆ ಕಳಿಸಿ, ಕೊನೆಗೆ ಬೇರೆ ಜನರು ರೈಲಿನ ಜನರನ್ನು ಲೂಟಿ ಹೊಡೆದು, ರೈಲಿನಲ್ಲಿರುವ ಜನರು ತಮ್ಮ ವಸ್ತುಗಳನ್ನು ಎಲ್ಲಾ ಕಳೆದುಕೊಳ್ಳುವ ಸ್ಥಿತಿಯಾಯ್ತು. ಹರಿಹರ ಮತ್ತು ದಾವಣಗೆರೆಯಲ್ಲಿ ಜನರನ್ನು ಪ್ರಚೋದಿಸಿ, ಅವರನ್ನು ಕೊಲ್ಲಲಾಯ್ತು ಮತ್ತು ಗೋಳಿಬಾರು ಮಾಡಲಾಯ್ತು. ಇದು ಬಹಳ ದುಃಖಕರವಾದ ಸಂಗತಿ ಮತ್ತು ಇದು ನಮ್ಮ ಕಾಂಗ್ರೆಸ್ ಸರ್ಕಾರದ ದಬ್ಬಾಳಿಕೆಯನ್ನು ಸೂಚಿಸುತ್ತದೆ. ಇದು ಎಲ್ಲಾ ಆಗಿರತಕ್ಕ ಕಾಂಡ. ಅಲ್ಲಿಗೆ ಕಾಂಗ್ರೆಸ್ ಹೋರಾಟದ ಜಯ ಮುಗಿದಿದೆ. ಆದಾಗ್ಯೂ ಸಮಸ್ಯೆ ಬಗೆಹರಿದಿಲ್ಲ.

ಇನ್ನು ಶ್ರೀಮಾನ್ ನಿಜಲಿಂಗಪ್ಪನವರ ವಿಚಾರ. ಇವರು ನಮ್ಮ ರಾಜ್ಯದ ಮುಖ್ಯ ಮಂತ್ರಿಗಳು. ಆದರೂ ಇವರಿಗೆ ಕರ್ನಾಟಕದ ರಾಜ್ಯದ ಶಿಲ್ಪಿ ಎಂಬ ಒಂದು ಬಿರುದು ಇದೆ. ಇಲ್ಲಿ ನಾನು ಬಹುಮಟ್ಟಿಗೆ ಆ ಮಾತುಗಳನ್ನು ಒಪ್ಪುತ್ತೇನೆ. ಕರ್ನಾಟಕಕ್ಕಾಗಿ 30–40 ವರ್ಷಗಳ ಕಾಲ ದುಡಿದಿರುವವರಲ್ಲಿ ಅವರೊಬ್ಬರು, ಮತ್ತು ಕೆಲವೊಮ್ಮೆ ನೆಹರು ಮತ್ತು ಮಹಾ ನಾಯಕರ ಆಗ್ರಹಕ್ಕೆ ತುತ್ತಾಗಿ ಯಾವ ಸ್ಥಾನವನ್ನೂ ದೊರಕಿಸಿಕೊಳ್ಳಲಾರದೆ ಇದ್ದವರು ಇವರು. ಅವರ ಹಿಂದಿನ ಸರ್ಕಾರ ಶ್ರೀಮಾನ್ ಜತ್ತಿಯವರ ಸರ್ಕಾರ. ಇದು ಆದಮೇಲೆ ಮಹಾರಾಷ್ಟ್ರದೊಡನೆ

(ಶ್ರೀ ಎಸ್. ಗೋಪಾಲಗೌಡ)

ಸಣ್ಣಪುಟ್ಟ ಹೊಂದಾಣಿಕೆಗಳನ್ನು ಮಾಡಿಕೊಳ್ಳುವುದಕ್ಕೆ ಯಾವತ್ತೂ ಸಿದ್ಧ ಎನ್ನುವ ಮಾತನ್ನು ಹೇಳಿ ಒಂದು ತಪ್ಪು ನಿಲುವನ್ನು ತೆಗೆದುಕೊಂಡರು. ಅದು ಹೇಗೆ ಎಂಬುದನ್ನು ಆ ಮೇಲೆ ಹೇಳುತ್ತೇನೆ. ಈ ಒಂದು ಕಮಿಟ್‌ಮೆಂಟನ್ನು ನಮ್ಮ ರಾಜ್ಯ ಸರ್ಕಾರದವರು ಮಾಡಿಕೊಂಡಿದ್ದಾರೆ. ಇದಕ್ಕಿಂತ ಹಿಂದೆ ಹೋಗುವುದಕ್ಕಾಗುವುದಿಲ್ಲ. ಆದರೆ ಸಣ್ಣ ಪುಟ್ಟ ಹೊಂದಾಣಿಕೆಗಳೆಂದರೆ ಏನು ? ಸಣ್ಣ ಪುಟ್ಟ ಹೊಂದಾಣಿಕೆಗಳೆಂದರೆ ಅದು ಯಾವುದು ? ಅದು ಗ್ರಾಮವೋ, ಫಿರ್ಕಾವೋ, ತಾಲೂಕೇ ಜಿಲ್ಲೆಯೇ ? ಎಂಬುದನ್ನು ಸ್ಪಷ್ಟಪಡಿಸಿಲ್ಲ. ಯಾರೋ ಒಂದು ಕಾಲದಲ್ಲಿ ಏನೋ ಹೇಳಿದ್ದಾರೆಂದು ಆ ಹತ್ತು ಮೈಲಿ ಗೆರೆಯನ್ನು ಹೇಗೆ ಎಳೆಯುತ್ತಾರೆ? ಅದು ಗ್ರಾಮದ ಮಧ್ಯೆ ಹೋದರೆ, ನದಿ ದಾಟಿ ಹೋದರೆ, ಅದನ್ನು ಹೇಗೆ ಸರಿಪಡಿಸಿಕೊಳ್ಳುತ್ತಾರೆಂದು ನಾನು ಶ್ರೀ ಅಪ್ಪಣ್ಣ ಗೌಡರನ್ನು ಕೇಳುತ್ತೇನೆ. ಯಾವ ಗಡಿ ನಿರ್ಣಯ ಮಾಡಲಿಕ್ಕೂ ತಜ್ಞರು ಸೂಚಿಸಿಲ್ಲ. ಇದರ ಹಿಂದೆ ಯಾವ ತತ್ತ್ವವೂ ಇಲ್ಲ. ಇನ್ನೊಂದು, ಸಣ್ಣ ಪುಟ್ಟ ಹೊಂದಾಣಿಕೆಗಳು ಯಾವಾಗ ಮಾಡಬೇಕು ? ಜೋನಲ್ ಕೌನ್ಸಿಲ್ ಅದು ಯಾವಾಗ ಬರಬೇಕು, ಇದಕ್ಕೆಲ್ಲಾ ಸಂಬಂಧಪಟ್ಟ ಮುಖ್ಯಮಂತ್ರಿಗಳು ಮತ್ತು ಶಾಸಕರು ಒಪ್ಪಿಗೆ ಕೊಡಬೇಕು. ಅದು ಒಮ್ಮತದಿಂದ ರಾಜಿಯಿಂದ ವಿಚಾರವಿನಿಮಯ ಆಗಬೇಕೆ ವಿನಹ, ಅಂದೋಳನದಿಂದಲ್ಲ, ಹೋರಾಟದಿಂದಲ್ಲ. ಈ ಮಾತನ್ನು ಸಮರ್ಥಿಸಿಕೊಳ್ಳುವುದಕ್ಕೆ ರಾಜ್ಯ ಸರ್ಕಾರಕ್ಕೆ ಕಷ್ಟವಾಗಿದೆ. ಇದು ಒಂದು ತಪ್ಪು. ಇನ್ನೊಂದು ವಿಷಯ ಶ್ರೀ ನಿಜಲಿಂಗಪ್ಪನವರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಲ್ಲಿದ್ದಾರೆ. ಅವರನ್ನು ಕೆಲವೊಮ್ಮೆ ರಾಷ್ಟ್ರೀಯ ನಾಯಕರು ಎಂದು ಕರೆಯುವುದೂ ಉಂಟು.

ಅವರು ಇಂಥ ಒಂದು ದುರದೃಷ್ಟಕರ ನಿರ್ಣಯ ಅಂಗೀಕಾರವಾಗುವ ಸಮಯದಲ್ಲಿ ಉಪಸ್ಥಿತರಿದ್ದರು. ಈ ಪ್ರಕಾರ ಒಂದು ಏಕ ಸದಸ್ಯ ಆಯೋಗವನ್ನು ಮರಾಠಿ ಮತ್ತು ಮೈಸೂರು, ಮೈಸೂರು ಮತ್ತು ಕೇರಳ—ಇವುಗಳ ಮಧ್ಯೆಯಿರುವ ವಿವಾದಗಳನ್ನು ಇತ್ಯರ್ಥಪಡಿಸುವುದಕ್ಕಾಗಿ ನೇಮಕಮಾಡುತ್ತೇವೆಂದು ಕಾರ್ಯಕಾರಿ ಸಮಿತಿಯಲ್ಲಿ ಇಂದಿರಾಗಾಂಧಿ, ಕಾಮರಾಜರಾದಿಯಾಗಿ ಕಲೆತು ಮರಾಠಿಯವರ, ಮುಂಬೈನವರ ವಾತಾವರಣವನ್ನು, ಅಲ್ಲಿನ ಮುಖಂಡರ ಒತ್ತಡವನ್ನು ತಡೆಯಲಾರದೆ ಆಗಲೇ ನಿರ್ಣಯ ತೆಗೆದುಕೊಳ್ಳಬೇಕೆಂದಾಗ ಮಾನ್ಯ ನಿಜಲಿಂಗಪ್ಪನವರೂ ಅಲ್ಲೇ ಇದ್ದರು ! ಅವರೂ ಆ ನಿರ್ಣಯಕ್ಕೆ ಅಂಗೀಕಾರ ಕೊಟ್ಟಿದ್ದಾರೆ ! ನಿರ್ಣಯ ಸರ್ವಾನುಮತದಿಂದ ಅಂಗೀಕಾರವಾಗಿದೆ ! ಇದು ಎರಡನೆಯ ದೊಡ್ಡ ಆಘಾತ, ಅಥವಾ ರಾಜ್ಯದ ದೃಷ್ಟಿಯಿಂದ ಮಾಡಿದ ಅಪಕಾರ. ಈ ಪದ ಕಠಿಣವಾಗಿ ಕಾಣಬಹುದು. ಅವರೇನೋ ಉದ್ದೇಶಪೂರ್ವಕವಾಗಿ ಮಾಡಿಲ್ಲ, ನಿಜ. ಆದರೂ ಇದೊಂದು ದ್ರೋಹವೇ. ಉದ್ದೇಶವಿಲ್ಲದೆ, ಈ ನಿರ್ಣಯದ ಪರಿಣಾಮಗಳು ದುಷ್ಪರಿಣಾಮಗಳು ಗೊತ್ತಿಲ್ಲದೆ, ಏನೋ ಆರೇಳು ದೊಡ್ಡವರುಗಳು ಹೇಳುತ್ತಾರಲ್ಲಾ ಎಂದು ನಾನೂ ಹೇಳಿದೆ, ಎಂಬುದರಲ್ಲಿ ದುರುದ್ದೇಶವಿರುವುದಿಲ್ಲ. ಆದರೂ ಅದು ಪರಿಣಾಮದಲ್ಲಿ ದ್ರೋಹವಾಗುತ್ತದೆನ್ನಬಹುದು. ಅವರೀಗ ಹೇಳಬಹುದು—ಈ ಸನ್ನಿವೇಶದಲ್ಲಿ ಬೇಡವೆಂದೆ, ಮಹಾಚುನಾವಣೆಗಳಾಗುವವರೆಗೆ ಬೇಡವೆಂದೆ, ಎಂದು. ಅದರ ನಿಜಾಂಶವನ್ನು ಹೇಳುವುದಕ್ಕೆ ನಾವು ಅಲ್ಲಿರಲಿಲ್ಲ. ಅವರು ಹೇಳಿದ್ದನ್ನು ನಿಜವೆಂದು ಸಮರ್ಥಿಸುವವರು ಯಾರೂ ಇಲ್ಲಿಲ್ಲ. ಅಲ್ಲದೆ ಅವರೇನಾದರೂ 'ಇದೇ ರೀತಿ ದೇಶದ ಇನ್ನೂ ಅನೇಕ ಭಾಗಗಳಲ್ಲಿ ವಿವಾದವಿದೆ, ತೆಗೆದುಕೊಂಡರೆ ಅವನ್ನೂ ತೆಗೆದುಕೊಳ್ಳಬೇಕೆಂದು' ಎಂದು ವಾದ ಮಾಡಿದರೇ ಎಂದರೆ, ಶ್ರೀಮಾನ್ ಮೊರಾರ್ಜಿ ದೇಸಾಯಿಯವರು ಇಲ್ಲಿ ಬಂದಾಗ್ಗೆ ಅವರನ್ನು ಕೇಳಿದ್ದಕ್ಕೆ, ಅವರು 'ನಿಮ್ಮ ಪ್ರತಿನಿಧಿ ಅಂಥಾದ್ದೇನನ್ನೂ ಹೇಳಲಿಲ್ಲವಲ್ಲಾ' ಎಂದು ಬೇರೆ ಹೇಳಿದರು. ಇದು ಪತ್ರಿಕೆಗಳಲ್ಲೂ ಬಂದಿದೆ.

ಒಬ್ಬ ಮಾನ್ಯ ಸದಸ್ಯರು.—ಶ್ರೀ ಮೊರಾರ್ಜಿಯವರು ಆ ರೀತಿ ಹೇಳಿದ್ದನ್ನು ನೀವು ಕೇಳಿದಿರಾ ? ಅಥವಾ ಯಾರೋ ಹೇಳಿದ್ದನ್ನು ನೀವು ಹೇಳುತ್ತಿದ್ದೀರಾ ? ತಾವು ಹೇಳಿದಂತೆ ಪತ್ರಿಕೆಗಳಲ್ಲಿ ಬಂದಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಮೊರಾರ್ಜಿಯವರನ್ನು ನಾನು ಭೇಟಿ ಮಾಡಿಲ್ಲ. ಪತ್ರಿಕೆಗಳಲ್ಲಿ ನಾನು ಓದಿದ ವರದಿ. ಬೇರೆ ಭಾಗಗಳಿಂದ ನಮಗೆ ಏನೇನು ಬರಬೇಕೆಂದಿದೆಯೋ ಅದನ್ನೂ ಇತ್ಯರ್ಥ ಮಾಡಿ ಎಂದು ಯಾರೂ ಪುಣ್ಯಾತ್ಮರು ಹೇಳಲಿಲ್ಲವೆಂದು ತಿಳಿಸಿದೆ. ಅದೇನೇ ಇರಲಿ......

ಶ್ರೀ ನಾಗಪ್ಪ ಆಳ್ವ (ಆರೋಗ್ಯ ಶಾಖೆಯ ಮಂತ್ರಿಗಳು).—ಈಚಿನ ನಿರ್ಣಯದಲ್ಲಿ ಕೇರಳ, ಬೊಂಬಾಯಿ ಮತ್ತು ಕರ್ನಾಟಕದ ಗಡಿ ವಿವಾದಗಳನ್ನು ಪರಿಶೀಲಿಸಬೇಕೆಂದು ಮೂರು ಪ್ರಾಂತ್ಯಗಳನ್ನೂ ಸೇರಿಸಿದ ತೀರ್ಮಾನ ಬಂದಿರುವುದನ್ನು ನೋಡಿದರೆ ವರ್ಕಿಂಗ್ ಕಮಿಟಿಯ ಸಭೆಯಲ್ಲಿ

ಮುಖ್ಯಮಂತ್ರಿಗಳು ಈ ವಿಷಯವನ್ನು ಸೂಚಿಸಿದ್ದರು, ಚರ್ಚೆ ನಡೆಸಿದರು ಎಂಬುದು ಸ್ಪಷ್ಟವಾಗುತ್ತದೆ.

ಶ್ರೀ ಎಸ್. ಗೋಪಾಲಗೌಡ.—ಒಳ್ಳೆಯದು ; ಶ್ರೀಮಾನ್ ಆಳ್ವರು ಸ್ಪಷ್ಟೀಕರಣ ಮಾಡಿದ್ದು ನ್ಯಾಯವೇ. ಆದರೆ ಅವರಿಗೆ ವಿಷಯ ಅಷ್ಟು ಚೆನ್ನಾಗಿ ಗೊತ್ತಿಲ್ಲ—ಡಾಕ್ಟರ್ ವಿಷಯದಲ್ಲಲ್ಲ, ಅಲ್ಲಿ ನಡೆದ ಚರ್ಚೆಯ ವಿಷಯದಲ್ಲಿ. ನನಗೆ ತಿಳಿದ ಮಟ್ಟಿಗೆ, 'ಕೇವಲ ಮೈಸೂರು ಮಹಾರಾಷ್ಟ್ರದ ವಿಚಾರ ಎಂದು ಮಾತ್ರ ಹೇಳಿದರೆ ಗೊಂದಲವಾಗುತ್ತದೆ ; ಆದ್ದರಿಂದ ಹಿಂದೆಯೇ ಹೇಳಿದ್ದಾದ ಕಾಸರಗೋಡನ್ನೂ ಸೇರಿಸಿ ಎಂದು ನಾನೇ ಹೇಳಿದೆ' ಎಂದು ಕೂಡ ಶ್ರೀಮಾನ್ ನಿಜಲಿಂಗಪ್ಪನವರು ಹೇಳಿಕೊಂಡಂತೆ ಕಾಣುತ್ತೆ. ನಾನೇನೂ ವೈಯುಕ್ತಿಕವಾಗಿ ಮಾನ್ಯ ನಿಜಲಿಂಗಪ್ಪನವರನ್ನು ದೂಷಣೆ ಮಾಡುತ್ತಿಲ್ಲ. ಅವರು ರಾಜ್ಯದ ಮುಖ್ಯಮಂತ್ರಿಗಳಾಗಿ ಕೆಲವು ಕೆಲಸಗಳನ್ನು ನಿರ್ವಹಿಸಲೇಬೇಕು. ಅದನ್ನು ಮಾಡದಿದ್ದರೆ ರಾಷ್ಟ್ರದ ಹಿತಕ್ಕೆ ಧಕ್ಕೆ ಬರುತ್ತದೆ, ರಾಜ್ಯದ ಹಿತ ಬಂದಾಗ, ತನ್ನ ವೈಯಕ್ತಿಕ ಅಧಿಕಾರ— ಸ್ಥಾನಮಾನಗಳನ್ನು ಮೀರಿ ನಿಲ್ಲದೆ ಹೋದರೆ ಅವರು ಅಸ್ಥಾನಕ್ಕೆ ಅರ್ಹರಾಗುವುದಿಲ್ಲ. ಆಕಡೆ ವರಿಷ್ಠರನ್ನೂ ಒಲಿಸಿಕೊಳ್ಳಬೇಕು, ಈ ಕಡೆ ತನ್ನ ಬೆಂಬಲಿಗರನ್ನೂ ಇಟ್ಟುಕೊಳ್ಳಬೇಕು, ತನ್ನ ಸ್ಥಾನಕ್ಕೆ ಚ್ಯುತಿ ಬರದಂತಿರಬೇಕು, ತೆಲಗಿನ ಒಂದು ಗಾದೆಯಂತೆ 'ಅಂದಿರಿಕ್ಕೂ ಮಂಚ ವಾಳ್ಳು' ಎಂಬ ಹಾಗಿದ್ದರೆ ಯಾವುದೇ ಸಮಸ್ಯೆಯನ್ನೂ ಸಕಾಲದಲ್ಲಿ ಸರಿ ಮಾಡದೆ ಇದ್ದರೆ— ಬೀಸುವ ದೊಣ್ಣೆ ಏಟು ತಪ್ಪಿಸಿಕೊಂಡರೆ ಸಾಕೆಂಬ ನೀತಿಯನ್ನನುಸರಿಸಿದರೆ, ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವ ಪ್ರಯತ್ನ ಮಾಡಿದರೆ ಅದು ಒಬ್ಬ ರಾಷ್ಟ್ರದ ನಾಯಕನು ಮಾಡುವ ಕೆಲಸವಲ್ಲ ; ರಾಷ್ಟ್ರದ ಹೊಣೆಯನ್ನು ಹೊತ್ತಿರುವ ನಾಯಕನಿಗೆ ಅದು ತಕ್ಕುದಲ್ಲ.

ಹೀಗಿರುವಲ್ಲಿ ಶ್ರೀಮಾನ್ ನಿಜಲಿಂಗಪ್ಪನವರು ಈ ಕೆಲಸವನ್ನು ಮಾಡಿದ್ದಾರೆ ! ಇದರಿಂದ ಈಗಾಗಲೇ ರಾಷ್ಟ್ರಕ್ಕೆ ಸಾಕಷ್ಟು ಹಾನಿಯಾಗಿದೆ. ಅದನ್ನು ಸರಿಪಡಿಸುವುದು ಹೇಗೆಂಬುದು ಈಗ ನಮ್ಮ ಮುಂದಿರುವ ಸಮಸ್ಯೆಯಾಗಿದೆ. ಈ ಅಪರಾಧಕ್ಕೆ, ಮಾಡಿದ ತಪ್ಪಿಗೆ ಕನಿಷ್ಠ ಪರಿಹಾರವೆಂದರೆ, ಶ್ರೀಮಾನ್ ನಿಜಲಿಂಗಪ್ಪನವರು ರಾಜಿನಾಮೆ ಕೊಡುವುದು. ರಾಜಿನಾಮೆ ಕೊಟ್ಟು ಅವರು ರಾಷ್ಟ್ರಕ್ಕಾಗಿ ಹೋರಾಟ ಮಾಡಲಿ ; ಇಂದಿರಾ ಗಾಂಧಿಯವರ ಮುಂದೆ ನಿಂತು ವಾಗ್ವಾದ ಮಾಡಲಿ ಹೇಗಿದ್ದರೂ ಸ್ವಾತಂತ್ರ ಚಳವಳಿಯಲ್ಲಿ ಅವರೊಡನೆ ಇವರೂ ಹೋರಾಡಿದವರು. ಈ ಕಾರ್ಯವನ್ನು ಕೈಕೊಳ್ಳುವುದು ಸೂಕ್ತ. ಇಂದಿರಾ ಗಾಂಧಿಯವರು ಹೇಳಬಹುದು—"ಬೆಳಗಾಂ-ಮತ್ತು ಗೋವಾ ಈ ಎರಡು ಸಮಸ್ಯೆಗಳು ಕೇಂದ್ರ ಸರ್ಕಾರದ ಮುಂದಿದ್ದ 'Live issues', ಗತಿಸಿದ ಶಾಸ್ತ್ರಿಗಳವರು 8 ತಿಂಗಳಲ್ಲಿ ಪರಿಹಾರ ಮಾಡುತ್ತೇನೆಂದು ಮಾತು ಕೊಟ್ಟ ವಿಷಯ. ಆದ್ದರಿಂದ ಇದೊಂದು ಮುಖ್ಯವಾದ Live issue ಆಗಿ ನನ್ನ ಮುಂದೆ ಬಂತು. ಬೇರೆ ಕಡೆ ಇಂಥಹ ಪ್ರಶ್ನೆಗಳಿರಲಿಲ್ಲ, ಆದ್ದರಿಂದ ಏನಾದರೂ ಯಂತ್ರ ಹುಡುಕಿ ಸರಿಪಡಿಸಬೇಕೆಂದು ಹೇಳಿ ಈ ರೀತಿ ಮಾಡಿದ್ದಾಗಿದೆ" ಎಂದು. ಅವರಿಗೆ ತಾವು ಹೇಳಬೇಕು—'Live issue' ಎಂದರೇನು ? ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಏಕೆ ಇಷ್ಟು ಕಾತುರರಾಗಿದ್ದೀರಿ ; ಅದಕ್ಕೇನು ಅಂಥಹ ಬಲವತ್ತರವಾದ ಒತ್ತಡ ವೇನಿದೆ'—ಎಂದು. ನನಗೆ ಒಂದು ವಿಷಯ ಕೇಳಿ ಸಂತೋಷವಾಯಿತು : ಶಿವಾಜಿ ಪಾರ್ಕಿನಲ್ಲಿ ಸಭೆ ನಡೆಸಿ ಭಾಷಣ ಮಾಡುತ್ತಾ ಅವರು, ಅಲ್ಲಿಯ ಜನಗಳ 'ಜೈ-ಹಿಂದ್' ಕೂಗು ಬೆಳಗಾಂವರೆಗೂ ಮುಟ್ಟುವಂತೆ ಮಾಡಿ, ಎಂದು ಹೇಳಿದರಂತೆ.

ಉಪಾಧ್ಯಕ್ಷರು.—ಗಾಳಿ ಸುದ್ದಿ ಮೇಲೆ ಹೇಳಬೇಡಿ.

ಶ್ರೀ ಎಸ್. ಗೋಪಾಲಗೌಡ.—ಅದು ಗಾಳಿ ಸುದ್ದಿ ಅಲ್ಲ. ಈ ರೀತಿ ಜೈ-ಹಿಂದ್ ಎಂದು ಕೂಗಿದಾಗ ಅದು ಬೆಳಗಾಂವರೆಗೂ ಮುಟ್ಟಬೇಕೆಂದು ಹೇಳುವುದು ಒಂದು ರಾಷ್ಟ್ರದ ಪ್ರಧಾನಿಯವರಿಗೆ ತಕ್ಕುದಲ್ಲ. ಈ ಸಂಬಂಧದಲ್ಲಿ ಶ್ರೀ ಸೆಟಲ್‌ವಾಡ್‌ರವರು ಹೇಳಿರುವ ವಾಕ್ಯಗಳನ್ನು ಗಮನಿಸಬೇಕು. ಅವರು ಹೇಳುತ್ತಾರೆ......

ಶ್ರೀ ಕೆ. ಪಿ. ಗದಗ್ (ಗದಗ್).—ನಾನು ಆ ಸಭೆಯಲ್ಲಿದ್ದು ಅಧಿಕೃತವಾಗಿ ನಡೆದದ್ದನ್ನು ಹೇಳಬಲ್ಲೆ. ಅವರು 'ಗಡಿಯ ಮುಟ್ಟುವಂತೆ ಕೂಗಿರಿ' ಎಂದು ಮಾತ್ರ ಹೇಳಿದರು. 'ಗಡಿ' ಎಂದರೆ ಬೆಳಗಾಂ ಕೂಡ ಆಗುತ್ತದೆ, ಪಾಕಿಸ್ತಾನ ಕೂಡ ಆಗುತ್ತದೆ ಎಂಬುದನ್ನು ಮಾನ್ಯ ಸದಸ್ಯರು ಯೋಚಿಸಬೇಕು.

ಶ್ರೀ ಎಸ್. ಗೋಪಾಲಗೌಡ.—ನಿಮ್ಮ ತಿದ್ದುಪಡಿಯನ್ನು ನಾನು ಒಪ್ಪುತ್ತೇನೆ. ಆದರೆ ಅದರ ವ್ಯಾಖ್ಯಾನ ಸರಿಯೇ ಎಂಬುದನ್ನು ಯೋಚಿಸಬೇಕು. ಒಬ್ಬ ರಾಷ್ಟ್ರದ ನಾಯಕ ರಾಜ್ಯದ ಸಮಸ್ಯೆಗಳಲ್ಲಿ ನೇರವಾಗಿ ಭಾಗವಹಿಸುವುದು ದೇಶಕ್ಕೆ ಹಿತಕರವಲ್ಲ ; ಅದು ಹಾನಿಕರ ಎಂದು ಹೇಳು

(ಶ್ರೀ ಎಸ್. ಗೋಪಾಲ ಗೌಡ)

ತ್ತಾರೆ. ನನಗೆ ಇನ್ನೊಂದು ನೋಡಿ ಆಶ್ಚರ್ಯವಾಯಿತು. ಕಳೆದ 5ನೆಯ ತಾರೀಖು ಡೆಲ್ಲಿಯಲ್ಲಿ ನಡೆದ ಮುಖ್ಯಮಂತ್ರಿಗಳ ಸಭೆಯೊಂದರಲ್ಲಿ ಅನೇಕ ಮಹಾರಾಷ್ಟ್ರದ ಮುಖಂಡರು ಬಂದು ಪ್ರಧಾನ ಮಂತ್ರಿಗಳನ್ನು ನೋಡಿದರಂತೆ.

ನಾವೂ ಅಲ್ಲಿ ಅನೇಕರನ್ನು ನೋಡಿದ್ದೇವೆ. ಆದರೆ ಮಹಾರಾಷ್ಟ್ರದ ನಾಯಕರು ಸಮಿತಿಯಲ್ಲಿ ಬಂದು ವರದಿ ಕೊಡುವುದರ ಬದಲು ಅಲ್ಲಿ ಇದ್ದಂಥ ರಕ್ಷಣಾ ಮಂತ್ರಿಗಳು ಮಹಾರಾಷ್ಟ್ರದ ಸಮಸ್ಯೆಯನ್ನು ತೀವ್ರವಾಗಿ ಗಂಭೀರವಾಗಿ ಎತ್ತಿ ಅದಕ್ಕೆ ಮೊದಲು ಪರಿಹಾರ ಹುಡುಕಬೇಕು ಎಂದು ಹೇಳಿದರು. ಇದು ಎಷ್ಟು ಸಮಂಜಸವಾಗಿದೆ ಎಂಬುದನ್ನು ವಿಚಾರ ಮಾಡಬೇಕು. ಈಗ ನಮ್ಮ ಮುಂದೆ ಒಂದು ಸಮಸ್ಯೆ ಬಂದಿದೆ. ಇದಕ್ಕೆ ಪರಿಹಾರ ಹುಡುಕುವುದರಲ್ಲಿ ನಾವೂ ನಿರತರಾಗಿದ್ದೇವೆ. ಸರಕಾರ ಇದುವರೆಗೆ ಮಾಡಿದ ಎರಡು ತಪ್ಪುಗಳ ಮೂಲಕ ತಮ್ಮ ನಿಲುವನ್ನು ಇವತ್ತಿನ ದಿವಸ ಸಮರ್ಥಿಸಿಕೊಳ್ಳಲಾರದಂತೆ ಮಾಡಿದ್ದಾರೆ. ನಾನಾದರೂ ಕೂಡ ಈ ಸಭೆಯಲ್ಲಿ ಈಗ ಘಂಟಾ ಘೋಷವಾಗಿ ರಾಜ್ಯದ ಹಿತದ ಬಗ್ಗೆ ಕೆಲವು ವಿಚಾರಗಳನ್ನು ಹೇಳಬೇಕು ಎಂಬ ಆಶೆ ಇದೆ. ಯಾರಾದರೂ ತಪ್ಪು ಮಾಡಿದರೆ ಅದನ್ನು ಮುಚ್ಚಿಕೊಳ್ಳುವುದಕ್ಕಾಗಿ ರಾಜ್ಯದ ಹಿತಕ್ಕೆ ಧಕ್ಕೆ ಬರುವಂತೆ ಈಗ ಅಭಿಪ್ರಾಯ ತಳೆಯುವುದು ಸಾಧುವಲ್ಲ. ಅಂಥ ಕೆಲಸಕ್ಕೆ ನಾನು ಬೆಂಬಲ ಕೊಡುವುದು ಸಾಧ್ಯವಿಲ್ಲ. ಈಗ ನಮ್ಮ ಮುಂದೆ ಇರತಕ್ಕ ವಿಷಯ ಬಹಳ ಸ್ಪಷ್ಟವಾಗಿದೆ. ಇಂದು ದೇಶದಲ್ಲಿ ಆಹಾರ ಅಭಾವದ ಪರಿಸ್ಥಿತಿ ಇದೆ. ಇದು ಸಣ್ಣ ವಿಷಯವೇನಲ್ಲ. ಇದಲ್ಲದೆ ಸಾರ್ವತ್ರಿಕ ಚುನಾವಣೆ ಹತ್ತಿರ ಬರುತ್ತಾ ಇದೆ. ಇನ್ನೂ ಬೇಕಾದಷ್ಟು ಸಮಸ್ಯೆಗಳು ನಮ್ಮ ಮುಂದೆ ಇವೆ. ಹಣದ ವಿಚಾರದಲ್ಲಿ ರೂಪಾಯಿ ಅಪಮೌಲ್ಯದಿಂದ ಇವತ್ತು ಗೊತ್ತುಮಾಡಿರತಕ್ಕಂಥ ಆಯವ್ಯಯ ಪಟ್ಟಿಯನ್ನು ಖೋತಾ ಮಾಡತಕ್ಕ ಸಂದರ್ಭ ಬಂದಿದೆ. ಆಗಬೇಕಾದ ಕೆಲಸ ನಿಧಾನವಾಗಿ ಯೋಜನೆಯ ಪ್ರಗತಿ ಕುಂಠಿತವಾಗತಕ್ಕಂಥ ದೊಡ್ಡ ಅಪಾಯ ಪರಿಸ್ಥಿತಿ ಉಂಟಾಗಿದೆ. ಕಷ್ಟ ಪರಂಪರೆಗಳು ಮುಂದುವರಿಯುತ್ತಿವೆ. ಈ ದೃಷ್ಟಿಯಿಂದ ಇದರ ಹಿನ್ನೆಲೆ ನೋಡಿದಾಗ ಮಹಾ ರಾಷ್ಟ್ರ ಕರ್ನಾಟಕ ಗಡಿ ಜಗಳ, ಈ ಚಳವಳಿ ಇದು ಬಹಳ ಕ್ಷುಲ್ಲಕವೋ ಏನೋ ಅಕಾಲಿಕವೋ ಏನೋ, ಇದನ್ನು ಬದಿಗೆ ಇಡಬಹುದೇನೋ ಎಂದು ಅನೇಕರಿಗೆ ಅನಿಸುತ್ತದೆ. ನಾವು ಈ ವಿಷಯ ಚರ್ಚೆ ಮಾಡುವಾಗ ರಾಜ್ಯದಲ್ಲಿರುವ ಅಕ್ಕಿಯ ಅಭಾವದ ವಿಷಯ ಮಾತನಾಡಿ ಎಂದು ಹೇಳುತ್ತಾರೆ. ಅಕ್ಕಿ, ಅನ್ನ, ಬಟ್ಟೆ, ವಸತಿ—ಇವು ಜೀವನದ ದೊಡ್ಡ ಸಮಸ್ಯೆಗಳಾಗಿವೆ. ಬೊಂಬಾಯಿಯ ಹೋಟೇಲಿನಲ್ಲಿ ಲೋಟಾ ತೊಳೆಯುವವನಿಗೂ, ಶರಾವತಿಯಲ್ಲಿ ಮಣ್ಣು ಹೊರತಕ್ಕಂಥ ಮರಾಠಿ ಕೂಲಿಕಾರನಿಗೂ ಅಕ್ಕಿಯ ವಿಷಯವೇ ಮುಖ್ಯವಾಗಿದೆ. ಗಡಿ ಪ್ರಶ್ನೆ ಅವರಿಗೆ ಪ್ರಶ್ನೆಯೇ ಅಲ್ಲ. ಈಗ ಈ ಪ್ರಶ್ನೆ ತಲೆ ಎತ್ತಿದೆ, ಇದಕ್ಕೆ ಪರಿಹಾರ ಹುಡುಕಬೇಕಾಗಿದೆ. ಇದರ ಬಗ್ಗೆ ನಮ್ಮ ಮನಸ್ಸಿನಲ್ಲಿ ತುಂಬಾ ಕಳವಳ ಉಂಟಾಗಿದೆ. ಈ ಪ್ರಶ್ನೆ ಹತ್ತು ವರ್ಷದಿಂದ ಇರುವುದರಿಂದ ಒಂದು ರೀತಿಯ ಭಯ ಜನತೆಯಲ್ಲಿ ಮೂಡಿದೆ. ಮುಖ್ಯವಾಗಿ ಬೆಳಗಾಂವಿ ಮತ್ತು ಕಾರವಾರದ ವಿಚಾರದಲ್ಲಿ ಧಾರವಾಡ ಜಿಲ್ಲೆಯ ಜನರಿಗೆ ಭಯ ಉಂಟಾಗಿ ಪ್ರತ್ಯಾಘಾತಕ್ಕೆ ಒಳಗಾಗಿದ್ದಾರೆ.

[Mr. Speaker in the Chair].

ಇಂಥ ಪರಿಸ್ಥಿತಿ ಇನ್ನು ಮುಂದೆ ಉಳಿಯುವುದು ಸಾಧ್ಯವಿಲ್ಲ. ಈ ಸಭೆ ಒಂದು ನಿರ್ಣಯಕ್ಕೆ ಬರಬೇಕಾಗಿದೆ. ಆದುದರಿಂದ ನನ್ನ ಅಭಿಪ್ರಾಯ ಸ್ಪಷ್ಟಪಡಿಸುವುದಕ್ಕೆ ಇಷ್ಟಪಡುತ್ತೇನೆ. ಈ ವಿಷಯದ ಬಗ್ಗೆ ಹಿಂದೆ ಚರ್ಚೆಯಾಗಿದೆ. ರಾಜ್ಯಗಳನ್ನು ಭಾಷೆಯ ಆಧಾರದ ಮೇಲೆ ಪುನರ್ವಿಂಗಡಣೆ ಮಾಡಿದ್ದು ತಪ್ಪು ಆಯಿತೋ ಏನೋ ಎಂಬ ಭಾವನೆ ಕೆಲವರಲ್ಲಿ ಉಂಟಾಗಿದೆ. ಆದರೆ ಅದು ಸಮಂಜಸವಾಗಿಯೇ ಇದೆ. ರಾಜ್ಯ ಪುನರ್ವಿಂಗಡಣೆ ಸರಿಯಾಗಿಯೇ ಇದೆ. ಆದರೆ ಇದರಲ್ಲಿ ರಾಜಕಾರಣ ಬಂದಿದೆ, power politics ಇದೆ. ಆದುದರಿಂದ ಆಡಳಿತದ ಹಿತದೃಷ್ಟಿಯಿಂದ, ಜನತೆಯ ಹಿತದೃಷ್ಟಿಯಿಂದ ರಾಜ್ಯಗಳ ರಚನೆಯಾಗಲಿಲ್ಲ. ಎಸ್. ಆರ್. ಸಿ. ಒಂದು ಸಲಹೆ ಮಾಡಿದ್ದಾರೆ. ಉದಾಹರಣೆಗೆ ಬಳ್ಳಾರಿ, ತುಂಗಭದ್ರಾ ಅಣೆಕಟ್ಟು ಆಂಧ್ರಕ್ಕೆ ಕೊಡಬೇಕು ಅದಕ್ಕೆ ಬದಲಾಗಿ ಬೆಳಗಾಂ ಮತ್ತು ಇತರ ಪ್ರದೇಶ ಇಟ್ಟುಕೊಳ್ಳಬೇಕು ಎಂದು ಸಲಹೆ ಕೂಡ ಮಾಡಿದರು. ಇಂಥಾ ಸಣ್ಣ ಕೆಲಸ ಅವರು ಮಾಡಿದ್ದಾರೆ. ಇದರ ಬಗ್ಗೆ ಈಗ ಅವರನ್ನು ಟೀಕೆ ಮಾಡುವುದಿಲ್ಲ. ಯಾಕೆಂದರೆ, ಪಾರ್ಲಿಮೆಂಟು, ಆಕ್ಟ್ ಮಾಡಿದೆ. 14 ರಾಜ್ಯಗಳು ಅಸ್ತಿತ್ವಕ್ಕೆ ಬಂದಿವೆ. ಆದರೆ ಕೆಲವು ಭಾಗಗಳಲ್ಲಿ ಅತೃಪ್ತಿ ಅಸಮಾಧಾನ ಇದ್ದುದನ್ನು ಬಗೆಹರಿಸತಕ್ಕಂಥ ಕೆಲಸ ಕಳೆದ ಹತ್ತು ವರ್ಷಗಳಲ್ಲಿ ಆಗಬೇಕಾಗಿತ್ತು. ಮದ್ರಾಸ್, ಆಂಧ್ರದವರು ಗಡಿ ಪ್ರಶ್ನೆ ಬಗೆಹರಿಸಿಕೊಂಡಂತೆ ಇದನ್ನು ಸಹ ಬಗೆಹರಿಸುವುದು ಸಾಧ್ಯವಿತ್ತು. ಈ ಕೆಲಸ ಜವಾಬ್ದಾರಿಯಿಂದ ಮಾಡಲಿಲ್ಲ. ಬರೀ

ಕಾಲಹರಣವಾಯಿತು. ಬೆಳಗಾಂ ಜಿಲ್ಲೆಯಲ್ಲಿ ನಮ್ಮ ಗಡಿ ಸ್ನೇಹಿತರು 1957 ಮತ್ತು 1962ನೇ
ಇಸವಿಯಲ್ಲಿ ನಡೆದ ಚುನಾವಣೆಯಲ್ಲಿ ಗೆದ್ದರು. ಅವರು ಹೇಳುವುದು ಏನೆಂದರೆ, ಈ ಭಾಗ
ಮಹಾರಾಷ್ಟ್ರಕ್ಕೆ ಹೋಗಬೇಕು ಎಂದು ಹೇಳುತ್ತಾರೆ. ಎರಡು ಸಲ ಚುನಾವಣೆಯಲ್ಲಿ ಗೆದ್ದಿರು
ವುದರಿಂದ ಈ ಭಾಗ ಆಟೋಮ್ಯಾಟಿಕ್ ಆಗಿ ಬಿಟ್ಟುಕೊಡಬೇಕು ಎನ್ನುವುದು ಅವರ ವಾದ. ಇದು
ಅಪಾಯಕರ ವಾದ. ದೇಶದ ಯಾವದೇ ಭಾಗವನ್ನು ಚುನಾವಣೆಯ ಆಧಾರದ ಮೇಲೆ ಯಾರಿಗೂ
ಕೊಡಬಾರದು. ಈ ರೀತಿ ಮಾಡುವುದು ಸಾಧ್ಯವಿಲ್ಲ. ಇಂಥ ನೀತಿ ಇಟ್ಟುಕೊಳ್ಳಬಾರದು.
ಶ್ರೀಮಾನ್ ಕದಮ್ ಅವರು ಮೊದಲನೇ ಚುನಾವಣೆಯಲ್ಲಿ ಸೋತರು. ಎರಡನೇ ಚುನಾವಣೆಯಲ್ಲಿ
111 ಓಟುಗಳಿಂದ ಗೆದ್ದಿದ್ದಾರೆ. ಒಂದು ವೇಳೆ ನಾನು ಹೇಳುವುದು ತಪ್ಪಿದ್ದರೆ ದಯವಿಟ್ಟು
ಕ್ಷಮಿಸಬೇಕು. ಆದರೆ ಚುನಾವಣೆಯಲ್ಲಿ ದೊರಕಿಸಿದ ಓಟುಗಳ ಆಧಾರದ ಮೇಲೆ ಖಾನಾಪೂರ,
ಬೆಳಗಾಂ, ಕಾರವಾರ, ನಿಪ್ಪಾಣಿ, ಸೂಪಾ, ಹಳ್ಯಾಳ—ಈ ಭಾಗ ಮಹಾರಾಷ್ಟ್ರದಲ್ಲಿ ಸೇರಿಸಬೇಕೇ
ಸೇರಿಸಬೇಡವೇ ಎಂದು ಮಾಡುವುದಾದರೆ ಇದು ಒಂದು ಕಾಲ ಚೆಂಡಾಗುತ್ತದೆ. ಕಾಲ ಚೆಂಡನ್ನು
ಮೊದಲು ಇವರು ಒದೆಯುವುದು, ಆ ನಂತರ ಇನ್ನೊಂದು ಕಡೆಯವರು ಒದೆಯುವುದು ಈ ರೀತಿ
ಯಾಗುತ್ತದೆ. ಹೀಗಾದರೆ 10 ಲಕ್ಷ ಜನರ ವಿಚಾರದಲ್ಲಿ ಏನಾದೀತು ? ಒಂಬತ್ತು ಜನ ವಿಧಾನ
ಸಭಾ ಸದಸ್ಯರಿಗೆ ಅನುಕೂಲ ಮಾಡುವುದಾದರೆ ಕಾಳಿ ನದಿ ಯೋಜನೆ ಏನಾಗಬೇಕು, ಕಾರವಾರ
ಬಂದರ್ ಏನಾಗಬೇಕು, ಅಲ್ಯೂಮಿನಿಯಂ ಕಾರ್ಖಾನೆ ಏನಾಗಬೇಕು, ಡಿವಿಜನಲ್ ಹೆಡ್‌ಕ್ವಾರ್ಟರ್ಸ್
ಏನಾಗಬೇಕು, ಬೆಳಗಾಂನಲ್ಲಿರುವ ಮೆಡಿಕಲ್ ಕಾಲೇಜ್ ಏನಾಗಬೇಕು, ಲಾ ಕಾಲೇಜ್ ಏನಾಗ
ಬೇಕು, ಜನಜೀವನ ಏನಾಗಬೇಕು ? ನಮ್ಮ ಸ್ವಾರ್ಥಕ್ಕಾಗಿ ಜನತೆಯ ಬಲಿ ಕೊಡುವುದು ಸಾಧ್ಯ
ವಿಲ್ಲ, ಇಂಥ ಸೂತ್ರವನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ. ನನಗೆ ತಲೆಯಲ್ಲಿ ಕೂದಲಿಲ್ಲ, ಆದ್ದರಿಂದ
ಒಟ್ಟಿಗೆ ಎಲ್ಲರಿಗೂ ಆ ತರಹ ಇರುವಂತೆ ಬೋಳಿಸಬೇಕು ಎನ್ನುವಂಥ ಸೂತ್ರವನ್ನು ನಾನು
ಸಮರ್ಥನೆ ಮಾಡುವುದಿಲ್ಲ. ಇದನ್ನು ಯಾರಾದರೂ ಕಣ್ಣುಮುಚ್ಚಿ ಒಪ್ಪಬಹುದೇ? ಎಲ್ಲರೂ
ಇದನ್ನು ಪ್ರತಿಭಟನೆ ಮಾಡಬೇಕು. ಈ ತತ್ವದಲ್ಲಿ ಹುರುಳಿಲ್ಲ, ಏನೂ ನ್ಯಾಯವಿಲ್ಲ, ನಿಷ್ಠೆ ಇಲ್ಲ.
ಅದನ್ನು ಒಪ್ಪುವುದು ರಾಜಕಾರಣಿಗೆ ಸಾಧ್ಯವೇ ಇಲ್ಲ. ಚುನಾವಣೆಯ ಆಧಾರದ ಮೇಲೆ ನಮಗೆ
ಆ ಭಾಗವನ್ನು ಕೊಡಿ ಎಂದು ಹೇಳುವುದನ್ನು ನಾನು ಖಂಡಿಸುತ್ತೇನೆ. ನಮ್ಮ ಪಕ್ಷದ ಅಧ್ಯಕ್ಷರು
ಈ ಪ್ರಸ್ತಾಪ ಮಾಡಿದಾಗ ಅದನ್ನೂ ಕೂಡ ಅಷ್ಟೇ ಕಟುವಾಗಿ ಖಂಡಿಸಿದ್ದೇನೆ. ಚುನಾವಣೆಗಳ
ಆಧಾರದ ಮೇಲೆ ಯಾವುದಾದರೂ ಪ್ರದೇಶದಲ್ಲಿ, ಅದೂ ಗಡಿ ಪ್ರದೇಶದಲ್ಲಿ ಯಾರಾದರೂ ಗೆದ್ದು
ಬಂದಿದ್ದು, ಹಾಗೆ ಗೆದ್ದು ಬಂದಿರುವ ಕಾರಣದಿಂದಲೇ ಆ ಭಾಗ ಆ ಕಡೆ ಹೋಗಬೇಕು ಎಂದು ಹೇಳು
ವುದಾದರೆ ಅದು ಅಪಾಯಕಾರಿಯಾದ ತತ್ವ. ಇಂಥ ತತ್ವವನ್ನು ಅನುಸರಿಸಿದರೆ ನಾಳೆ ಭಾಗ
ಗಳಿಂದ ಬೇರೆಯವರು ಗೆದ್ದು ಬಂದರೆ ಪುನಃ ಮಹಾರಾಷ್ಟ್ರದವರು ಆ ಭಾಗವನ್ನು ನಮಗೆ
ಕೊಡಬೇಕಾಗುತ್ತದೆ.

5-30 P.M.

Sri B. P. KADAM.—Challenge......

ಶ್ರೀ ಎಸ್. ಗೋಪಾಲಗೌಡ.—ಚಾಲೆಂಜ್ ಮಾಡಿ, ಈ ಸಲ ಸೋಲಿಸೋಣ. ಇಂಥ ನೀತಿ
ಯನ್ನು ಅನುಸರಿಸುವುದು ಅಪಾಯಕಾರಿಯಾಗುತ್ತದೆ. ಇದು ಒಪ್ಪತಕ್ಕ ಸೂತ್ರವಾಗು
ವುದಿಲ್ಲ. ರೆಫರೆಂಡಂ, ಪ್ಲೆಬಿಸೈಟ್, ಜನಾಭಿಪ್ರಾಯ ಸಂಗ್ರಹ ಇವುಗಳ ಬಗ್ಗೆ ನಾನು
ಒಂದು ನಿರ್ಣಯದ ಮೇಲೆ ಮಾತನಾಡುವಾಗ ಹಿಂದೆ ಹೇಳಿದ್ದೆ. ಆ ನಿರ್ಣಯ
ಏನಾಯಿತೋ ಗೊತ್ತಿಲ್ಲ. ರೆಫರೆಂಡಾ, ಪ್ಲೆಬಿಸೈಟ್ ಇವು ಸ್ವಿಟ್ಜರ್‌ಲೆಂಡಿನಲ್ಲಿ ಇರಬಹುದು.
ಕೆಲವು ಕಾನೂನುಗಳನ್ನು ಮಾಡುವಾಗ ಜನಗಳಿಗೆ ತಿಳಿಸಿ, ಏನಾದರೂ ಬದಲಾವಣೆಗಳನ್ನು
ಮಾಡುವಾಗ ಜನಗಳಿಗೆ ತಿಳಿಸಿ ಅವರ ಅಭಿಪ್ರಾಯವನ್ನು ಸಂಗ್ರಹಿಸಬೇಕು ಎನ್ನುವ ಕಾನೂನು
ಅಲ್ಲಿದೆ. ಅಂಥದ್ದು ರಾಜ್ಯಾಂಗದಲ್ಲಿ ಇರಬೇಕು. ನಮ್ಮ ರಾಜ್ಯಾಂಗದಲ್ಲಿ ರೆಫರೆಂಡಂ, ಪ್ಲಬಿಸೈಟ್
ಇವುಗಳಿಗೆ ಅವಕಾಶವಿಲ್ಲ. ಪ್ರಜಾಪ್ರಭುತ್ವವನ್ನು ಅಷ್ಟು ದೂರ ತೆಗೆದುಕೊಂಡು ಹೋಗಿಲ್ಲ. ಇಲ್ಲದೆ
ಹೋದರೆ ಇವತ್ತು ತಾರಾಸಿಂಗ್ ಅವರು ಯುನೈಟೆಡ್ ನೇಷನ್ಸ್‌ಗೆ ಹೋಗುತ್ತಿದ್ದರು. ಇದು
ನಮ್ಮ ಅಜನ್ಮಸಿದ್ಧವಾದ ಹಕ್ಕು ಎಂದು ಅವರು ಹೇಳುತ್ತಾರೆ. ಒಬ್ಬ ವ್ಯಕ್ತಿಯ ಅಭಿಪ್ರಾಯದಂತೆ
ಜನರು ಮಾಡಬೇಕಾಗಿದೆ, ಅದೇ ಫಂಡಮೆಂಟಲ್ ರೂಲ್ ಎಂದು ವ್ಯಾಖ್ಯಾನ ಮಾಡುವುದು ವಿಪರೀತ
ಪರಿಭಾಷೆಯಾಗುತ್ತದೆ. ಕಾಶ್ಮೀರದ ಬಗ್ಗೆ ಒಂದು ಹುಮ್ಮಸ್ಸಿನಲ್ಲಿ, ಭಾವೋದ್ವೇಗದಲ್ಲಿ, ಒಳ್ಳೆಯ
ತತ್ವ ಪ್ರತಿಪಾದಿಸುತ್ತೇವೆ ಎಂದು 'ಪ್ಲೆಬಿಸೈಟ್' ಎಂದು ತಪ್ಪಿ ಆಡಿದ್ದರಿಂದ ನಾವು ಲಕ್ಷಗಟ್ಟಲೆ ಜನರ
ಪ್ರಾಣವನ್ನು ಕೊಡಬೇಕಾಯಿತು, ಕೋಟ್ಯಂತರ ಹಣವನ್ನು ಕಾಶ್ಮೀರದಲ್ಲಿ ಸುರಿಯಬೇಕಾಯಿತು,

(ಶ್ರೀ ಎಸ್. ಗೋಪಾಲ ಗೌಡ)

ಅರ್ಧ ಭಾಗವನ್ನು ಕಳೆದುಕೊಳ್ಳಬೇಕಾಯಿತು. ಆದರೂ ಇವತ್ತು ಅದು ನಮಗೆ ದಕ್ಕುತ್ತದೆಯೇ ಎನ್ನುವ ಸಂದೇಹ ಪಡತಕ್ಕ ವಿವಂಚನೆಯ ಸ್ಥಿತಿಯಲ್ಲಿ ನಾವು ಇದ್ದೇವೆ. ಒಂದು ವೇಳೆ ಜಿಲ್ಲೆ, ತಾಲ್ಲೂಕು, ಅಥವಾ ಹಳ್ಳಿ ಘಟಕವಾಗಿರಬೇಕು ಎನ್ನುವುದನ್ನು ತೀರ್ಮಾನಿಸಿ ಪ್ಲೆಬಿಸೈಟ್, ರೆಫರೆಂಡಂ, ಚುನಾವಣೆಯ ವಿದ್ಯಮಾನಗಳು, ಇವುಗಳನ್ನೆಲ್ಲ ಆಧಾರವಾಗಿಟ್ಟುಕೊಂಡು ರಾಜ್ಯದ ಗಡಿಗಳನ್ನು ಹೊಂದಾಣಿಕೆ ಮಾಡುತ್ತ ಹೋಗುತ್ತೇವೆ ಎಂದು ಹೇಳುವುದಾದರೆ ವಿಪರೀತ ಕೆಲಸವಾಗುತ್ತದೆ. ಇದರಿಂದ ಸದಾ ಕಾಲಕ್ಕೂ ನಾವು ದೊಡ್ಡ ತಪ್ಪನ್ನು ಮಾಡಿದಂತಾಗುತ್ತದೆ. ಗ್ರಾಮದಲ್ಲಿರತಕ್ಕ ಜನರ ಜೀವನವನ್ನು ಅಸ್ತವ್ಯಸ್ತ ಮಾಡಿದಂತಾಗುತ್ತದೆ. ಇಂಥ ಭಾವನೆಯಿಂದ ನೋಡುವುದು ಅಸಮಂಜಸ, ಅಪಾಯಕಾರಿ ಎನ್ನುವ ಮಾತನ್ನು ಹೇಳುತ್ತೇನೆ. ಈ ಮೂರು ಸೂತ್ರಗಳನ್ನೂ, ಚುನಾವಣೆ, ಪ್ಲೆಬಿಸೈಟ್, ರೆಫರೆಂಡಂ, ನಾನು ತಿರಸ್ಕರಿಸುತ್ತೇನೆ. ಹಾಗಾದರೆ ಜನಾಭಿಪ್ರಾಯ ಹೇಗೆ, ಎಂದರೆ ಅದಕ್ಕೆ ನಾನಾ ಮಾರ್ಗಗಳಿವೆ. ಜನಾಭಿಪ್ರಾಯವನ್ನು ತೆಗೆದುಕೊಳ್ಳುವುದಕ್ಕೆ ಇವುಗಳನ್ನು ಬಿಟ್ಟು ಬೇರೆ ಮಾರ್ಗಗಳಿವೆ.

ನಾಲ್ಕನೆಯದಾಗಿ ನಾನು ಮೊದಲೇ ಹೇಳಿದ ಹಾಗೆ ಭಾಷಾವಾರು ರಾಜ್ಯಗಳ ಪುನರ್ವಿಂಗಡಣೆಯ ಬಗ್ಗೆ ನನಗೆ ಅಸಮಾಧಾನವಾಗಿಲ್ಲ, ನಾನು ಆ ತತ್ವವನ್ನು ತಿರಸ್ಕರಿಸುವ ಮಟ್ಟಕ್ಕೆ ಹೋಗಿಲ್ಲ ಎಂದು ಹೇಳಿದ್ದೇನೆ. ಆದರೆ ಇವತ್ತು ಭಾಷೆಯ ಆಧಾರದ ಮೇಲೆ ಈ ರಾಜ್ಯಗಳನ್ನು ಪುನರ್ವಿಂಗಡಣೆ ಮಾಡಿರುವುದರಿಂದ ಈ ಒಂದು ತತ್ವದ ಪ್ರಕಾರ, 'ಲಾಜಿಕಲ್ ಕನ್‌ಕ್ಲೂಷನ್'ಗೆ ನಾವು ಹೋಗಲೇ ಬೇಕಾಗುತ್ತದೆ ಎನ್ನುವ ಹಟ ಕೆಲವರು ಹಿಡಿದಿದ್ದಾರೆ. ಅದು ಅನುಕೂಲ ಸಿಂಧು ನೀತಿಯಾಗುತ್ತದೆ. ಗ್ರಾಮವನ್ನು ಘಟಕವಾಗಿ ಇಟ್ಟುಕೊಳ್ಳಬೇಕು, ಜನರ ಅಭಿಪ್ರಾಯವನ್ನು ತೆಗೆದುಕೊಳ್ಳಬೇಕು, ಇದು ಉತ್ತಮವಾದ ಸೂತ್ರ, ಈ ರೀತಿ ಮಾಡೋಣ ಎಂದು ಹೇಳಿದರು. ನಮ್ಮ ರಾಜ್ಯದ ದೃಷ್ಟಿಯಿಂದ ನಾನು ಹೇಳುತ್ತೇನೆ, ಈ ಒಂದು ತತ್ವವನ್ನು ಒಪ್ಪಿಕೊಂಡರೆ ನಾವು ನಮ್ಮ ರಾಜ್ಯಕ್ಕೆ ನ್ಯಾಯವಾಗಿ ಸೇರಿರತಕ್ಕ ಅನೇಕ ಭಾಗಗಳನ್ನು ನೆರೆ ರಾಜ್ಯಗಳಿಗೆ ಬಿಟ್ಟುಕೊಡಬೇಕಾಗುತ್ತದೆ. ಈಗ ಮಹಾರಾಷ್ಟ್ರ ಸರ್ಕಾರದವರು ಮತ್ತು ಮರಾಠಿ ಮುಖಂಡರು ಸುಮಾರು 1074 ಹಳ್ಳಿಗಳನ್ನು ಹಾಲಿ ನಮ್ಮ ರಾಜ್ಯದಲ್ಲಿರತಕ್ಕ ಹಳ್ಳಿಗಳನ್ನು ಬೇಡಿದ್ದಾರೆ; ಸುಮಾರು ಹತ್ತು ಲಕ್ಷ ಜನಸಂಖ್ಯೆಯನ್ನು ಬೇಡಿದ್ದಾರೆ; 500 ಮೈಲಿ ಉದ್ದದ ಗಡಿಯನ್ನು ಪುನಃ ಎಳೆಯಬೇಕು ಎಂದು ಕೇಳಿದ್ದಾರೆ. ಯಾವ ಆಧಾರದ ಮೇಲೆ ಹೀಗೆ ಹೇಳಿದರು ಎಂದರೆ ನೂರಕ್ಕೆ 50 ಕ್ಕಿಂತ ಹೆಚ್ಚು ಮರಾಠಿ ಮಾತನಾಡುವ ಜನರನ್ನು ಹೊಂದಿದೆ ಎನ್ನುವ ಒಂದು ತತ್ವದ ಆಧಾರದ ಮೇಲೆ. ಕೊಂಕಣಿ ಮರಾಠಿ ಭಾಷೆಯ ಉಪಭಾಷೆ, ಆದುದರಿಂದ ಕೊಂಕಣಿ ಮಾತನಾಡುವ ಕಾರವಾರದ ಭಾಗಗಳೂ ಮಹಾರಾಷ್ಟ್ರಕ್ಕೆ ಸೇರಬೇಕು ಎನ್ನುವುದು ಒಂದು ಅವರ ತತ್ವ. ಈ ಮಾತಿನಲ್ಲಿ ಬಹಳ ಅಪಾಯವಿದೆ. ಕೊಂಕಣಿ ಮರಾಠಿಯ ಉಪಭಾಷೆಯೇ, ಅಥವಾ ಮರಾಠಿ ಕೊಂಕಣಿಯ ಉಪಭಾಷೆಯೇ ಎನ್ನುವ ನಿರ್ಣಯ ಭಾಷಾ ತಜ್ಞರು ಹೇಳುವಂತೆ ಇನ್ನೂ ಆಗಿಲ್ಲ. ಎರಡೂ ಭಾಷೆಗಳಿಗೂ ಲಿಪಿ ಇಲ್ಲ. ಇದು ಬಹಳ ಕಷ್ಟದ ಸಮಸ್ಯೆ. ನಾನು ತಜ್ಞನಲ್ಲ, ನಾನು ಆ ಸಮಸ್ಯೆಗೆ ಹೋಗುವುದಿಲ್ಲ. ಗ್ರಾಮವನ್ನು ಘಟಕವಾಗಿ ಇಟ್ಟುಕೊಂಡರೆ, ಹೆಜ್ಜೆ ಇಡುತ್ತ, ಹೆಜ್ಜೆ ಇಡುತ್ತ ಬಂಧು ಮಾನ್ಯ ಸಾಮಜಿ ಅವರ ಊರಿಗೆ ಬಂದು ಅಲ್ಲಿಂದ ಮತ್ತೊಂದು ಹಳ್ಳಿಗೆ ಹೋಗಿ, ಅಲ್ಯೂಮಿನಿಯಂ ಕಾರ್ಖಾನೆ ಆಗುವ ಸ್ಥಳದ ಸಮೀಪದವರೆಗೂ ತೆಗೆದುಕೊಂಡು ಹೋಗತಕ್ಕದ್ದು, ಹೀಗೆ ಪ್ರತಿ ಹಳ್ಳಿಯನ್ನೂ ಹುಡುಕಿಕೊಂಡು ಹೋಗಬೇಕು, ಖಾನಾಪುರದವರೆಗೂ ಹೀಗೆ ಹೋಗಬೇಕು ಎಂದು ನಮ್ಮ ಸ್ನೇಹಿತರು ಹೇಳುತ್ತಾರೆ. ಈ ಭಾಗದ ಹಳ್ಳಿಗಳಲ್ಲಿ ಮರಾಠಿ ಜನರೂ ಇದ್ದಾರೆ, ಕನ್ನಡಿಗರೂ ಇದ್ದಾರೆ. ಗಡಿ ಪ್ರದೇಶದಲ್ಲಿ ನಾನು ಇದ್ದರೆ ನನಗೆ ಹತ್ತು ಭಾಷೆಗಳು ಬರುತ್ತವೆ. ಬೇರೆ ಊರುಗಳ ಸಂಪರ್ಕವನ್ನು ಹೊಂದಿ ಬಂದಿರುವವರಿಗೆ ಆಯಾ ಊರುಗಳಿಗೆ ಹೋದಾಗ ಅಲ್ಲಿಯ ಭಾಷೆಯನ್ನು ಕಲಿಯಬೇಕಾಗುತ್ತದೆ. ಹೊರಗಡೆ ಒಂದು ಭಾಷೆ, ಶಾಲೆಯಲ್ಲಿ ಬೇರೆ ಭಾಷೆ, ಮನೆಯಲ್ಲಿ ಬೇರೆ ಭಾಷೆ, ಹೆಂಡತಿಯದು ಬೇರೆ ಭಾಷೆ ಹೀಗೆ ಏನೇನೋ ಇರುತ್ತದೆ. ಇದರಲ್ಲಿ ಭಾಷೆಯನ್ನೇ ನೂರಕ್ಕೆ ನೂರರಷ್ಟು ಆಧಾರದಮೇಲೆ ಇಟ್ಟುಕೊಂಡು ಈ ಭಾಗವನ್ನು ಪುನಃ ಹಂಚಬೇಕು ಎಂಬ ತತ್ವಕ್ಕೆ ನಾನು ಬದ್ಧನಾಗುವುದಕ್ಕೆ ಸಾಧ್ಯವಿಲ್ಲ. ತತ್ವಹೀನವಾದ ನಿಲುವು ನನ್ನದು ಎಂದು ಹೇಳುವುದಾದರೆ, ರಾಜ್ಯದ ಹಿತದೃಷ್ಟಿಯಿಂದ ನಾನು ಅದನ್ನು ಹೊರುವುದಕ್ಕೆ ಸಿದ್ಧ. ಕಾರಣ ನಿಪ್ಪಾಣಿ, ಬೆಳಗಾವಿ, ಸೂಪ, ಹಳಿಯಾಳ, ಕಾರವಾರ—ಈ ಭಾಗಗಳಲ್ಲಿ ಇಂದಿರುವ ಕನ್ನಡದ ನೆಲವನ್ನು ಗೊತ್ತುಮಾಡುವುದು ಸರಕಾರದ ಕೆಲಸವಾದರೂ ರಾಜಕಾರಣಿಗಳು ಅದರಲ್ಲಿ ತಪ್ಪುಮಾಡಬಹುದು. ಆದರೆ ಕಾರವಾರ ಅಥವ ಬೆಳಗಾವಿಯವರು ಯಾರೂ ಅದರಿಂದ ಸಂತೋಷಪಡಲಾರರು. ಬೆಳಗಾವಿ ಮುಂತಾದ ಕನ್ನಡ ಭಾಗಗಳು ಈಗೇನು ಸುಖಸಂತೋಷದಿಂದಿವೆಯೋ ಅದೇ ರೀತಿಯಲ್ಲಿ ಅವನ್ನು ಬೇರೆ ರಾಜ್ಯಕ್ಕೆ

ಸೇರಿಸುವುದರಿಂದ ಇರಲಾರವು. ಎರಡೂ ಕಡೆ ಕಾಂಗ್ರೆಸ್ ರಾಜ್ಯವಿದೆ, ತೆರಿಗೆ ಹಾಕುತ್ತಾರೆ, ಎರಡೂ ರಾಜ್ಯಗಳ ಜನಜೀವನವನ್ನು ನೋಡಿದ್ದೇನೆ. ಭೂಸುಧಾರಣೆ ವಿಚಾರದಲ್ಲಿ ಮಹಾರಾಷ್ಟ್ರದವರು ಒಂದು ಹೆಜ್ಜೆ ಮುಂದಿಟ್ಟಿರಬಹುದು, ರೋಡ್ ಟ್ರಾನ್ಸ್‌ಪೋರ್ಟ್ ರಾಷ್ಟ್ರೀಕರಣ ಮಾಡಿರಬಹುದು, ಈ ಕೆಲವು ತಾರತಮ್ಯ ನೋಡಬಹುದು. ಬೆಳಗಾವಿ ಈಗ ಕನ್ನಡ ರಾಜ್ಯದಲ್ಲಿರಾವುದರಿಂದ ಅಂಥ ಅಪಾಯವೇನೂ ಆಗಿಲ್ಲ. ಅದು ನಮ್ಮದಿಯಿಂದಿದೆ, ಬಹಳ ಜನರು ಮಹಾರಾಷ್ಟ್ರದವರು ಬಂದು ಅಲ್ಲಿ ನೆಲೆಸಿದ್ದಾರೆ. ನಾವೇನೂ ಭೂಮಿಯಿಂದ ಹುಟ್ಟುವುದಿಲ್ಲ, ಮನುಷ್ಯ ಹರಿದಾಡುವ ವ್ಯಕ್ತಿ, ಕನ್ನಡಿಗರೂ ಎಷ್ಟೋ ಜನರು ಮುಂಬಯಿಯಲ್ಲಿದ್ದಾರೆ. ಚುನಾವಣೆಯಲ್ಲಿ ಓಟು ಕೊಟ್ಟು ಮರಾಠಿ ಜನರನ್ನು ಕಳಿಸಿದ್ದಾರೆ. ಮರಾಠಿ ಜನರಿದ್ದಾರೆ, ಮರಾಠಿ ಜನರಿರುವ ಹಳ್ಳಿಗಳು ಹುಟ್ಟಿಕೊಂಡಿವೆ, ಆದುದರಿಂದ ಅವನ್ನು ತೆಗೆದುಕೊಳ್ಳಲೇಬೇಕು ಎಂದು ಹೇಳುವುದು ಬಹಳ ಒಳ್ಳೆಯವಾದವಲ್ಲ. ಇದನ್ನು ನಾನು ಬಹಳ ಸೌಮ್ಯದಿಂದ ಹೇಳುತ್ತಿದ್ದೇನೆ. ಈ ಭಾಗಗಳನ್ನು 10 ವರ್ಷಗಳಿಂದ ಇಟ್ಟುಕೊಂಡಿದ್ದೇವೆ, ಇದೊಂದು ಹೊಸ ವಸಾಹತು ಎಂದು ಒಬ್ಬರು ಹೇಳಿದರು. ಅದನ್ನು ಕೇಳಿ ಬಹಳ ನೋವಾಯ್ತು. ಸಾಮ್ರಾಜ್ಯವಿಲ್ಲದೆ ವಸಾಹತು ಬರುವುದಿಲ್ಲ. ಇದರಿಂದ ದೊಡ್ಡ ಘರ್ಷಣೆ ವಿರಸ ಉಂಟಾಗುತ್ತದೆ. ಯಾದವಿ ಕಲಹಕ್ಕೆ ದಾರಿಯಾಗುತ್ತದೆ. ಇದನ್ನು ಮರೆಯಬಾರದು. ಆದುದರಿಂದ ನಿಪ್ಪಾಣಿ, ಸೂಪ, ಹಳಿಯಾಳ ಮುಂತಾದ ಎಲ್ಲಾ ಭಾಗಗಳಿಂದಲೂ ಬಂದಿರುವ ನಮ್ಮ ಮಿತ್ರರಲ್ಲಿ ನಾನು ಕಳಕಳಿಯಿಂದ ಪ್ರಾರ್ಥಿಸುತ್ತೇನೆ, ಅಲ್ಲಿನ ಜನರಲ್ಲಿ ಮಾನವಿ ಮಾಡಿಕೊಳ್ಳುತ್ತೇನೆ, ಕನ್ನಡ ಜನರ ಪರವಾಗಿ ಕೇಳಿಕೊಳ್ಳುತ್ತೇನೆ, ಅವರು ಈ ಆಗ್ರಹವನ್ನು ಕೈಬಿಟ್ಟು ನಮ್ಮ ರಾಜ್ಯದಲ್ಲೇ ಉಳಿಯಲು ದೊಡ್ಡ ಮನಸ್ಸುಮಾಡಬೇಕು, ನಾವು ಯಾವಾಗಲೂ ಅವರನ್ನು ಎರಡನೆ ಪ್ರಜೆ ಎಂದು ನೋಡಿಲ್ಲ, ಅವರಮೇಲೆ ಹೆಚ್ಚಿನ ತೆರಿಗೆಯನ್ನು ಹೇರಿಲ್ಲ. ಆದುದರಿಂದ ಅವರು ದೊಡ್ಡ ಮನಸ್ಸುಮಾಡಿ ಹೋರಾಟಮಾಡಿ ನಮಗೆ ಬೆಂಬಲ ಕೊಡಬೇಕಾಗಿಲ್ಲ, ನಾವಿಲ್ಲಿ ಸುಖವಾಗಿದ್ದೇವೆ, ನಮ್ಮ ಮಕ್ಕಳು ಮರಿಯು ಭವಿಷ್ಯತುಂಬಾ ಉಜ್ವಲವಾಗಿದೆ ಎಂದು ಮಹಾರಾಷ್ಟ್ರ ಸರಕಾರಕ್ಕೆ ತಿಳಿಸಿದರೆ ಯಾವುದೇ ಘರ್ಷಣೆ ಇರುವುದಿಲ್ಲ. ಈ ಒಂದು ಭಾಗವನ್ನು ಕರ್ಣಾಟಕದಿಂದ ಬಿಟ್ಟುಕೊಡುವುದು ಸಾಧ್ಯವಿಲ್ಲ. ಚಂದಗಡದಿಂದ ಕಾರವಾರದವರೆಗೆ 150 ಮೈಲಿಯಾಗಬಹುದು, ಅದನ್ನು ಗಡಿ ಹೊಂದಾಣಿಕೆ ಎಂದು ಕೇಳುತ್ತಾರೆ. ಮಹಾರಾಷ್ಟ್ರ ಗಡಿ ಇರುವುದೆಲ್ಲ, ಕಾರವಾರ ಇರುವುದೆಲ್ಲಿ ? ಅದನ್ನು ಕೇಳುವುದಕ್ಕೆ ಅವರಿಗೆ ಹಕ್ಕಿದೆಯೇ ? ಕೊಡುವವರಿಗೆ ಬುದ್ಧಿ ಇರಬೇಕು. ಈ ವಾದ ಸಮರ್ಥನೆ ಮಾಡುವವರು ಪರಿಶೀಲಿಸಬೇಕಾಗುತ್ತದೆ. ಕೇಂದ್ರ ಸರ್ಕಾರದ ತಲೆಯಲ್ಲಿ ಏನೋ ತುಂಬಿದ್ದಾರೆ. ಸಮಸ್ಯೆ ಜ್ವಲಂತವಾಗಿದೆ, 10 ವರ್ಷಗಳಿಂದ ಲೈವ್ ಇಷ್ಯೂ ಆಗಿ ನಿಂತಿದೆ ಎನ್ನುತ್ತಾರೆ ನಿಜ ಇದು ಮಹಾರಾಷ್ಟ್ರ ಏಕೀಕರ ಸಮಿತಿಗೆ ಗೊತ್ತಿದೆ. ಕೆಲವರು ಕಾಂಗ್ರೆಸ್ ಅಧಿವೇಶನ ನಡೆಯುವ ಕಡೆ ಹೋಗಿ ಉಪವಾಸ ಮಾಡಿ ಮೆಮೊರ್ಯಾಂಡಂ ಕೊಡುತ್ತಾರೆ. ಎಮರ್ಜೆನ್ಸಿ ಪೀರಿಯಡ್ ಮುಗಿದ ಮೇಲೆ ಕೊಡುತ್ತೇವೆಂದು ಯಾರೂ ಹೇಳಬಾರದು. ಯಾವುದೋ ರಾಜಕೀಯ ಕಾರಣಕ್ಕಾಗಿ ಹಾಗೆ ಹೇಳಿರಬಹುದು. ಆದರೆ ಈ ಒಂದು ಭಾವನೆ ಕೇಂದ್ರ ಸರ್ಕಾರದ ತಲೆಯಲ್ಲಿ ಹೊಕ್ಕಿರುವಾಗ ಅದು ಯಾವುದನ್ನು ಬೇಕಾದರೂ ಲೈವ್ ಇಷ್ಯೂ ಆಗಿ ಇಡಬಹುದು. ಈ ಸಮಸ್ಯೆಯನ್ನು ಒಂದು ಏಕ ಸದಸ್ಯ ಆಯೋಗಕ್ಕೆ ಒಪ್ಪಿಸಬೇಕು ಎಂಬ ವಾದ ಸಮರ್ಥನೀಯವಲ್ಲ, ಸಕಾಲಿಕವಲ್ಲ. ಯಾವ ವಿಷಯದಲ್ಲೇ ಆಗಲಿ ಕೇಂದ್ರ ಸರಕಾರದಂಥ ಒಂದು ಸರಕಾರ ನಿಷ್ಪಕ್ಷಪಾತವಾಗಿ ವಿಚಾರಮಾಡಿ ಒಂದು ಸರಿಯಾದ ನಿಲುವನ್ನು, ನೀತಿಯನ್ನು ಅನುಸರಿಸಬೇಕಾಗಿದ್ದು ಅಗತ್ಯ. ರಾಷ್ಟ್ರದ ಐಕ್ಯತೆಯನ್ನು ಕಾಪಾಡಿಕೊಳ್ಳುವ ಒಂದು ದೃಷ್ಟಿ ಇರಬೇಕು. ಯಾರದಾದರೂ ಒತ್ತಡಕ್ಕೆ ಮಣಿದು ಅವಸರದಲ್ಲಿ ಒಂದು ತೀರ್ಮಾನ ಮಾಡಿದರೆ ದೇಶಕ್ಕೆ ಗಂಡಾಂತರ ಒದಗುತ್ತದೆ, ಇದನ್ನು ಒಪ್ಪಿಕೊಳ್ಳಬೇಕು. ಯಾವಾಗಲೂ ಒಂದು ನಿಷ್ಪಕ್ಷಪಾತ ದೃಷ್ಟಿಯಿಂದ ನೋಡಬೇಕು. ಹಿಂದೆ ಎಷ್ಟೋ ಕಮಿಷನ್ನುಗಳು ತಮ್ಮ ವರದಿಯನ್ನು ಸಲ್ಲಿಸಿವೆ. ಜೆ. ವಿ. ಪಿ. ರಿಪೋರ್ಟಿದೆ, ಧಾರ್ ಕಮಿಷನ್ ರಿಪೋರ್ಟಿದೆ, ಎಸ್. ಆರ್. ಸಿ ವರದಿ ಇದೆ, ಈ ವರದಿಗಳಲ್ಲಿ ಬಹಳ ಪರಿಶೀಲನೆಮಾಡಿ ವಿಚಾರ ತಿಳಿಸಿದ್ದಾರೆ. ಪಾರ್ಲಿಮೆಂಟಿನಲ್ಲಿ ಮಹಾರಾಷ್ಟ್ರದ ಸದಸ್ಯರು ಈ ಸಂಬಂಧದಲ್ಲಿ ಎಷ್ಟೋ ತಿದ್ದುಪಡಿಗಳನ್ನು ಸೂಚಿಸಿದರು, 30–37 ಮತಗಳು ಅವುಗಳ ಪರವಾಗಿ ಬಂದು ಅವು ವಿಫಲವಾದುವು. ಇಷ್ಟೆಲ್ಲಾ ಆದಮೇಲೆ ಕೂಡ ಇನ್ನೂ ಈ ಸಮಸ್ಯೆ ಜೀವಂತವಾಗಿಯೇ ಇದೆಯೆ ? ಈಗಲೂ ಕೂಡ ಮಹಾರಾಷ್ಟ್ರದವರನ್ನು ಸಮಾಧಾನಪಡಿಸುವುದಕ್ಕೆ ಪ್ರಯತ್ನಮಾಡುವುದಾದರೆ ಅದರಿಂದ ತೊಂದರೆಯಾಗುತ್ತದೆ. ಇನ್ನೂ ಭಿನ್ನತೆಗೆ ಅವಕಾಶವಾಗುತ್ತದೆ. ನ್ಯಾಯವಾಗಿ ಕೆಲವು ವಿಭಾಗ ಮಾಡುವುದಕ್ಕೆ ಅಭ್ಯಂತರವಿಲ್ಲ. ಈ ದಿವಸ ಕೃಷ್ಣರವರು ಅಣಿಯುವರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಒಂದೇ ಭಾಷೆ ಮಾತನಾಡುವ ಬಹುಜನರಿಂದ ಕೂಡಿದ ರಾಜ್ಯಗಳನ್ನು ಆಡಳಿತದ ಹಿತದೃಷ್ಟಿಯಿಂದ, ಪ್ರಾದೇಶಿಕ ಅಭಿವೃದ್ಧಿಯ ಹಿತದೃಷ್ಟಿಯಿಂದ ಅಚ್ಚುಕಟ್ಟಾಗಿ ಮಾಡಬೇಕಾದ ಒಂದು ಕಾಲ ಬರಬಹುದು.

(ಶ್ರೀ ಎಸ್. ಗೋಪಾಲಗೌಡ)

ನಾಗಪುರದಿಂದ ನಿಂತು ದೃಷ್ಟಿಹರಿಸಿ ನೋಡಿದರೆ ಮುಂಬೈನಿಂದ ನಾಗಪುರದಂತಹ ಪ್ರದೇಶವನ್ನು ಆಳುವುದು ಸರಿಯೇ, ಸಾಧ್ಯವೇ ಎಂದು ಅನಿಸುತ್ತದೆ. ಮುಂಬೈನಿಂದ ನಾಗಪುರಕ್ಕೆ ಹೋಗಿ ಒಂದು ಅಧಿವೇಶನವನ್ನು ಅವರು ಅಲ್ಲಿ ಮಾಡುತ್ತಾರೆ, ಅವರ ತೃಪ್ತಿಗಾಗಿ, ಆದರೆ ನಾಗಪುರದ ಸುತ್ತಮುತ್ತಲೂ, ವಿಂಧ್ಯಪ್ರದೇಶದವರು ಯಾರಿದ್ದಾರೆ ಅವರ ಮೇಲೆ ಆಡಳಿತವನ್ನು ನೋಡಿಕೊಳ್ಳುವುದಕ್ಕೆ ಮುಂಬೈ ಸರ್ಕಾರದಿಂದ ಆದೀತೇ ಎಂಬುದನ್ನು ವಿಮರ್ಶೆ ಮಾಡಬೇಕಾದೀತು. ಏಕೆಂದರೆ ಇವತ್ತು ಬಹಳ ದಿವಸದಿಂದ ತಡೆದು ಹಿಡಿದಿದ್ದ ಪಂಜಾಬಿ ಸುಬಾವನ್ನು ಸರ್ಕಾರ ಕೊಡಲೇಬೇಕಾಯಿತು. ಅದು ತಾರಾಸಿಂಗ್ ಅವರಿಗೆ ತೃಪ್ತಿ ಆಗಿಲ್ಲ, ಅದು ಬೇರೆ ಮಾತು, ನಾನು ಅದನ್ನು ಬೆದರಿಕೆ ರೂಪದಲ್ಲಿ ಮರಾಠಿ ಮುಖಂಡರಿಗೆ ಹೇಳುತ್ತಿಲ್ಲ. ಅದು ನನಗೆ ಅನುಕೂಲವಾಗಿದೆ, ಆದ್ದರಿಂದ ಅದಕ್ಕೆ ಬೆಂಬಲ ಕೊಡಬೇಕೆಂದು ಅದನ್ನು ಮುಂದೆ ಇಡುತ್ತಾ ಇಲ್ಲ, ಅಂತಹ ಸನ್ನಿವೇಶ ಬರಬಹುದು. ಸದಾ ಕಾಲಕ್ಕೂ ಯಾವುದೋ ಒಂದು ಪ್ರದೇಶವನ್ನು ನಮ್ಮ ಅನುಕೂಲಕ್ಕೆ ಒಂದು ಹಿಂಟರ್‌ಲ್ಯಾಂಡ್ ಆಗಿ ಇಡುವುದಕ್ಕೆ ಶಕ್ಯವಿಲ್ಲ. ಬಹಳ ದೊಡ್ಡ ಪ್ರದೇಶವಾಗಿರಬಹುದು. ಅದರಲ್ಲಿ ಕೆಲವು ಪಟ್ಟಣಗಳನ್ನು ಕೆಲವು ಹಳ್ಳಿಗಳನ್ನು ಮಾತ್ರ ತೆಗೆದುಕೊಂಡು ಅದನ್ನು ಸುಮ್ಮನೆ ಇಟ್ಟು ಬಿಡಬಹುದು, ಆಗ ಕೆಲವು ಪ್ರದೇಶದ ಕೆಲವು ಜನ ಹಿಂದುಳಿಯುತ್ತಾರೆ, ಆದಿವಾಸಿಗಳಂತೆ ಹಿಂದೆ ಬೀಳುತ್ತಾರೆ ಆಗ ಬೇರೆ ಒಂದು ಪ್ರವೃತ್ತಿ ಆ ಜನರಲ್ಲಿ ಉಂಟಾಗಬಹುದು ; ಅವರನ್ನು ಸಮಾಧಾನ ಮಾಡುವುದಕ್ಕೆ ಪ್ರಯತ್ನ ಮಾಡಬೇಕಾಗಬಹುದು ಅದು ಬೇರೆ ಮಾತು. ಆದ್ದರಿಂದ ಇವತ್ತು ಈ ಭಾಗ ಏನಿದೆ ಈ ಮರಾಠಿ ಸ್ನೇಹಿತರು ಬೇಡುತ್ತಾ ಇದ್ದಾರೆ, ಕಾರವಾರ, ಸೂಪ, ಹಳಿಯಾಳ ಇವುಗಳನ್ನು ತೆಗೆದುಕೊಂಡರೆ ದಾಂಡೇಲಿಯಂತಹ ಯೋಗ್ಯವಾದ ಕಾಡು ಬಹುಶಃ ನಮ್ಮ ಭಾರತದಲ್ಲೇ ಬೇರೆ ಎಲ್ಲೂ ಇಲ್ಲ ಎಂದು ಅನಿಸುತ್ತದೆ. ಕಾರವಾರ ಬಂದರು, ಜಗತ್ತಿನಲ್ಲೇ 3ನೆಯ ಪ್ರಕೃತಿದತ್ತವಾದ ಬಂದರು, ಅಂತಹ ಒಂದು ಬಂದರು ಇದೆ. ಅಲ್ಲಿ ನಾನು ನೋಡಿದ್ದೇನೆ. ಲೈಟ್ ಹೌಸ್‌ನಲ್ಲಿ ಕೆಲಸ ಮಾಡತಕ್ಕ ಕೆಲವು ಮರಾಠಿಗರನ್ನು ಬಿಟ್ಟರೆ ಉಳಿದವರೆಲ್ಲರೂ ಕನ್ನಡಿಗರು. ಅವರ ವಿಷಯದಲ್ಲಿ ತಮ್ಮ ಕಬಂಧಭಾಹುವನ್ನು ಬಹಳ ದೂರ ಹೋಗಿ ಇರಿಸಬಾರದು. ನಾವೆಲ್ಲಾ ಒಂದೇ ದೇಶದಲ್ಲಿದ್ದೇವೆ, ಒಂದೇ ಸಿಟಿಜನ್‌ಷಿಪ್ ಇದೆ. ರಾಷ್ಟ್ರದ ರಕ್ಷಣೆಯನ್ನು ಮಾಡುವುದಕ್ಕೆ ನಾವೆಲ್ಲಾ ಒಂದಾಗಿದ್ದೇವೆ. ಚವಾಣ್‌ರವರು ರಕ್ಷಣಾ ಮಂತ್ರಿಗಳಾಗಿದ್ದುಕೊಂಡು ದೇಶವನ್ನು ಸಂರಕ್ಷಣೆ ಮಾಡಿದವರಾಗಿದ್ದಾರೆ. ಅವರು ಯುದ್ಧಕ್ಕೆ ಹೋಗಿದ್ದ ನಮ್ಮ ಸೈನಿಕರಿಗೆ ಬೆಂಬಲ ಕೊಟ್ಟಿದ್ದಾರೆ, ನಾವು ಬೆಂಬಲ ಕೊಟ್ಟಿದ್ದೇವೆ, ಎಲ್ಲರೂ ಒಂದಾಗಿ ಕೆಲಸ ಮಾಡಿದ್ದೇವೆ. ಹಾಗಿರುವಾಗ ದೇಶಕ್ಕೆ ಧಕ್ಕೆ ಬರುವ ರೀತಿಯಲ್ಲಿ ಜವಾಬ್ದಾರಿ ಸ್ಥಾನದಲ್ಲಿರುವವರು ವರ್ತಿಸಬಾರದು. ಆದ್ದರಿಂದ ಮತ್ತೆ ಮತ್ತೆ ಹೇಳುತ್ತೇನೆ. ಈ ಒಂದು ಭಾಗದ ಮೇಲೆ ಮಹಾರಾಷ್ಟ್ರದ ಕೈ ಚಾಚಿರತಕ್ಕದ್ದು ಏನಿದೆ ಇದು ಭಾಷೆಯನ್ನು ಆಧಾರವಾಗಿಟ್ಟುಕೊಂಡು ಹೋಗಿರುವುದೇನಿದೆ ಅಷ್ಟುದೂರ ಯಾರೂ ಹೋಗಬೇಕಾದ್ದಿಲ್ಲ. ಕೇವಲ ಸಮೃದ್ಧತೆಯ ಆಧಾರದ ಮೇಲೂ ಕೂಡ ಹೋಗಬೇಕಾದ್ದಿಲ್ಲ, ರಾಷ್ಟ್ರದ ಹಿತವನ್ನು ಗಮನಿಸಿ ಒಟ್ಟಾಗಿ ನಡೆದರೆ ಒಳ್ಳೆಯದಾದೀತು. ಆದ್ದರಿಂದ ನಾನು ಹೇಳುತ್ತೇನೆ ಈ ಭಾಷೆಯ ಆಧಾರದ ಮೇಲೆ ಸಮೃದ್ಧತೆ ಮತ್ತು ಜನಗಳ ಅಭಿಪ್ರಾಯದ ಮೇಲೆ ಈ ಭಾಗಗಳನ್ನು ಪುನರ್‌ವಿಂಗಡಿಸಬೇಕೆನ್ನುವ ಮಾತಿನಲ್ಲಿ ನನಗೆ ಅನಿಸುತ್ತದೆ, ಈ ರಾಜ್ಯದ ದೃಷ್ಟಿಯಿಂದ ಇವತ್ತು ಕಟ್ಟುನಿಟ್ಟಾಗಿ ಈ ಸೂತ್ರವನ್ನು ಅಂಗೀಕಾರ ಮಾಡುವುದಾದರೆ ನಮ್ಮ ಸ್ನೇಹಿತರು ಹೇಳಿದ ಹಾಗೆ ಹೊಸಪೇಟೆಯಿಂದ ಹಿಡಿದುಕೊಂಡು ಆಲೂರು ಆದವಾನಿ, ರಾಯದುರ್ಗ ಆ ಪ್ರದೇಶಗಳನ್ನು ತೆಗೆದುಕೊಳ್ಳುವುದು ಇರಲಿ, ಅವುಗಳನ್ನು ಪಡೆದುಕೊಂಡು ಬಹುಶಃ ಹಿಂದಿನ ಮಾಹಿತಿಯನ್ನು ನೋಡಿದ್ದೇ ಆದರೆ ಬೆಂಗಳೂರನ್ನು ಆಂಧ್ರದವರಿಗೆ ಕೊಡಬೇಕಾಗುತ್ತದೆ. ಈಗ ಸಂಜೀವ ರೆಡ್ಡಿಯವರು ಕೇಳುತ್ತಾರೋ ಇಲ್ಲವೋ, ಅದೇನೇ ಇರಲಿ, ಬೆಂಗಳೂರಿನ ಕೆಂಪೇಗೌಡರೂ ಕೂಡ ಆಂಧ್ರದವರು, ತೆಲುಗು ಮಾತನಾಡುವವರು ಎಂಬ ಒಂದು ವಾದವನ್ನು ಅವರು ಒಡ್ಡುತ್ತಾರೆ. ಒಂದು ವೇಳೆ ಭಾಷೆ, ಸಮೃದ್ಧತೆ ಈ ಎರಡನ್ನೇ ಆಧಾರವಾಗಿಟ್ಟುಕೊಂಡರೆ ಮಹಾರಾಷ್ಟ್ರದವರಿಗೆ ನಾವು ಯೂನಿಲ್ಯಾಟರಲ್ ಆಗಿ 300 ಗ್ರಾಮಗಳನ್ನು ಒಪ್ಪಿಸುತ್ತೇವೆ ಎಂದು ಹೊರಟಿದ್ದಿರೋ ಹಾಗೆ ನಾನು ಕೂಡ ಅದೇ ರೀತಿ ಆಧುನಿಕ ದಾನಶೂರ ಕರ್ಣನಂತೆ ಯಲಹಂಕದ ಪ್ರದೇಶ ಹೈದರಾಬಾದಿಗೆ ಹೋಗಬೇಕು ಎಂದು ಒತ್ತಾಯಪಡಿಸಬೇಕಾಗುತ್ತದೆ. ಇದನ್ನು ತಾವು ವಿಚಾರ ಮಾಡಿ ಇದನ್ನು ತಾವೇ ಮುಚ್ಚಿಕೊಳ್ಳಿ. ಇದು ರಾಜಕಾರಣವೆ, ಇದರಲ್ಲಿ ಅರ್ಥವೇನಿದೆ? ಆದ್ದರಿಂದ ಈ ಮಾತನ್ನು ಹೇಳುತ್ತೇನೆ, ಈ ಸೂತ್ರ ಕೂಡ ನನಗೆ ಸಮರ್ಪಕವಾಗಿಲ್ಲ. ಹಳ್ಳಿಯನ್ನೇ ಆಧಾರವಾಗಿಟ್ಟುಕೊಂಡು ಈ ಗಡಿಭಾಗಗಳನ್ನು ನಿರ್ಣಯಿಸತಕ್ಕದ್ದು ಸಮಂಜಸವಾದುದಲ್ಲ. ಇಷ್ಟು ಹೇಳಿದ ಮೇಲೆ ಇನ್ನು ನಮ್ಮ ಸಮಸ್ಯೆಯನ್ನು ಯಾವರೀತಿ ಪರಿಹರಿಸಿಕೊಳ್ಳಬೇಕು ಎನ್ನುವ ಮಾತು ಬರುತ್ತದೆ. ನಾನು ಮೊದಲೇ

ಹೇಳಿದ್ದೇನೆ, ನಮ್ಮ ಸರ್ಕಾರ ತಿಳಿದಿರುವಂಥ ಸಣ್ಣಪುಟ್ಟ ಹೊಂದಾಣಿಕೆ ಮಾಡಿಕೊಳ್ಳಬಹುದು ಎಂಬ ನಿಲುವು ಅಷ್ಟು ಸಮರ್ಪಕವಾದ ನಿಲುವಲ್ಲ. ಅನೇಕ ಮಾತುಗಳನ್ನು ಹೇಳಿದ್ದಾರೆ. ಸಣ್ಣಪುಟ್ಟ ಅನ್ನುವುದನ್ನು ಅವರು ಡಿಫೈನ್ ಮಾಡಿಲ್ಲ. ಒಂದು ವೇಳೆ ನಾಳೆ ಶ್ರೀಮಾನ್ ನಿಜಲಿಂಗಪ್ಪನವರು ಮತ್ತು ನಾಯಕ್ ಅವರ ಅಭಿಪ್ರಾಯದಲ್ಲಿ ಆ ರೀತಿ ಹೊಂದಾಣಿಕೆಗೆ ಬರುವುದಾದರೆ ನಾವು ಮಹಾರಾಷ್ಟ್ರದ ತೀರಾ ಪಕ್ಕದಲ್ಲಿರತಕ್ಕ ಗ್ರಾಮಗಳನ್ನು ಅವರಿಗೆ ಬಿಟ್ಟುಕೊಟ್ಟು ನಮಗೆ ಬರಬೇಕಾದ ಅಕ್ಕಲ್‌ಕೋಟ್, ಜತ್, ಸೋಲಾಪುರ ಇವುಗಳನ್ನು ತೆಗೆದುಕೊಳ್ಳುವುದಕ್ಕೆ ಅಂತಹ ಒಂದು ತೀರ್ಮಾನವನ್ನು ಮಾಡಿಕೊಳ್ಳುವುದಕ್ಕೆ ಅವರಿಗೆ ಯಾವತ್ತೂ ಅಧಿಕಾರ ಇದೆ. ಅಧಿಕಾರ ಇಲ್ಲ ಎಂದು ಪ್ರಶ್ನೆ ಮಾಡುವವರು ಯಾರು ? ಆದರೆ ಅಲ್ಲಿಯ ಜನರು ಒಪ್ಪಬೇಕು, ಅವರಿಗೆ ಸಮಾಧಾನವಾಗಬೇಕು. ಆ ರೀತಿ ಹೊಂದಾಣಿಕೆಯಾದರೆ ಎರಡು ಕಡೆಯ ಜನಕ್ಕೆ ಸಮಾಧಾನವಾಗುತ್ತದೆ. ಅದನ್ನು ಕೊನೇಪಕ್ಷ ಎರಡೂ ಸರ್ಕಾರಗಳೂ ಯಾವತ್ತೂ ಮಾಡುವುದಕ್ಕೆ ಅವಕಾಶವಿದ್ದೇ ಇದೆ. ಕೇಂದ್ರದವರು ನೆರವು ಕೊಡಬೇಕು. ಹೋಂ ಮಿನಿಸ್ಟ್ರಿಯವರು ಸಹಾಯ ಮಾಡಬೇಕು. ಇದು ಅವರು ಮಾಡಬೇಕಾದ ಕೆಲಸ ಇದೆ. ಇವತ್ತು ಆದವಾನಿ, ಆಲೂರು, ರಾಯದುರ್ಗ ಇವುಗಳನ್ನು ಯಾವ ಒಂದು ರಾಜಕೀಯ ಹೊಂದಾಣಿಕೆಗಾಗಿ ಬಹಳ ನಿಷ್ಠೂರವಾಗಿ ಬಳ್ಳಾರಿ ಜಿಲ್ಲೆಯಿಂದ ತೆಗೆದು ಹಾಕಿದರು? ಹತ್ತು ವರ್ಷವಾದರೂ ಕೂಡ ಇನ್ನೂ ಕೂಡ ನಾವು ಅವುಗಳನ್ನು ಪಡೆದುಕೊಳ್ಳುವುದಕ್ಕೆ ಆಗಿಲ್ಲ. ಇವತ್ತೂ ಕೂಡ ನೋಡುತ್ತಾ ಇದ್ದೇವೆ ಆದವಾನಿಯಿಂದ ಬಳ್ಳಾರಿಗೆ ಬಸ್ಸಿನಲ್ಲಿ ಹೋಗಲೇಬೇಕು, ಬರಲೇಬೇಕಾಗಿದೆ. ನಾವು ನಮ್ಮ ರಾಜಕೀಯದ ಹಿತವನ್ನು ಲಕ್ಷದಲ್ಲಿಟ್ಟುಕೊಂಡು ಯಾವುದಾದರೂ ಭಾಗವನ್ನು ಕತ್ತರಿಸಿದ ಮಾತ್ರಕ್ಕೆ ಅದು ಸರಿಹೋಗುವುದಿಲ್ಲ. ಜನತೆ ಆದಕ್ಕೆ ಅನುವರ್ತಿಗಳಾಗಿ ನಡೆಯಬೇಕು ಏಕೆಂದರೆ ದೈವಿಕವಾಗಿ, ಆರ್ಗ್ಯಾನಿಕ್ ಆಗಿ ಜನ ಜೀವನ ಅದಕ್ಕೆ ಹೆಣೆದುಕೊಂಡಿರುತ್ತದೆ. ಯಾವುದಾದರೂ ಭಾಗವನ್ನು ಬೇರ್ಪಡಿಸಿದರೆ ಅದರಿಂದ ಅವರಿಗೆ ಅಪಾಯವಾಗುತ್ತದೆ. ಇವತ್ತು ಬೆಳಗಾಂನ್ನು ತೆಗೆದುಕೊಂಡರೆ; ಬೆಳಗಾಂ ನಮಗೆ ತಲೆಯಂತೆ ಇದೆ, ಅದನ್ನು ಕತ್ತರಿಸಿ ಹಾಕಿದರೆ ಇಡೀ ಶರೀರಕ್ಕೆ ಅಪಾಯವಾಗುವಂತೆ ನಮ್ಮ ದೇಶಕ್ಕೆ ಅಪಾಯವಾಗುವಂತಹ ಪರಿಸ್ಥಿತಿ ಇದೆ. ಯಾರೋ ಒಬ್ಬರು ಸ್ನೇಹಿತರು ಬೆಳಗಾಂ ಹೋದರೆ ಏನಂತೆ ಬೈಲಹೊಂಗಲವನ್ನು ಇಟ್ಟುಕೊಳ್ಳಬಹುದು ಎಂದು ಹೇಳಿದರು. ಆನೆ ತಲೆ ಕತ್ತರಿಸಿ ಹಾಕಿ ಅದರ ಸೊಂಡಿಲು ಇಟ್ಟುಕೊಂಡ ಹಾಗೆ ಸೊಂಡಿಲು ಇಟ್ಟುಕೊಂಡಿರುವುದಕ್ಕೆ ನಾವು ತಯಾರಾಗಿಲ್ಲ. ನಮಗೆ ಈ ಹೊಸ ಸೊಂಡಿಲು ಬೇಡ. ಬೆಳಗಾಂ ಹೋದರೆ ಬೈಲ್‌ಹೊಂಗಲ ಇಟ್ಟುಕೊಳ್ಳಿ, ಎಂಬುದು ಎಂತಹ ಒಳ್ಳೆಯ ಸಲಹೆ ನೋಡಿ !

Mr. SPEAKER.—What I am saying is there will be many members participating. I have received a large number of names and tomorrow we will have only 3½ hours. Unless we sit in the afternoon, this will be over. What shall we do now? or shall we sit a little longer to-day?

SRI G. V. GOWDA (Palya).—Even then it will not be finished.

Mr. SPEAKER.—The whips may kindly tell me tomorrow before I come to the House what arrangements have been made and who are all the persons participating in the debate.

The House will now adjourn and meet tomorrow at 8-30 A.M.

The House adjourned at Six of the Clock to meet again at Thirty Minutes past Eight of the Clock on Saturday, the 23rd July 1966.